
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

17 ಆಗಸ್ಟ್ 2016 ಪುಟ 20 ರೂ. 15/-



ಮಹಾಶ್ವೇತಾ ದೇವಿ






ಒಬ್ಬ ತಂದೆಯ ಕಣ್ಣೀರು



ಮಂಡ್ಯ ಮನ್‌ಮುಲ್ ಅಕ್ರಮಕ್ಕೆ ತಕ್ಕ ಶಾಸ್ತಿ



ಕೊಡಗು ಚೆಡ್ಡಿಗಳ ಜೊತೆ ಅರಣ್ಯ ಇಲಾಖೆ ಮಸಲತ್ತು




ಮ್ಯಾಗಿಯ ಆತ್ಮಕಥೆಯೂ ದೇಶಪಾಂಡೆಯ ದ್ರೋಹವೂ



ಬೆಜವಾಡ ವಿಲ್ಸನ್‌ರ ಸಫಾಯಿ ಹೋರಾಟ



ಆಗಸ್ಟ್ 15ರಂದು ನೀವು ಮಾತಾಡಬೇಡಿ ಮಿ.ಮೋ




ಮಾನ್ಯ ಪ್ರಧಾನ ಮಂತ್ರಿಗಳೇ,

'ಆ ದೂರದ ಗ್ರಾಮದ ಎಳೆಬಾಲೆ ನನಗೊಂದು ಪತ್ರ ಬರೆದಿದ್ದಾಳೆ. ಆಕೆ ತನ್ನೂರಿನಲ್ಲಿ ಶೌಚಾಲಯ ಕಟ್ಟಿಸಿದ್ದಕ್ಕಾಗಿ ಸರ್ಕಾರಕ್ಕೆ ಕೃತಜ್ಞತೆ ಅರ್ಪಿಸಿದ್ದಾಳೆ. (ಚಪ್ಪಾಳೆ) ಅದೇ ಸಂದರ್ಭದಲ್ಲಿ ಇನ್ನೊಂದು ಮನವಿಯನ್ನು ಮಾಡಿದ್ದಾಳೆ. ತನ್ನೂರಿನಿಂದ ಪಟ್ಟಣಕ್ಕೆ ಕಾಲೇಜಿಗೆ ಹೋಗಲು ಬಸ್ಸಿಲ್ಲ, ಏಕೆಂದರೆ, ಆ ಮಾರ್ಗದ ರಸ್ತೆಗಳು ಅತ್ಯಂತ ಕೆಟ್ಟದಾಗಿರುವುದರಿಂದ ಯಾರೂ ಬಸ್ಸು ಓಡಿಸಲು ಮುಂದೆ ಬರುತ್ತಿಲ್ಲ ಎಂಬುದು ಆಕೆಯ ಅಳಲು. ಹಾಗೆಯೇ ದಕ್ಷಿಣದ ತುದಿಯ ಒಂದು ಗ್ರಾಮದ ರೈತ ಇನ್ನೊಂದು ಪತ್ರವನ್ನು ಕಳಿಸಿದ್ದಾರೆ. ಆ ಪತ್ರದಲ್ಲೇನಿದೆ ಎಂಬುದನ್ನು ಹೇಳುವ ಮುನ್ನ ನಿಮಗಿನ್ನೊಂದು ಮಾತು ಹೇಳಬೇಕು. ಆತ ಈ ಪತ್ರವನ್ನು ಬರೆದು ಪೋಸ್ಟ್ ಮಾಡಲು 10 ಕಿ.ಮೀ. ದೂರದ ದೊಡ್ಡ ಗ್ರಾಮಕ್ಕೆ ಬರಬೇಕಿದೆ. ಆತನೂರಿನಲ್ಲೇ ಪೋಸ್ಟ್ ಮಾಡಲು ನಾವು ವ್ಯವಸ್ಥೆ ಮಾಡಲಾಗದೇ? ಪೋಸ್ಟ್ ಮಾಡುವುದೆಂದರೆ, ಪತ್ರ ಬರೆದು ಅಂಚೆಯ ಡಬ್ಬಕ್ಕೆ ಹಾಕುವುದಕ್ಕಲ್ಲ, ಇಂಟರ್‌ನೆಟ್‌ನಲ್ಲಿ ಪೋಸ್ಟ್ ಮಾಡುವುದು; ತನ್ನೂರಿನಲ್ಲೇ. (ಚಪ್ಪಾಳೆ) ಹೌದು. ನಮ್ಮ ಎಲ್ಲಾ ಹಳೆಯ ಅಂಚೆ ಕಚೇರಿಗಳನ್ನು ನಾವು ಆಧುನಿಕ ಜಾಲತಾಣಗಳ ಸಂಪರ್ಕ ಕೇಂದ್ರವನ್ನಾಗಿಸುವುದು ಅಸಾಧ್ಯವೇನಲ್ಲ, ಪ್ರತಿ ಊರಿನ ಅಂಚೆ ಕಚೇರಿ, ಅಂಗನವಾಡಿ, ಶಾಲೆ, ಆಸ್ಪತ್ರೆ ಎಲ್ಲವೂ ಇಂಟರ್‌ನೆಟ್ ಕೇಂದ್ರಗಳೂ ಆಗಬೇಕು. ಪ್ರತಿ ಊರಿಗೆ ಓಡಾಡುವ ಬಸ್ಸಿನಲ್ಲೂ ವೈಫೈ ದೊರೆಯುವಂತಾಗಬೇಕು. (ಚಪ್ಪಾಳೆಯೋ ಚಪ್ಪಾಳೆ)

ಇರಲಿ, ಆತನ ಪತ್ರದಲ್ಲಿನ ವಿಷಯಕ್ಕೆ ಬರೋಣ. ಆತ ಕೇಳುತ್ತಿದ್ದಾರೆ, ತಾನು ಬೆಳೆದ ತರಕಾರಿ-ಹಣ್ಣುಗಳನ್ನು ಸಂಗ್ರಹಿಸಿಡಲು ಕೋಲ್ಡ್ ಸ್ಟೋರೇಜ್‌ನ ವ್ಯವಸ್ಥೆ ಮಾಡಿದರೆ ಸಾಕು, ಸರ್ಕಾರದಿಂದ ತನಗ್ಯಾವ ಸಹಾಯವೂ ಬೇಡ ಎಂದು ಆತ ನಮಗೆ ಆದೇಶವಿತ್ತಿದ್ದಾನೆ. (ಮತ್ತೆ ಚಪ್ಪಾಳೆ) ಈ ಆದೇಶ ಕೊಡಿ ಎಂದು ನಾನೇ 'ಮನ್ ಕೀ ಬಾತ್'ನಲ್ಲಿ ಕೇಳಿಕೊಂಡಿದ್ದೆ. ಈ ದಿನ, ಭಾರತದ ಸ್ವಾತಂತ್ರ್ಯ ಮಹೋತ್ಸವದ 70ನೇ ವರ್ಷಾಚರಣೆ ಸಂದರ್ಭದಲ್ಲಿ ದೇಶದ ಪ್ರಧಾನ ಸೇವಕನಾದ ನನಗಲ್ಲದೇ ಅವರು ಇನ್ನಾರಿಗೆ ಆದೇಶವೀಯಬೇಕು? (ಚಪ್ಪಾಳೆ) ನನ್ನ ಈ ಮನವಿಗೆ ಓಗೊಟ್ಟು ಬಂದಿರುವ ಪ್ರತಿಕ್ರಿಯೆ ನೋಡಿ ನಾನು ಮೂಕವಿಸ್ಮಿತನಾಗಿದ್ದೇನೆ. ದೇಶದ ಜನರು ಪ್ರಧಾನಿಯೊಂದಿಗೆ ನೇರವಾಗಿ ಮಾತನಾಡಲಾರಂಭಿಸಿದ್ದಾರೆ. ಪತ್ರಗಳು, ಎಸ್ಸೆಮ್ಮೆಸ್‌ಗಳು, ವಾಟ್ಸಾಪ್ ಸಂದೇಶಗಳು, ಫೇಸ್‌ಬುಕ್‌ನಲ್ಲಿ ಬಂದಿರುವ ಪ್ರತಿಕ್ರಿಯೆಗಳು, ನಮ್ಮ ಅಧಿಕೃತ ಜಾಲತಾಣಕ್ಕೆ ಬಂದಿರುವ ಮನವಿಗಳು ಎಲ್ಲವೂ ಸೇರಿದರೆ ಒಂದೂವರೆ ಕೋಟಿ! (ಚಪ್ಪಾಳೆಯ ಸುರಿಮಳೆ)'

ಬಹುಶಃ ಈ ಆಗಸ್ಟ್ 15ರಂದು ನಿಮ್ಮ ಭಾಷಣ ಈ ರೀತಿ ಇರಬಹುದು. ಇನ್ನೂ ಸರಿಯಾಗಿ ಹೇಳಬೇಕೆಂದರೆ, ಮನ್ ಕೀ ಬಾತ್‌ನ ಆ ಭಾಷಣಕ್ಕಿಂತ ಮುಂಚೆಯೇ ಆಗಸ್ಟ್ 15ರ ಭಾಷಣ ಸಿದ್ಧವಾಗಿರಲೂಬಹುದು. ಚಪ್ಪಾಳೆ ಯನ್ನೇನೂ ಸಿದ್ಧಪಡಿಸುವ ಅಗತ್ಯವಿಲ್ಲ, ಚಪ್ಪಾಳೆಯು ದೆಹಲಿಯ ಆ ಪರೇಡ್‌ನಲ್ಲಿ ಮಾತ್ರ ಬೀಳುವುದಿಲ್ಲ, ದೇಶದ ಮೂಲೆಮೂಲೆಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಟಿವಿ ಮಾಧ್ಯಮಗಳಲ್ಲೂ ಚಪ್ಪಾಳೆಯೋ ಚಪ್ಪಾಳೆ ಬೀಳುತ್ತಿರುತ್ತದೆ. ಭಕ್ತರು ಕೇವಲ ಇಂಟರ್‌ನೆಟ್‌ನಲ್ಲಿ ಮಾತ್ರವಲ್ಲ, ಬೀದಿ ಬೀದಿಗಳಲ್ಲಿ ನಿಮ್ಮನ್ನು ಕೊಂಡಾಡಲು ಬೇಕಾದ ಮಾನಸಿಕ ಸಿದ್ಧತೆಯನ್ನು ಮಾಡಿಕೊಂಡು ಕೆಲವು ವರ್ಷಗಳೇ ಆಗಿವೆ. ಹಾಗಾಗಿ ಅದಕ್ಕೆ ಪೂರಕವಾಗಿ ಈ ಮನ್ ಕೀ ಬಾತ್ ನಡೆದಿದೆ.

'ದೇಶದ 125 ಕೋಟಿ ಭಾರತೀಯರ ದನಿಯನ್ನು ಪ್ರತಿನಿಧಿಸುವ ಆ.15ರ ನನ್ನ ಭಾಷಣಕ್ಕಾಗಿ ನಿಮ್ಮ ವಿಚಾರಗಳನನ್ನು ಹಂಚಿಕೊಳ್ಳಿ' ಎಂಬ ನಿಮ್ಮ ಮನವಿಗೆ, 'ಸರ್, ದಲಿತರ ಮೇಲಿನ ದೌರ್ಜನ್ಯ ಗೋರಕ್ಷಕರು, ಕಾಶ್ಮೀರ, ಅಖ್ಲಾಕ್, ರೈತರ ಆತ್ಮಹತ್ಯೆ ಬೇಳೆಕಾಳುಗಳ ಬೆಲೆ ಬಗ್ಗೆ ದಯವಿಟ್ಟು ಮಾತನಾಡಿ. ಈ ಕುರಿತು ನಿಮ್ಮ ಮಾತುಗಳನ್ನು ಕೇಳಲು ಜನ ತೀವ್ರ ಕಾತರರಾಗಿದ್ದಾರೆ' - ಎಂದು ಅರವಿಂದ ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಓದಿದ್ದೇವೆ. ಬಹುಶಃ ಅವರ ಉದ್ದೇಶ ಇದಾಗಿರಬಹುದು. ವಾಚಾಳಿಯಾದ ನೀವು, ಜಗತ್ತಿನಲ್ಲಿ ಇರುವ ಇಲ್ಲದಿರುವ ನೂರಾರು ಸಂಗತಿಗಳ ಕುರಿತು ಮಾತನಾಡುತ್ತಲೇ ಇರುತ್ತೀರಿ. ಆದರೆ, ದೇಶದ ಕಟು ವಾಸ್ತವಗಳ ಬಗ್ಗೆ, ಅದರಲ್ಲೂ ನಿಮ್ಮ ಗೆಳೆಯರಿಂದಲೇ ದೌರ್ಜನ್ಯಕ್ಕೊಳಗಾಗುತ್ತಿರುವ ಸಮುದಾಯಗಳ ಬಗ್ಗೆ ಮಾತಾಡುತ್ತಿಲ್ಲ, ಹಾಗಾಗಿ ನಿಮ್ಮನ್ನು ಬೆತ್ತಲುಗೊಳಿಸಬೇಕು ಎನ್ನುವುದು ಕೇಜ್ರಿವಾಲರು ಅಂದುಕೊಂಡಿದ್ದರೆ ತಪ್ಪೇನಿಲ್ಲ, ನೀವು ಅದಕ್ಕೆ ಸಂಪೂರ್ಣ ಅರ್ಹ ವ್ಯಕ್ತಿ. ಆದರೆ, ಕೇಜ್ರಿವಾಲರ ಜೊತೆ ನನಗೆ ತಕರಾರಿದೆ. ಅದೇನೆಂದರೆ, ಈ ಮೂಲಕ 'ಇಂತಿಂತಹ ವಿಚಾರಗಳ ಕುರಿತು ನೀವು ಮಾತನಾಡುತ್ತಿಲ್ಲ, ಏಕೆಂದರೆ ಒಂದೋ ನಿಮಗೆ ಈ ಸಮುದಾಯಗಳು ಆದ್ಯತೆಯಲ್ಲ; ಅಥವಾ ಈ ಸಮುದಾಯಗಳ ಸಮಸ್ಯೆಗೆ ನೀವೇ ಕಾರಣರಾಗಿದ್ದೀರಿ' ಎಂಬ ಸಂದೇಶವನ್ನು ರವಾನಿಸುವ ಕೇಜ್ರೀವಾಲರ ಉದ್ದೇಶ ಈಡೇರುವುದಿಲ್ಲ.



ಏಕೆಂದರೆ, ನಿಮ್ಮ ಭಾಷಣದ ಮರುದಿನದ ಪತ್ರಿಕೆಗಳಲ್ಲಿ ದೂರದೂರಿನ ಆ ಬಾಲೆಗೆ ನೀವು ಸ್ಪಂದಿಸಿದ ರೀತಿಯೇ ದೊಡ್ಡ ಸುದ್ದಿಯಾಗಿರುತ್ತದೆ. ದಕ್ಷಿಣದ ತುದಿಯ ಕುಗ್ರಾಮದ ರೈತರ ಸಮಸ್ಯೆಗಳಿಗೂ ದೇಶದ ಪ್ರಧಾನಿ ಸ್ವಾತಂತ್ರ್ಯೋತ್ಸವದ ದಿನ ಪ್ರತಿಕ್ರಿಯಿಸಿದರು ಎಂಬುದಕ್ಕೆ ಸಾಕಷ್ಟು ಸ್ಪೇಸ್ ಸಿಕ್ಕಿರುತ್ತದೆ. ಸಾಧ್ಯವಾದರೆ, ಆ ಹುಡುಗಿ ಮತ್ತು ರೈತರನ್ನು ಸಂದರ್ಶಿಸಲು ಮಾಧ್ಯಮಗಳು ಮುಗಿಬಿದ್ದಿರುತ್ತವೆ. ಅವರ ಮೊದಲ ಸಂದರ್ಶನ ಮಾಡಿದ್ದು ಯಾವ ಚಾನೆಲ್ ಅಥವಾ ಪತ್ರಿಕೆ ಎಂಬುದಕ್ಕೆ ಪೈಪೋಟಿ ಏರ್ಪಟ್ಟಿರುತ್ತದೆ. ಅವತ್ತೂ ಕೇಜ್ರೀವಾಲರು ಮತ್ತು ಇತರರು ನೀವು ಏನು ಮಾತಾಡಲಿಲ್ಲ ಎಂಬುದರ ಬಗ್ಗೆ ಮತ್ತೆ ಟ್ವೀಟಿಸುತ್ತಾರೆ. ಅದೂ ಒಂದು ಸಣ್ಣ ಕಾಲಂನಲ್ಲಿ ಸುದ್ದಿಯಾಗಿರುತ್ತದೆ; ಹೆಚ್ಚೆಂದರೆ ಪತ್ರಿಕೆಯಲ್ಲಿ ಒಂದು ಬಾಕ್ಸ್ ಐಟಂ ಅಥವಾ ಟಿವಿಯಲ್ಲಿ ಕೆಳಗೆ ಹರಿಯುವ ಸ್ಕ್ರೋಲ್ ಮಾತ್ರ. ಉಳಿದಂತೆ ಪ್ರೈಮ್‌ಟೈಂ ಮೀಸಲಾಗುವುದು ನಿಮ್ಮ ಭಜನೆಗೆ.

ಇದೇಕೆ ಹೀಗೆ? ಇದಿರುವುದೇ ಹೀಗೆ.. ಇನ್ನೂ ಒಳಹೊಕ್ಕು ನೋಡಿದರೆ, ಸ್ವಾತಂತ್ರ್ಯೋತ್ಸವದ ಭಾಷಣದಲ್ಲೂ ನೀವು ಯಾವ ಅಂಶಗಳನ್ನು ಆರಿಸಿಕೊಂಡಿರುತ್ತೀರೆಂದರೆ, ಅದರಿಂದ ನಿಮ್ಮ ಸ್ನೇಹಿತರಿಗೇ ಅನುಕೂಲವಾಗುತ್ತದೆಯೇ ಹೊರತು ಸ್ಥಳೀಯರಿಗಲ್ಲ, ಉದಾಹರಣೆಗೆ, ಮೇಲಿನ ಎರಡು ಸಂಗತಿಗಳನ್ನೇ ತೆಗೆದುಕೊಳ್ಳೋಣ. ಆ ಹುಡುಗಿ ಕೇಳಿದ್ದು ಗ್ರಾಮೀಣ ರಸ್ತೆ, ದಕ್ಷಿಣದ ತುದಿಯ ರೈತ ಕೇಳಿದ್ದು ಕೋಲ್ಡ್ ಸ್ಟೋರೇಜ್. ನೀವು ಭೂಸ್ವಾಧೀನ ಕಾಯ್ದೆಗೆ ಮಾರಣಾಂತಿಕ ತಿದ್ದುಪಡಿ ತರಲು ಹೊರಟಾಗ ಅದಕ್ಕೆ ಸಮರ್ಥನೆ ಒದಗಿಸಿದ್ದು ಇಂತಹವನ್ನೇ. ಗ್ರಾಮೀಣ ಮೂಲಸೌಕರ್ಯಗಳನ್ನು ಕಲ್ಪಿಸುವುದು, ಕೋಲ್ಡ್ ಸ್ಟೋರೇಜ್‌ಗಳನ್ನು ನಿರ್ಮಿಸಲು ನಮಗೆ ಭೂಮಿ ಬೇಕು. ಅದಕ್ಕಾಗಿ ಸುಲಭದಲ್ಲಿ ರೈತರ ಭೂಮಿ ಕಿತ್ತುಕೊಳ್ಳಲು ನಮಗೆ ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ಆಗಬೇಕು. ನೀವೂ ಹೇಳಿದ್ದಿರಿ, ನಿಮ್ಮ ಮೂಲಸೌಕರ್ಯ ಮಂತ್ರಿ ನಿತಿನ್ ಗಡ್ಕರಿಯೂ ಹೇಳಿದ್ದರು. ಪಾಪ ಗಡ್ಕರಿ ನಿಮ್ಮಷ್ಟು ಚಾಲಾಕಿ ಅಲ್ಲ, ಆತನಿಗೆ ಉದ್ದಿಮೆದಾರರೊಂದಿಗೆ ಡೀಲ್ ಕುದುರಿಸುವುದು ಅಭ್ಯಾಸ. ಜನರಿಗೆ ಮಂಕುಬೂದಿ ಎರಚಿ, ನಿಮ್ಮ ಒಳಿತಿಗೇ ನಿಮ್ಮನ್ನು ಲೂಟಿ ಮಾಡುತ್ತಿದ್ದೇವೆ ಎಂದು ನಂಬಿಸುವುದು ಕಷ್ಟ. ನೀವದನ್ನು ಸ್ವಾತಂತ್ರ್ಯೋತ್ಸವದ ಭಾಷಣದ ಮೂಲಕ ಮಾಡಬಲ್ಲಿರಿ. ಅದಕ್ಕೆ ಸಾಕಷ್ಟು ಮುಂಚೆಯೇ ವ್ಯವಸ್ಥಿತ ತಯಾರಿ ಮಾಡಿಕೊಂಡು, ಮನ್ ಕೀ ಬಾತ್‌ನಲ್ಲೇ ತಾಲೀಮು ಸಹ ಮಾಡಿಕೊಳ್ಳುತ್ತೀರಿ.

ನಿಮ್ಮ ಭಾಷಣ ಮುಂದುವರೆಯುತ್ತದೆ. 'ಈ ಎರಡು ವರ್ಷಗಳಲ್ಲಿ ನಾವು ಅಭಿವೃದ್ಧಿಯನ್ನು ಸಾಕಷ್ಟು ಮಾಡಿದ್ದೇವೆ. ಆದರೆ, ನಮಗಿನ್ನೂ ಸಮಾಧಾನವಿಲ್ಲ. ಕೆಲವರಿದ್ದಾರೆ. ಅವರು ದೇಶವನ್ನು ಇನ್ನೂ 200 ವರ್ಷಗಳ ಹಿಂದೆಯೇ ಇಡಲು ಬಯಸುತ್ತಾರೆ. ಅಭಿವೃದ್ಧಿಯ ಫಲವನ್ನು ನಾವು ದೇಶದ ಸಾಮಾನ್ಯ ಜನರಿಗೂ ತಲುಪಿಸಲು ಪ್ರಯತ್ನಿಸಿದರೆ, ಹಳ್ಳಿಗರನ್ನು ನಮ್ಮ ವಿರುದ್ಧ ಎತ್ತಿಕಟ್ಟುತ್ತಾರೆ. ಆ ಹೆಣ್ಣು ಮಗಳು ಶಾಲೆಗೆ ಸರಾಗವಾಗಿ ಹೋಗಬೇಕೆಂದರೆ, ಕೋಲ್ಡ್ ಸ್ಟೋರೇಜ್ ಕಟ್ಟಲು ನಾವು ಮುಂದಾದರೆ, ಅಭಿವೃದ್ಧಿಯ ವಿರೋಧಿಗಳು ಅದಕ್ಕೆ ಅಡ್ಡಗಾಲು ಹಾಕುತ್ತಾರೆ.'

ಯಾರನ್ನು ಯಾರ ವಿರುದ್ಧ ಹೇಗೆ ಎತ್ತಿ ಕಟ್ಟಬೇಕು ಎಂಬುದರಲ್ಲಿ ನಿಮಗೆ ಒಂದು ಪರಿಣಿತಿ ಸಿದ್ಧಿಸಿದೆ. ಅದಕ್ಕೆ ನೀವು ಸ್ವಾತಂತ್ರ್ಯ ಹೋರಾಟವನ್ನು ನೆನಪಿಸುವ ದಿನವನ್ನೂ ಬಳಸಿಕೊಳ್ಳುತ್ತೀರಿ. ನಿಮಗೆ ಅದಕ್ಕಿಂತ ಭಿನ್ನವಾದ ಪಾಠವೇ ಆಗಿಲ್ಲ, ಏಕೆಂದರೆ, ನಿಮ್ಮ ಪರಿವಾರವು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೂ ಇದನ್ನೇ ಮಾಡುತ್ತಿದ್ದಿರಿ. ದೇಶದ ಜನರನ್ನು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಹಚ್ಚುವುದಲ್ಲ; ಇಲ್ಲಿನ ಜನರಲ್ಲೇ ಒಬ್ಬರನ್ನು ಇನ್ನೊಬ್ಬರ ಮೇಲೆ ಎತ್ತಿಕಟ್ಟುತ್ತಾ, ಬ್ರಿಟಿಷರ ದಲ್ಲಾಳಿಗಳಾಗಿ ಕೆಲಸ ಮಾಡುತ್ತಿದ್ದಿರಿ. ಆದರೂ, ನಿಮ್ಮಂತಹವರು ದೇಶದ ಸ್ವಾತಂತ್ರ್ಯ ಮಹೋತ್ಸವದ ಭಾಷಣ ಮಾಡಲು ಆಯ್ಕೆಯಾಗಿಬಿಟ್ಟದ್ದೀರಿ.

ನರೇಂದ್ರ ಮೋದಿಯವರೇ,

ಇದಕ್ಕಿಂತ ದೊಡ್ಡ ಅಪಾಯ ಇನ್ನೊಂದಿದೆ. ಅದು ನೀವು ದೇಶದ ನಿಜವಾದ ಸಮಸ್ಯೆಗಳ ಕುರಿತೇ ಮಾತಾಡುವುದು. ಅಂದರೆ, ಗೋ ರಕ್ಷಕರ ದಾಳಿಯ ವಿರುದ್ಧ ದಲಿತರ ಮೇಲಿನ ದಾಳಿಯ ವಿರುದ್ಧ ಮಾತನಾಡುವುದು. ಇದು ಅಪಾಯ ಏಕೆಂದರೆ, ಅದು ದಮನಕ್ಕೊಳಗಾಗಿ, ಅಸಹಾಯಕ ಸ್ಥಿತಿಯಲ್ಲಿರುವವರಿಗೆ ಮತ್ತಷ್ಟು ಮೋಸ ಮಾಡಲು ಬಳಕೆಯಾಗುತ್ತದೆ. ವಾಜಪೇಯಿ ಪರವಾಗಿಲ್ಲ, ಬಿಜೆಪಿ ಕೆಟ್ಟ ಪಕ್ಷ ಅಷ್ಟೇ ಎಂದು ನಂಬಿಕೊಳ್ಳಲು ಮತ್ತು ನಂಬಿಸಲು ಪ್ರಯತ್ನಪಟ್ಟವರು ಸಕ್ರಿಯರಾಗುತ್ತಾರೆ. ಮೋದಿ ಕೇವಲ ಅಭಿವೃದ್ಧಿ ಮಾಡಲು ಬಯಸುತ್ತಾರೆ; ಎಲ್ಲೋ ಕೆಲವು ಭಜರಂಗದಳದಂತಹವರು ಕೆಲವು ತಪ್ಪುಗಳನ್ನು ಮಾಡುತ್ತಿದ್ದಾರೆ ಅಷ್ಟೇ. ಹಾಗಾಗಿ ನಿಮ್ಮ ಅಭಿವೃದ್ಧಿಗಾಗಿ ನೀವು ಬಿಜೆಪಿಗೇ ಓಟು ಕೊಡಿ.

ನೀವೇನಾದರೂ ಈ ರೀತಿಯಲ್ಲಿ ದಮನಿತರ ಹಕ್ಕುಗಳ ಬಗ್ಗೆಯಾಗಲೀ, ಅವರ ಮೇಲೆ ನಡೆಯುತ್ತಿರುವ ದಾಳಿಗಳ ವಿರುದ್ಧವಾಗಲೀ ಮಾತಾಡಿದರೆ ಮುಗಿದೇ ಹೋಯಿತು. ಅರ್ನಾ ಗೋಸ್ವಾಮಿ ಮಾತ್ರವಲ್ಲದೇ, ಬರ್ಖಾ ದತ್ ಮ ರಾಜ್‌ದೀಪ್ ಸರ್ದೇಸಾಯಿ ಸಹ ನೆಮ್ಮದಿಯಾಗಿ ಬಿಡುತ್ತಾರೆ. ಇದು ಒಂದು ದೊಡ್ಡ ಅಪಾಯ. ಸಚಿವರ ಮೇಲೆ ನಿಮಗೆ ಇರುವ ಹಿಡಿತದ ಪ ಎಲ್ಲರಿಗೂ ಗೊತ್ತಿದೆ. ಹಾಗಿರುವಾಗ, ಅವರು ಬಂದದ್ದು ಮಾತಾಡಿದರೂ ನೀವು ಸುಮ್ಮನಿರುವ ಸುಮ್ಮನೇ ಅಲ್ಲ, ಅದು ಸ್ಪಷ್ಟ ಹುನ್ನಾರವಾಗಿದೆ. ಸಮಾಜ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯ ಸಚಿವನೇ ನಿಮ್ಮದೇ ರಾಜ್ಯದಲ್ಲಿ ದಲಿತರ ಮೇಲ ನಡೆದ ಅಮಾನವೀಯ ಹಲ್ಲೆಯನ್ನು ಸಮರ್ಥಿಸ ರೀತಿಯಲ್ಲಿ ಮಾತಾಡಿದ. ಆದರೂ ನೀವು ಏನ ಆಗಿಲ್ಲ ಎಂಬಂತೆ ಸುಮ್ಮನಿದ್ದಿರಿ. ಇವೆಲ್ಲವೂ ಹುನ್ನಾರವಾಗಿರುವಾಗ, ನಿಮ್ಮ ಸ್ವಾತಂತ್ರ್ಯೋತ್ಸವ ಭಾಷಣವೂ ಹುನ್ನಾರದ ಭಾಗವೇ ಆಗಿರುತ್ತದೆ.

ಇದರ ಜೊತೆಗೆ ಹೇಗೂ ಪಾಕಿಸ್ತಾನ ಮತ್ತ ಚೀನಾಗಳು ಯುದ್ಧಕ್ಕೆ ತಯಾರಿ ನಡೆಸುತ್ತಿವೆಯೆಂ ಹುತಾತ್ಮ ಸೈನಿಕರನ್ನು ಸ್ಮರಿಸಿಕೊಳ್ಳುತ್ತಾ ಇಡೀ ದೇಶವೇ ಯುದ್ಧಕ್ಕೆ ಸಿದ್ಧವಾಗಬೇಕೆಂದೂ ಕರೆ ಕೊಡುವುದನ್ನು ಮಾಡಿಯೇ ಮಾಡುತ್ತೀರಿ. ಗಡಿ ಸತ್ತ ಸೈನಿಕರ ನೂರು ಪಟ್ಟು ರೈತರು ದೇಶದ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಪಿ.ಸಾಯಿನಾ ತೋರಿಸಿದ್ದಾರೆ. ದೇಶದಲ್ಲಿ ಭಯೋತ್ಪಾದಕ ಕೃತ್ಯ ಸತ್ತವರಿಗಿಂತ ಹೆಚ್ಚು ದಲಿತರು ಮಲದ ಗುಂಡಿ ಸತ್ತಿದ್ದಾರೆಂದು ಬೆಜವಾಡ ವಿಲ್ಸನ್ ಅಂಕಿ-ಅಂಶ ಸಮೇತ ಮುಂದಿಟ್ಟದ್ದಾರೆ. ಆದರೂ ಯುದ್ಧ ವ ಭಯೋತ್ಪಾದನೆ ಇಲ್ಲದಿದ್ದರೆ ನಿಮಗೂ, ಪಾಕಿಸ್ತಾ ಮತ್ತು ಚೀನಾದ ಸರ್ಕಾರಗಳಿಗೂ ಕಷ್ಟವಾಗಿಬಿಡ ಅದಕ್ಕೆ ಮಾನ್ಯತೆ ಪಡೆದುಕೊಳ್ಳಲು ಆಗಸ್ಟ್ 15 ಉತ್ತಮ ವೇದಿಕೆ ನಿಮಗೆ ಸಿಗುವುದಿಲ್ಲ, ಏಕೆಂದ ನಿಮ್ಮ ಭಾಷಣಕ್ಕೆ ಮುಂಚೆ ಸೈನಿಕರ ಕವಾಯಿತು ಮತ್ತು ಶಸ್ತ್ರಾಸ್ತ್ರಗಳ ಮೆರವಣಿಗೆಯೂ ನಡೆದು, ಒಳ್ಳೆಯ ಸಂದರ್ಭ ಸೃಷ್ಟಿಸಿರುತ್ತದೆ. ಆ ಅವಕಾಶ ನೀವು ಬಿಟ್ಟುಕೊಡುವುದುಂಟೇ?

ಹಾಗಾಗಿ ನೀವು ಪಶು ಸದೃಶ ದೌರ್ಜನ್ಯಕ್ಕೆ ಒಳಗಾಗುತ್ತಿರುವ ದಲಿತರ ಪರವಾಗಿ, ಸಾಮೂ ಅತ್ಯಾಚಾರಗಳಿಗೆ ಬಲಿಯಾಗುತ್ತಿರುವ ಹೆಣ್ಣುಮ ಪರವಾಗಿ, ರೈತ-ಕಾರ್ಮಿಕರ ಪರವಾಗಿ ಮಾತನಾಡಬೇಡಿ. ಮಲದ ಗುಂಡಿಗಳಲ್ಲಿ ಸಾಯುತ್ತಿರುವ ದಲಿತರ ಪರವಾಗಿ ಕಣ್ಣೀರು ಸುರಿಸಬೇಡಿ; ಸ್ವಚ್ಛ ಭಾರತ ಅಭಿಯಾನದ ಸಾಧ ಕುರಿತು ಕೊಚ್ಚಿಕೊಳ್ಳಿ. ಆದಿವಾಸಿಗಳು ಮತ್ತು ಮೇಲೆ ನಡೆಯುತ್ತಿರುವ ದಾಳಿಯ ಕುರಿತು ಮಾತನಾಡಬೇಡಿ; ಅವರನ್ನು ಮತ್ತು ಕಾಡನ್ನು ಮಾಡಿ, ಕಾರ್ಪೋರೇಟ್ ಕಂಪೆನಿಗಳಿಗೆ ವಹಿಸಿಕೊಡುತ್ತಿರುವ ಕುರಿತು ಮಾತಾಡಿ. ಅವರ ಬದುಕು, ಸಂಸ್ಕೃತಿ ಎಲ್ಲವನ್ನೂ ಧ್ವಂಸಗೊಳಿಸಿ ಗುಲಾಮರನ್ನಾಗಿಸುತ್ತಿರುವ ಇವತ್ತಿನ ಆರ್ಥಿಕತೆ ಕುರಿತು ಮಾತಾಡಬೇಡಿ. ಮೇಕ್ ಇನ್ ಇಂಡಿ ಕುರಿತು ಮಾತಾಡಿ. ನಿಮ್ಮ ಸಾಕುನಾಯಿಗಳಂತೆ ವರ್ತಿಸುವ ಕೆಲವು ಮಾಧ್ಯಮಗಳು ಕೊಂಡಾಡು ಚಿಂತಿಸಬೇಡಿ. ತೊಗರಿಬೇಳೆ ಬೆಲೆಯ ಕುರಿತು ಹೇಳಲು ಹೋಗಬೇಡಿ, ನಿಮ್ಮ ಆಪ್ತ ಸ್ನೇಹಿತ ಅದಾನಿಯೇ ಅದಕ್ಕೆ ಮುಖ್ಯ ಕಾರಣ ಮತ್ತು ಮುಖ್ಯ ಫಲಾನುಭವಿ ಎಂದು ಗೊತ್ತಾಗಿಬಿಡುವ ಸಾಧ್ಯತೆಯಿದೆ. ಈರುಳ್ಳಿ, ಟೊಮ್ಯಾಟೋ ದರ ಕಡಿಮೆಯಾಗಿರುವುದರ ಬಗ್ಗೆ ಮಾತಾಡಿ. ಇದಾ ಭ್ರಷ್ಟಾಚಾರ ಅಲ್ಲ ಎಂದು ಮತ್ತೆ ಮತ್ತೆ ಸಾರಿ. ದೇಶಾದ್ಯಂತ ಹರಿಯಬಿಟ್ಟಿರುವ ಪರಿವಾರದ ಹ ಪಡೆಗಳ ಬಗ್ಗೆ ಏಕೆ ಮಾತಾಡುತ್ತೀರಿ? ಹಂತಕ ಪಡೆಗಳಿಗೆ ಮಾನ್ಯತೆ ತಂದುಕೊಡಲು ದೇಶಾದ್ಯ ಫೇಕ್ ವಿಡಿಯೋ ಮತ್ತು ಫೋಟೋಗಳನ್ನು ಸೃಷ್ಟಿಸುತ್ತಿರುವ ಮತ್ತು ಅವನ್ನು ಷೇರ್ ಮಾಡು ಭಕ್ತರು, ಅರೆ ಭಕ್ತರು ಬೇಕಾದಷ್ಟು ಇದ್ದಾರೆ.

ಸ್ವಾತಂತ್ರ್ಯದ ದಿನ ನಿಮಗೆ ನೇರವಾಗಿ ಹೇ ಸಾಧ್ಯವಿದ್ದರೆ ಹೇಳಿ, 'ನಾವು ನಿಮ್ಮ ಸ್ವಾತಂತ್ರ್ಯವ ಕಿತ್ತುಕೊಳ್ಳಲು ಆರಂಭಿಸಿದ್ದೇವೆ, ಸಿದ್ಧರಾಗಿ'. ಇ ನೀವು ಆಗಸ್ಟ್ 15ರಂದು ಮಾತನಾಡಲೇಬೇಡಿ ಮಾತಿನ ಚಪಲವನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವೇ ಇಲ್ಲ ಎನ್ನುವುದಾದರೆ, ಕನಿಷ್ಠ ಇಷ್ಟು ನೀವು, ದೇಶದ ಬಡಜನರ ಕಷ್ಟಗಳ ಬಗ್ಗೆ ಮಾತನಾಡಲು ಹೋಗಬೇಡಿ.

ದಲಿತರ ಕೋಪದ ಜ್ವಾಲೆ ಮೋದಿಯನ್ನು ಸುಡದೆ ಇರದು

ಗುಜರಾತಿನ ದಲಿತರ ತೀವ್ರತರವಾದ ಹೋರಾಟಕ್ಕೆ ನ ಮುಖ್ಯಮಂತ್ರಿ ಆನಂದಿ ಬೆನ್ ರಾಜೇನಾಮೆ ದಬೇಕಾಗಿ ಬಂದಿದೆ. ಅಲ್ಲಿನ ದಲಿತರ ಆಕ್ರೋಶದ ಅದೆಷ್ಟಿದೆ ಎಂದರೆ ಅವರೊಂದಿಗೆ ಕೂತು ತನಾಡುವ ಧೈರ್ಯವೂ ಆನಂದಿ ಬೆನ್‌ಗೆ ಇಲ್ಲದಂತಾಗಿ ತನ್ನ ರಾಜೇನಾಮೆಗೆ ವಯಸ್ಸಿನ ಸಬೂಬು ಕೊಟ್ಟು ಖ್ಯಮಂತ್ರಿ ಹುದ್ದೆಯಿಂದ ಪಲಾಯನಗೈದಿದ್ದಾರೆ. ಷವೆಂದರೆ ಗುಜರಾತಿನ ದಲಿತರ ಹೋರಾಟ ಯಾವುದೇ ದು ಪಕ್ಷ ಅಥವಾ ಸಂಘಟನೆ ಅಥವಾ ನಾಯಕನ ಂದಾಳತ್ವದಲ್ಲಿ ನಡೆದದ್ದಲ್ಲ. ಅದು ಸ್ವಯಂಪ್ರೇರಣೆಯಿಂದ ದದ್ದು.

ಕಳೆದ ಭಾನುವಾರ ಗುಜರಾತಿನ ರಾಜಧಾನಿ ಹಮದಾಬಾದಿನಲ್ಲಿ ಸಾವಿರಾರು ದಲಿತರು ಮತ್ತು ುಸಲ್ಮಾನರು ದೊಡ್ಡ ಪ್ರತಿಭಟನಾ ಸಭೆಯಲ್ಲಿ ಗವಹಿಸಿದ್ದರು. ನೂರಾರು ಸಂಘಟನೆಗಳು ಒಂದುಗೂಡಿ ಯೋಜಿಸಿದ್ದ ಆ ಸಭೆಯಿಂದ ಎಲ್ಲಾ ರಾಜಕೀಯ ಕ್ಷಗಳನ್ನು ಹೊರಗಿಡಲಾಗಿತ್ತು.

ಅದಕ್ಕೂ ಮುನ್ನ ಉತ್ತರ ಪ್ರದೇಶದ ಲಖ್ನೋದಲ್ಲಿ ಎಸ್‌ಪಿ ಒಂದು ಬೃಹತ್ ಪ್ರತಿಭಟನೆಯನ್ನು ಮ್ಮಿಕೊಂಡಿತ್ತು. ಆ ರಾಜ್ಯದ ಬಿಜೆಪಿಯ ಉಪಾಧ್ಯಕ್ಷ ಯಾಶಂಕರ್ ಸಿಂಗ್ ಎಂಬಾತ ಬಿಎಸ್‌ಪಿ ನಾಯಕಿ ಾಯಾವತಿಯವರನ್ನು ಕೆಟ್ಟ ಪದಗಳನ್ನು ಪಯೋಗಿಸಿ ನಿಂದಿಸಿದ್ದರಿಂದ ಆತನ ವಿರುದ್ಧ ಕೈಗೊಳ್ಳುವಂತೆ ಆಗ್ರಹಿಸಿ ಬಿಎಸ್‌ಪಿ ಕೊಟ್ಟಿದ್ದ ಗೆ ಸಾವಿರಾರು ಸಂಖ್ಯೆಯಲ್ಲಿ ದಲಿತರು ದಿಸಿದ್ದರು.

ಅದಕ್ಕೂ ಕೆಲ ವಾರಗಳ ಮುನ್ನ ಂಬೈಯಲ್ಲಿ ಸುಮಾರು ಒಂದು ಲಕ್ಷ ದಲಿತರು, ಗತಿಪರರು ಮತ್ತು ಎಡಪಂಥೀಯರು ತೆಗೂಡಿ ಅಂಬೇಡ್ಕರ್ ಭವನವನ್ನು ಕೆಡವಿದ್ದರ ರುದ್ಧ ಪ್ರತಿಭಟಿಸಿದ್ದರು. ಅವರೆಲ್ಲರೂ ರ್ಗರೆವ ಮಳೆಯನ್ನೂ ಲೆಕ್ಕಿಸದೆ ಮುಂಬೈನ ಗಳಲ್ಲಿ ಮೆರವಣಿಗೆ ನಡೆಸಿದ್ದರು. ಅವತ್ತು ಷ್ಟೊಂದು ಸಂಖ್ಯೆಯಲ್ಲಿ ಜನರು ಸೇರಿದ್ದರಿಂದ ಂಬೈನ ಹೃದಯ ಭಾಗದಲ್ಲಿರುವ ರಸ್ತೆಗಳೆಲ್ಲ ಮ್ ಆಗಿದ್ದವು.

ವಿಚಿತ್ರವೆಂದರೆ ಸದ್ಯದಲ್ಲೇ ಎದುರಾಗಲಿರುವ ತ್ತರ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳ ಧಾನಸಭಾ ಚುನಾವಣೆಗಳನ್ನು ನಸ್ಸಿನಲ್ಲಿಟ್ಟುಕೊಂಡೇ ಪ್ರಧಾನಿ ನರೇಂದ್ರ ಮೋದಿ ತನ್ನ ತ್ತೀಚಿಗಿನ ಸಂಪುಟ ವಿಸ್ತರಣೆ ಸಮಯದಲ್ಲಿ ಐವರು ಲಿತರಿಗೆ ಗೂಟದ ಕಾರ್‌ಗಳನ್ನು ದಯಪಾಲಿಸಿದ್ದ. ಇದಕ್ಕೆ ರಣ ಉತ್ತರ ಪ್ರದೇಶದಲ್ಲಿ ಶೇ. 20 ಮತದಾರರು ಲಿತರಾಗಿರುವುದು. ಹಾಗೆಯೇ ಪಂಜಾಬಿನಲ್ಲೂ ದಲಿತರ ಮಾಣ ಶೇ. 30 ಆದ್ದರಿಂದ ಅಧಿಕಾರದ ಗದ್ದುಗೆಯನ್ನೇರ ಕಾದರೆ ದಲಿತರನ್ನು ಓಲೈಸುವುದು ಮೋದಿ ತರಹದ ಡ್ಡಿಗಳಿಗೆ ಅತ್ಯವಶ್ಯಕವಾಗಿತ್ತು.

ಆದರೆ ಮಾಡಿದ್ದುಣ್ಣೋ ಮಾರಾಯ ಎಂಬ ಣ್ಣುಡಿಯಂತೆ ಚೆಡ್ಡಿಗಳ ಹಿಂದೂತ್ವ ಫ್ಯಾಕ್ಟರಿಯಲ್ಲಿ ಮಾರಿಸಲ್ಪಟ್ಟ ಕೆಲವರು ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಮಿತ್ ಶಾನ ಕಿಡಿಗೇಡಿ ಪ್ಲಾನುಗಳಿಗೆ ಕಲ್ಲು ಹಾಕುತ್ತಿದ್ದಾರೆ. ಲ್ಲರಿಗೂ ಗೊತ್ತಿರುವಂತೆ ಇದೆಲ್ಲ ಶುರುವಾಗಿದ್ದು ಚೆನ್ನೈನಲ್ಲಿ. ಲ್ಲಿನ ಪ್ರತಿಷ್ಠಿತ ಕೇಂದ್ರೀಯ ಐಐಟಿ ಸಂಸ್ಥೆಯಲ್ಲಿ ದಲಿತ ದ್ಯಾರ್ಥಿಗಳು ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್ ನ್ನು ಸ್ಥಾಪಿಸಿ ಆರೆಸ್ಸೆಸ್‌ನ ಹಿಂದೂತ್ವ ಸಿದ್ಧಾಂತ ಮತ್ತು ೋದಿಯ ಬಂಡವಾಳಶಾಹಿ ಪರ ನಿಲುವನ್ನು ಖಂಡಿಸಿದರು. ಕ್ಕೆ ಅವರಿಗೆ ಸಿಕ್ಕಿದ್ದು 'ದೇಶದ್ರೋಹಿ'ಗಳು ಎಂಬ ಪಟ್ಟಿ ಮತ್ತು ಅವರ ಸಂಘಟನೆಯ ನಿಷೇಧ. ಆದರೆ ಎಲ್ಲ ಪ್ರತಿಭಾವಂತ ದಲಿತ ವಿದ್ಯಾರ್ಥಿಗಳು ವಿರೋಧ ಪಡಿಸಿದ್ದರಿಂದ ಮೋದಿ ಸರ್ಕಾರ ಹಿಮ್ಮೆಟ್ಟಬೇಕಾಯಿತು.

ಅದಾದನಂತರ ಜರುಗಿದ್ದು ರೋಹಿತ್ ವೇಮುಲ ಬ ಮತ್ತೋರ್ವ ಪ್ರತಿಭಾವಂತ ವಿದ್ಯಾರ್ಥಿಯ ಸಾಂಸ್ಥಿಕ ಲೆ. ಅದೂ ಕೂಡ ಸಂಭವಿಸಿದ್ದು ಸ್ಮೃತಿ ಇರಾನಿ ಮತ್ತು ಾರು ದತ್ತಾತ್ರೇಯ ಎಂಬ ಹಿಂದೂತ್ವವಾದಿ ಕ್ರಿಮಿಗಳ ಣದಿಂದಾಗಿ. ರೋಹಿತ್ ವೇಮುಲನ ಸಾವು ದೇಶದ ದ್ದಗಲಕ್ಕೆ ಜಾತಿ ಮತ್ತು ಮತ ಎಂಬ ಗೋಡೆಗಳನ್ನೂ ೀರಿ ಎಲ್ಲಾ ವಿದ್ಯಾರ್ಥಿಗಳನ್ನು ಮತ್ತು ನಸಮತಾವಾದಿಗಳನ್ನು ಬಡಿದೆಬ್ಬಿಸಿತು. ಒಂದೆಡೆ ದಲಿತ ದ್ಯಾರ್ಥಿಗಳ ಕೋಪ ಏರುತ್ತಿದ್ದಾಗಲೇ ಮೋದಿಯ ಪಟ್ಟು ಸರ್ಕಾರ ಜೆಎನ್‌ಯು ಎಂಬ ಮತ್ತೊಂದು ಷ್ಠಿತ ವಿದ್ಯಾಸಂಸ್ಥೆಯ ಎಡಪಂಥೀಯರ ಗೂಡಿಗೆ ಾಕುವ ದುಸ್ಸಾಹಸ ಮಾಡಿತು. ಅದು ಕನ್ಹಯ್ಯ ಕುಮಾರ್, ಹ್ಲಾ ರಶೀದ್, ರಾಮನಾಗ, ಉಮರ್ ಖಾಲಿದ್ ಮತ್ತು ಬನ್ ಭಟ್ಟಾಚಾರ್ಯ ಎಂಬ ಯುವ ರಾಟಗಾರರನ್ನು ದೇಶಕ್ಕೆ ಪರಿಚಯಿಸಿತಲ್ಲದೆ, ಅವರನ್ನೆಲ್ಲ ರಾತಿ, ಹೀರೋಗಳನ್ನಾಗಿಸಿತು.

ಇದೆಲ್ಲಕ್ಕೂ ಮುನ್ನ ಚೆಡ್ಡಿಗಳು ಉತ್ತರ ಪ್ರದೇಶದ ದ್ರಿಯಲ್ಲಿ ಮೊಹಮದ್ ಅಖ್ಲಾಕ್ ಎಂಬ ಮುಸಲ್ಮಾನ ತನ್ನ ಮನೆಯಲ್ಲಿ ದನದ ಮಾಂಸ ತಿಂದ ಎಂದು ಆರೋಪಿಸಿ ಆತನನ್ನು ಅಮಾನವೀಯವಾಗಿ ಕೊಂದುಹಾಕಿದ್ದರೂ ಅದನ್ನು ದಕ್ಕಿಸಿಕೊಂಡಿದ್ದರು. ಈ ದೇಶದ ಮುಸಲ್ಮಾನರಿಗೆ ಸಂಘಟಿತ ಹೋರಾಟ ಮಾಡಿ ಗೆಲ್ಲುವುದು ಅಸಾಧ್ಯವಾದ್ದರಿಂದ ಚೆಡ್ಡಿಗಳಿಗೆ ಅಲ್ಪಸಂಖ್ಯಾತರ ಕೋಪದ ಕಾವು ತಾಗಿರಲಿಲ್ಲ. ಚೆಡ್ಡಿಗಳಲ್ಲಿ ದ್ವೇಷ ಅದೆಷ್ಟು ಜಾಸ್ತಿ ಇದೆಯೋ ಅಷ್ಟೇ ಕಮ್ಮಿ ಪ್ರಮಾಣದಲ್ಲಿ ಇರುವುದು ಬುದ್ಧಿಶಕ್ತಿ. ದನದ ಮಾಂಸ ತಿನ್ನುವ ಮುಸಲ್ಮಾನರನ್ನು ಬಡಿಯುವಂತೆ ದನದ ಮಾಂಸ ತಿನ್ನುವ, ಚರ್ಮ ಸುಲಿದು ಜೀವನ ನಡೆಸುವ ದಲಿತರನ್ನೂ ಬಡಿದು ದಕ್ಕಿಸಿಕೊಳ್ಳಬಹುದೆಂದು ಆ ಬುದ್ಧಿಮಾಂದ್ಯರಿಗೆ ಅನ್ನಿಸಿದ್ದರಲ್ಲಿ ಅಚ್ಚರಿ ಇಲ್ಲ. ಅದರ ಪರಿಣಾಮವಾಗಿ ನಡೆದದ್ದೇ ಉನಾ ಪ್ರಕರಣ.

2014ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ದಲಿತರು ಮೋದಿಯನ್ನು ಬೆಂಬಲಿಸಿದ್ದರಿಂದ ಮಾಯಾವತಿಯವರ ಬಿಎಸ್‌ಪಿಗೆ ಒಂದೇ ಒಂದು ಸೀಟು ಸಿಕ್ಕಿರಲಿಲ್ಲ. ಈ ಹಿನ್ನೆಲೆಯಲ್ಲಿ ಮೋದಿ ಮತ್ತು ಶಾ ಅಲ್ಲಿನ ವಿಧಾನಸಭಾ ಚುನಾವಣೆಗೂ ಮುನ್ನ ಹಿಂದೂ-ಮುಸಲ್ಮಾನರ ನಡುವೆ ಗಲಭೆಗಳನ್ನು ಪ್ರಾರಂಭಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಬೇಕು ಎಂದು ಸಂಚು ಹೂಡಿದ್ದರೆ ಅವರ ಹುತ್ತದಲ್ಲೇ ಇದ್ದ ದಯಾಶಂಕರ್ ಸಿಂಗ್ ಎಂಬ ಸರ್ಪ ಮಾಯಾವತಿ ಅವರ ವಿರುದ್ಧ ವಿಷಕಾರುವ ಮೂಲಕ ದಲಿತರು ಬಿಜೆಪಿಯಿಂದ ವಿಮುಖರಾಗುವಂತೆ ಮಾಡಿದ್ದಾನೆ. ಇದರ ಪರಿಣಾಮ ಪಂಜಾಬಿನ ಚುನಾವಣೆಯ ಮೇಲೂ ಬೀರಲಿದೆ.



ಗುಜರಾತಿನಲ್ಲಿ ಮುಂದಿನ ವರ್ಷ ವಿಧಾನಸಭಾ ಚುನಾವಣೆಗಳು ನಡೆಯಲಿವೆ. ಅಲ್ಲಿನ ದಲಿತರ ಜನಸಂಖ್ಯೆ ಶೇ. 7 ಅಷ್ಟೇ. ಅವರ ಬೆಂಬಲವಿಲ್ಲದೆಯೂ ಆ ರಾಜ್ಯದಲ್ಲಿ ಬಿಜೆಪಿ ಚುನಾವಣೆಗಳನ್ನು ಈ ಹಿಂದೆಯೂ ಗೆದ್ದಿದೆ. ಅದು ದಲಿತರಿಗೂ ಗೊತ್ತು. ಆದ್ದರಿಂದ ಅವರು ತಮ್ಮ ವಿರೋಧವನ್ನು ನೂತನ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಸತ್ತ ದನಗಳ ಚರ್ಮವನ್ನು ಸುಲಿಯುವುದಿರಲಿ, ಅವುಗಳ ಶವಗಳನ್ನೂ ಎತ್ತದೆ ಗುಜರಾತ್ ಸರ್ಕಾರಕ್ಕೆ ಧಮಕಿ ಹಾಕಿದ್ದಾರೆ. ಹೇಳಿಕೇಳಿ ಕ್ಷೀರಕ್ರಾಂತಿಗೆ ಹೆಸರುವಾಸಿ ಆಗಿರುವ ಗುಜರಾತಿನಲ್ಲಿ ಜಾನುವಾರುಗಳ ಸಂಖ್ಯೆ ಹೆಚ್ಚು. ದಲಿತರ ಪ್ರತಿಭಟನೆಯಿಂದಾಗಿ ಈಗ ಆ ರಾಜ್ಯದಲ್ಲಿ ಎಲ್ಲೆಂದರಲ್ಲಿ ಸತ್ತುಬಿದ್ದು ಕೊಳೆಯುತ್ತಿರುವ ದನಗಳದ್ದೇ ದೃಶ್ಯಗಳು. ಇದು ಸ್ಥಳೀಯ ಆಡಳಿತಗಾರರಿಗೆ ಮತ್ತು ದನಗಳ ಮಾಲೀಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಉನಾದಲ್ಲಿ ನಾಲ್ವರು ದಲಿತರನ್ನು ಚೆಡ್ಡಿಗಳು ಬಡಿಯುತ್ತಿರುವ ವೀಡಿಯೋ ಈಗ ಎಲ್ಲೆಡೆ ಹಬ್ಬಿರುವುದರಿಂದ ಅದೂ ಕೂಡ ಉತ್ತರ ಪ್ರದೇಶ, ಪಂಜಾಬ್ ಮಾತ್ರವಲ್ಲ, ದೇಶದಾದ್ಯಂತ ದಲಿತರನ್ನು ಬಿಜೆಪಿಯ ವಿರುದ್ಧ ಎತ್ತಿಕಟ್ಟಿದೆ.

ಇನ್ನು ಮಹಾರಾಷ್ಟ್ರದ ದಲಿತರ ಹೋರಾಟದ ಶಕ್ತಿಯೂ ಕಡಿಮೆ ಏನಲ್ಲ. 80ರ ದಶಕದಲ್ಲಿ ಮಹಾರಾಷ್ಟ್ರದ ಸರ್ಕಾರ ಸಂವಿಧಾನಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 'ರಿಡಿಲ್ಸ್ ಆಫ್ ಹಿಂದೂಯಿಸಂ' ಪುಸ್ತಕವನ್ನು ಪ್ರಕಟಿಸಿತ್ತು. ಆಗ ಆ ಪುಸ್ತಕದಲ್ಲಿ ಅಂಬೇಡ್ಕರ್ ಅವರು ಶ್ರೀರಾಮನಿಗೆ ಮತ್ತು ಹಿಂದೂ ದೇವತೆಗಳಿಗೆ ಅವಮಾನ ಮಾಡಿದ್ದಾರೆಂದು ಶಿವಸೇನೆಯ ಗೂಂಡಾಗಳು ಪ್ರತಿಭಟಿಸಿ ಅದನ್ನು ಬ್ಯಾನ್ ಮಾಡಬೇಕೆಂದು ಕರೆ ಕೊಟ್ಟಿದ್ದರು. ಆಗ ಸಾವಿರಾರು ಸಂಖ್ಯೆಯಲ್ಲಿ ದಲಿತರು ರಾಜ್ಯದ ಎಲ್ಲಾ ಕಡೆಯಿಂದ ಹರಿದುಬಂದು ಮುಂಬೈ ನಗರವೇ ದಂಗಾಗುವಂತೆ ಮಾಡಿದ್ದರು. ಶಿವಸೇನೆಯನ್ನಾದರೂ ಎದುರಿಸಬಹುದು, ಆದರೆ ದಲಿತರ ಕೋಪವನ್ನು ಎದುರಿಸುವುದು ಅಸಾಧ್ಯ ಎಂದು ಅರ್ಥಮಾಡಿಕೊಂಡ ಸರ್ಕಾರ ಅಂಬೇಡ್ಕರ್ ಅವರ ಪುಸ್ತಕದ ಮುಖಪುಟದ ಮೇಲೆ "ಈ ಪುಸ್ತಕದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ರಾಜ್ಯ ಸರ್ಕಾರದ್ದಲ್ಲ" ಎಂಬ ಸ್ಟಿಕರ್ ಅಂಟಿಸುವ ಮೂಲಕ ದಲಿತರ ಕೋಪದಿಂದ ಪಾರಾಗಿತ್ತು.

ಮಹಾರಾಷ್ಟ್ರದಲ್ಲೂ ಮುಂದಿನ ವರ್ಷ ವಿವಿಧ ನಗರಗಳ ಕಾರ್ಪೊರೇಶನ್‌ಗಳಿಗೆ ಚುನಾವಣೆಗಳು ನಡೆಯಲಿವೆ. ಅಲ್ಲಿನ ದಲಿತರನ್ನು ಓಲೈಸಲೆಂದೇ ಮೋದಿ ತನ್ನ ಸಚಿವ ಸಂಪುಟಕ್ಕೆ ಇತ್ತೀಚಿಗೆ ರಾಮದಾಸ್ ಅಥಾವಲೆ ಎಂಬ ಮಹಾರಾಷ್ಟ್ರದ ದಲಿತನನ್ನು ಸೇರಿಸಿಕೊಂಡಿದ್ದ. ಆದರೇನಂತೆ, ಅಲ್ಲಿನ ಬಿಜೆಪಿ ಸರ್ಕಾರ ಇತ್ತೀಚಿಗೆ ದೊಡ್ಡ ಎಡವಟ್ಟು ಮಾಡಿಕೊಂಡಿತು. ಯಾವ ಕಟ್ಟಡವನ್ನು ಅಂಬೇಡ್ಕರ್ ಅವರು ಕಟ್ಟಿಸಿದ್ದರೋ, ಯಾವ ಕಟ್ಟಡದಲ್ಲಿ ಇತ್ತೀಚಿಗೆ ರೋಹಿತ್ ವೇಮುಲನ ತಾಯಿ ಮತ್ತು ಸಹೋದರ ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದರೋ, ಅದನ್ನೇ ಬಿಜೆಪಿ ಸರ್ಕಾರ ರಾತ್ರೋರಾತ್ರಿ ನೆಲಸಮ ಮಾಡಿತು. ಇದರ ವಿರುದ್ಧ ನಡೆದ ಬೃಹತ್ ಪ್ರತಿಭಟನೆಯಲ್ಲಿ ವಿವಿಧ ದಲಿತ ಸಂಘಟನೆಗಳು ಮತ್ತು ಎಡಪಂಥೀಯ ಪಕ್ಷಗಳೊಂದಿಗೆ ಭಾಗವಹಿಸಿದ್ದು ಶಿವಸೇನೆ! ಅಲ್ಲಿಗೆ ರಾಮದಾಸ್ ಅಥಾವಲೆಯಿಂದ ಮೋದಿ ನಿರೀಕ್ಷಿಸುತ್ತಿದ್ದ ಲಾಭವನ್ನೆಲ್ಲ ಬಿಜೆಪಿಯ ಮುಖ್ಯಮಂತ್ರಿ ದೇವೇಂದ್ರ ಫಡ್ನಾವಿಸ್ ಮಣ್ಣುಪಾಲಾಗಿಸಿದ್ದಾನೆ.

ಅಧಿಕಾರದ ಬೇಟೆಗಾಗಿ ದಲಿತರ ಬೆಂಬಲ ಬೇಕು, ಆದರೆ 'ಅಸ್ಪೃಶ್ಯ'ರಾದ ಅವರಿಗೆ ಎಂದಿಗೂ 'ಹಿಂದೂ ಧರ್ಮ'ದಲ್ಲಿ ಸಮಾನ ಸ್ಥಾನವನ್ನು ನೀಡುವುದಿಲ್ಲ ಎಂಬ ಚೆಡ್ಡಿಗಳ ಕುತಂತ್ರ ಈಗ ಇಡೀ ದೇಶದ ದಲಿತರಿಗೆ ಸ್ಪಷ್ಟವಾಗಿದೆ. ಅವರ ಕೋಪದ ಜ್ವಾಲೆ ಮೋದಿಯ ಮತ್ತಾತನ ಚೆಡ್ಡಿ ಕಿರಾತಕರ ಕೋಮುವಾದಿ, ಜಾತಿವಾದಿ ಸಿದ್ಧಾಂತವನ್ನು ಸುಟ್ಟು ಭಸ್ಮ ಮಾಡುವ ದಿನ ದೂರವಿಲ್ಲ.

* * *

ಚೆಡ್ಡಿಗಳು ತಾವು ಪರಮ ದೇಶಭಕ್ತರು, ದೇಶ ಸೇವಕರು, ಗೋಮಾತೆಯ ರಕ್ಷಕರು ಎಂದೆಲ್ಲಾ ಪೋಜು ಕೊಡುತ್ತಿರುತ್ತಾರೆ. ದೇಶದ ಯಾವುದೇ ಭಾಗದಲ್ಲಿ ಪ್ರಾಕೃತಿಕ ದುರಂತ ಸಂಭವಿಸಿದಾಗ ಸಾಮಾನ್ಯ ಜನರು ಮತ್ತು ಇತರೆ ಸಂಘಟನೆಗಳು ತಾವು ನಿಂತ ಕಾಲಮೇಲೇ ಇತರರ ನೆರವಿಗೆ ಧಾವಿಸುತ್ತಾರೆ. ಆದರೆ ಆರೆಸ್ಸೆಸಿಗರು ಹಾಗಲ್ಲ. ಅವರ ಉದ್ದೇಶ ಜನರ ನೆರವಿಗೆ ಧಾವಿಸುವುದಕ್ಕಿಂತ ತಾವು ಅಲ್ಲಿದ್ದೆವು ಎಂದು ತೋರಿಸಿಕೊಂಡು ಪುಕ್ಕಟೆ ಪ್ರಚಾರ ಪಡೆಯುವುದೇ ಆಗಿರುವುದರಿಂದ ಅದೆಂತಹದ್ದೇ ದುರಂತ ಸಂಭವಿಸಿರಲಿ, ಅವರು ಮೊದಲು ತಮ್ಮ ಭಯಂಕರ ದೊಗಳೆ ಚೆಡ್ಡಿಗಳನ್ನು, ಸರ್ವಾಧಿಕಾರಿ ಮುಸ್ಸೋಲಿನಿಯಿಂದ ಪ್ರಭಾವಿತಗೊಂಡು ಆಯ್ಕೆ ಮಾಡಿಕೊಂಡ ಕಪ್ಪು ಟೋಪಿಯನ್ನು, ಬಿಳಿ ಶರ್ಟ್‌ಅನ್ನು ಧರಿಸಿದ ನಂತರವೇ ಜನರ 'ಸೇವೆ'ಗೆ ಮುಂದಾದವರಂತೆ ಅವರು ಪೋಸು ಕೊಡುವುದು.

ಇರಲಿ, ಗುಜರಾತಿನ ದಲಿತರು ಜಾನುವಾರುಗಳ ಶವಗಳನ್ನು ಎತ್ತುವುದಿಲ್ಲ ಎಂದು ಪ್ರತಿಭಟಿಸುತ್ತಿದ್ದು ಈಗ ಆ ರಾಜ್ಯದ ಎಲ್ಲೆಲ್ಲೂ ಸತ್ತುಬಿದ್ದಿರುವ ದನಗಳಿಂದಾಗಿ ಆರೋಗ್ಯ ಸಮಸ್ಯೆ ತಲೆದೋರುವ ಅಪಾಯ ಇದೆ. ಅಲ್ಲಿನ ದಲಿತರು "ಗೋವು ನಿಮ್ಮ ತಾಯಿ ಅಲ್ಲವೇ? ಆದ್ದರಿಂದ ನೀವೇ ನಿಮ್ಮ ತಾಯಿಯ ಅಂತ್ಯಸಂಸ್ಕಾರ ಮಾಡಿರಿ" ಎಂದು ಚೆಡ್ಡಿಗಳಿಗೆ ಸವಾಲು ಹಾಕಿದ್ದಾರೆ. ಆದರೂ ಇಲ್ಲಿಯತನಕ ಒಬ್ಬನೇ ಒಬ್ಬ ಆರೆಸ್ಸಿಸಿಗ ತನ್ನ ದೊಗಳೆ ಚೆಡ್ಡಿ ಮತ್ತು ಬಿಳಿ ಶರ್ಟ್ ತೊಟ್ಟು ತನ್ನ 'ಗೋಮಾತೆ'ಯ ಶವವನ್ನು ಎತ್ತುವುದಕ್ಕೆ ಮುಂದಾದ ಉದಾಹರಣೆ ಕೇಳಿಬಂದಿಲ್ಲ. ಅಂದರೆ, ಈ ಚೆಡ್ಡಿಗಳಿಗೆ ದನಗಳು 'ಮಾತೆ' ಆಗುವುದು ಬರೀ ಅಲ್ಪಸಂಖ್ಯಾತರನ್ನು ಮತ್ತು ದಲಿತರನ್ನು ಬಡಿದು ಸಾಯಿಸುವುದಕ್ಕೆ ಹೊರತು ಅವು ಸತ್ತಾಗ ಅಲ್ಲ. ಯಾಕೆಂದರೆ ಇವರ ಚೆಡ್ಡಿ ಸಿದ್ಧಾಂತ ನಿಂತಿರುವುದೇ ಜಾತಿ ಸಿದ್ಧಾಂತದ ಮೇಲೆ. ಆ ಜಾತಿ ವ್ಯವಸ್ಥೆಯೇ ದಲಿತರನ್ನು ಅವರ ಜೀವನೋಪಾಯಗಳಿಗಾಗಿ 'ಅಸ್ಪೃಶ್ಯ'ರನ್ನಾಗಿಸಿರುವುದು ಮತ್ತು ಹೆಚ್ಚಾಗಿ ಮೇಲುಜಾತಿಯವರೇ ಇರುವ ಆರೆಸ್ಸೆಸಿಗರು ಸತ್ತ ದನವನ್ನು ಮುಟ್ಟದಂತೆ ತಡೆದಿರುವುದು.

ದಾದ್ರಿಯಲ್ಲಿ ದನದ ಮಾಂಸ ತಿಂದ ಎಂಬ ಸುಳ್ಳು ಆರೋಪವನ್ನು ಹೊರಿಸಿ ಮೊಹಮ್ಮದ್ ಅಖ್ಲಾಕ್ ಎಂಬಾತನನ್ನು ಕೊಂದು ಹಾಕಿದ ಚೆಡ್ಡಿಗಳು ಇತ್ತೀಚೆಗೆ ದನದ ಚರ್ಮ ಸುಲಿದಿದ್ದಕ್ಕೆ ಐವರು ದಲಿತರನ್ನು ಸಾರ್ವಜನಿಕವಾಗಿ ಥಳಿಸಿದರು. ಅಲ್ಲಾ, ಇಂತಹ ಕೃತ್ಯಗಳನ್ನು ಪ್ರೋತ್ಸಾಹಿಸುವ ಚೆಡ್ಡಿಗಳು ಮತ್ತು ಇವೆಲ್ಲಾ ನಡೆಯುತ್ತಿದ್ದರೂ ಬಾಯಿ ಮುಚ್ಚಿಕೊಂಡು ಕೂತಿರುವ ಮೋದಿ ಎಂಬ ಮಾತಿನ ಮಲ್ಲ ದನದ ಶವದಿಂದ ಉತ್ಪತ್ತಿಯಾದ ಯಾವುದೇ ವಸ್ತುಗಳನ್ನು ಉಪಯೋಗಿಸುವುದೇ ಇಲ್ಲವೇ?

ಉದಾಹರಣೆಗೆ ಆರೆಸ್ಸೆಸಿಗರು ತಮ್ಮ ದೊಗಳೆ ಚೆಡ್ಡಿಗಳು ಜಾರಿ ಬೀಳದಂತೆ ತಡೆಯಲು ಉಪಯೋಗಿಸುವುದು ಬೆಲ್ಟ್‌ಗಳನ್ನು. ಹಾಗೆಯೇ ಅವರು ಕಾಲಿಗೆ ಮೆಟ್ಟುವುದು ಬೂಟ್ಸ್‌ಗಳನ್ನು. ಅವೆರಡೂ ತಯಾರಾಗುವುದು ದನದ ಚರ್ಮವನ್ನು ಉಪಯೋಗಿಸಿಯೇ. ಹೀಗಿರುವಾಗ ದನದ ಚರ್ಮ ಸುಲಿಯದಿದ್ದರೆ ಚೆಡ್ಡಿಗಳಿಗೆ ಬೆಲ್ಟ್ ಮತ್ತು ಬೂಟ್ಸ್ ಬರುವುದು ಎಲ್ಲಿಂದ?

ಮೋದಿ ಸೇರಿದಂತೆ ಎಲ್ಲಾ ಚೆಡ್ಡಿಗಳೂ ಸಕ್ಕರೆ ಮತ್ತು



• ಗೌರಿ ಲಂಕೇಶ್
editorlankesh@gmail.com

ಸಿಹಿ ತಿನಿಸುಗಳನ್ನು ಸೇವಿಸುತ್ತಾರೆ. ಅದರಲ್ಲೂ ದನದ ಅಂಶ ಇದ್ದೇ ಇರುತ್ತದೆ. ಯಾಕೆಂದರೆ ಸಕ್ಕರೆಯನ್ನು ತಯಾರಿಸುವಾಗ ಅದನ್ನು ಬೆಳ್ಳಗೆ ಮಾಡಲು ಮೂಳೆ ಇದ್ದಿಲು ಎಂಬ ಪದಾರ್ಥವನ್ನು ಸಕ್ಕರೆ ಕಾರ್ಖಾನೆಗಳಲ್ಲಿ ಉಪಯೋಗಿಸಲಾಗುತ್ತದೆ. ಆ ಮೂಳೆಗಳೆಲ್ಲ ಬರುವುದು ದನಗಳಿಂದಲೇ. ಚೆಡ್ಡಿಗಳು ಸತ್ಯವಾಗಲೂ ಗೋಪುತ್ರರಾದರೆ ಇನ್ನು ಮುಂದೆ ಅವರು ಯಾವ ಸಿಹಿ ಪದಾರ್ಥವನ್ನು ತಿನ್ನುವಂತಿಲ್ಲ. ಹಾಗೆಯೇ ಕಾಫಿ ಮತ್ತು ಟೀ ಕುಡಿಯಲು ಕೆಲವರು ಪಿಂಗಾಣಿಗಳನ್ನು ಉಪಯೋಗಿಸುತ್ತಾರೆ. ಇದನ್ನು ಇಂಗ್ಲಿಷ್‌ನಲ್ಲಿ 'ಬೋನ್ ಚೈನ' ಎಂದು ಕರೆಯುತ್ತಾರೆ. ಯಾಕೆ ಗೊತ್ತಾ? ಅದನ್ನು ಸಂಪೂರ್ಣವಾಗಿ ದನಗಳ 'ಬೋನ್' ಉಪಯೋಗಿಸಿ ತಯಾರಿಸುವುದರಿಂದ. ಆದ್ದರಿಂದ ಇನ್ನು ಮುಂದೆ ಇಂತಹ ಪಿಂಗಾಣಿಗಳನ್ನು ಚೆಡ್ಡಿಗಳು ಉಪಯೋಗಿಸದಿದ್ದರೆ ಅವರಿಗೇ ಒಳ್ಳೆಯದು.

ಗೋಪುತ್ರರು ಎಲ್ಲರಂತೆ ವಾಹನಗಳಲ್ಲಿ ಕೂತು ಡಾಂಬರು ರಸ್ತೆಗಳ ಮೇಲೆ ಸಂಚರಿಸುತ್ತಾರೆ. ಅದನ್ನೂ ಇನ್ನು ಮುಂದೆ ಅವರು ಮಾಡುವಂತಿಲ್ಲ. ಬದಲಾಗಿ ಅವರು ಬರಿ ಕಾಲಿನಲ್ಲಿ ಡಾಂಬರು ಹಾಕದಿರುವ ರಸ್ತೆಗಳಲ್ಲಿ ಮಾತ್ರ ನಡೆದಾಡಬೇಕು. ಯಾಕೆಂದರೆ ವಾಹನಗಳಿಗೆ ಅಳವಡಿಸಿರುವ ಟೈರ್‌ಗಳಲ್ಲಿ ಮತ್ತು ರಸ್ತೆ ನಿರ್ಮಿಸಲು ಉಪಯೋಗಿಸಿರುವ ಡಾಂಬರಿನಲ್ಲೂ ದನದಿಂದ ಪಡೆದ ಸ್ಟೀಯರಿಕ್ ಆಸಿಡ್ ಇರುತ್ತದೆ.

ಜೊತೆಗೆ ಇನ್ನು ಮುಂದೆ ಸ್ನಾನ ಮಾಡಿಕೊಳ್ಳುವುದೂ ಚೆಡ್ಡಿಗಳಿಗೆ ನಿಷೇಧ ಯಾಕೆಂದರೆ ಸೋಪು, ಶ್ಯಾಂಪೂ, ಟೂತ್‌ಪೇಸ್ಟ್ ಇತ್ಯಾದಿಗಳನ್ನು ದನದ ಕೊಬ್ಬಿನಿಂದ ತಯಾರಿಸಲಾಗುತ್ತದೆ. ಹಾಗೆಯೇ ಇನ್ನು ಮುಂದೆ ಚೆಡ್ಡಿಗಳು ಎಲ್ಲಾ ತರಹದ ಸಂಗೀತ ಗೋಷ್ಠಿಗಳಿಂದ ಮತ್ತು ಕ್ರೀಡೆಗಳಿಂದ ದೂರ ಉಳಿಯಬೇಕು. ಯಾಕೆಂದರೆ ತಬಲ ಮಾತ್ರವಲ್ಲ, ಪಿಟೀಲು, ವೀಣೆ ಇತ್ಯಾದಿಗಳನ್ನು ತಯಾರಿಸಲೂ ದನದ ಚರ್ಮ ಮತ್ತು ಇತರೆ ಅಂಶಗಳನ್ನು ಉಪಯೋಗಿಸುತ್ತಾರೆ. ಕ್ರಿಕೆಟ್ ಬಾಲ್‌ಗೆ ದನದ ಚರ್ಮ ಉಪಯೋಗಿಸಲ್ಪಟ್ಟರೆ ಟೆನ್ನಿಸ್ ರಾಕೆಟ್‌ಗೆ ದನದ ಕರುಳನ್ನು ಬಳಸಲಾಗುತ್ತದೆ.

ಕಲಾಕೃತಿಗಳನ್ನು ರಚಿಸಲು ಉಪಯೋಗಿಸುವ ಕುಂಚಗಳಲ್ಲಿ ಇರುವ 'ಹೇರ್' ಬರುವುದು ಕೂಡ ದನಗಳ ಕಿವಿಗಳಲ್ಲಿ ಮತ್ತು ಬಾಲದಲ್ಲಿ ಇರುವ ಮೃದುವಾದ ಕೂದಲಿನಿಂದ.

ನೂರಾರು ಕಾಯಿಲೆಗಳಿಗೆ, ಅದರಲ್ಲೂ ವಿಶೇಷವಾಗಿ ಅಸ್ತಮಾ ಮತ್ತು ಸಕ್ಕರೆ ಕಾಯಿಲೆಗೆ ಉಪಯೋಗಿಸುವ ಔಷಧಿಗಳಲ್ಲೂ ದನದ ಅಂಶ ಇರುತ್ತವೆ. ಡಯಾಬಿಟಿಸ್ ರೋಗಿಗಳು ಉಪಯೋಗಿಸುವ ಇನ್‌ಸುಲಿನ್ ಆಧರಿಸಿರುವುದು ದನದ ಮೇದೋಜೀರಕವನ್ನೇ. ಓರ್ವ ಡಯಾಬಿಟಿಸ್ ರೋಗಿಯನ್ನು ಒಂದು ವರ್ಷ ಜೀವಂತವಾಗಿಡಲು 26 ದನಗಳ ಮೇದೋಜೀರಕಗಳಿಂದ ತಯಾರಿಸಿದ ಇನ್‌ಸುಲಿನ್ ಬೇಕಾಗುತ್ತದೆ. ಅಂದರೆ ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವ ಒಬ್ಬ ಚೆಡ್ಡಿ ಒಂದು ವರ್ಷ ಬದುಕುಳಿಯಲು 26 'ಗೋಮಾತೆ'ಯರನ್ನು ಬಲಿ ತೆಗೆದುಕೊಳ್ಳಬೇಕಾಗುತ್ತದೆ.


ಪಟ್ಟಿ ಇನ್ನೂ ದೊಡ್ಡದಿದೆ. ಆದರೆ ಸ್ಥಳಾಭಾವದಿಂದ ಇಲ್ಲಿಗೆ ನಿಲ್ಲಿಸುತ್ತೇನೆ. ಒಟ್ಟಾರೆ ಚೆಡ್ಡಿಗಳು ನಿಜವಾಗಲೂ ಗೋ ಭಕ್ತರಾಗಿದ್ದರೆ ಇನ್ನು ಮುಂದೆ ಅವರು ಸ್ನಾನಗೀನ ಮಾಡದೆ, ವಾಹನಗಳನ್ನು ಮತ್ತು ಡಾಂಬರು ರಸ್ತೆಗಳನ್ನು ಉಪಯೋಗಿಸದೆ, ಯಾವುದೇ ಕಲೆ-ಕ್ರೀಡೆಯಲ್ಲಿ ಭಾಗವಹಿಸದೆ, ಯಾವುದೇ ಕಾಯಿಲೆಗೆ ಔಷಧಿಗಳನ್ನು ತೆಗೆದುಕೊಳ್ಳದೆ ತಮ್ಮ ಮನೆಯಲ್ಲೇ ಕೂತಿದ್ದರೆ ಅವರಿಗೂ, ದೇಶಕ್ಕೂ ತುಂಬಾ ಒಳ್ಳೆಯದಾಗುತ್ತದೆ! ■

ಮ್ಯಾಗಿ ಅಜ್ಜಿಯ ಆತ್ಮಕಥೆಯೂ ದೇಶಪಾಂಡೆಯ ದ್ರೋಹ ಪುರಾಣವೂ

ಕಾಂಗ್ರೆಸ್‌ನ ಗುಡ್ ಓಲ್ಡ್ ಲೀಡರ್ ಮ್ಯಾಗಿಯ ಆತ್ಮಕಥೆ ಒಂದಿಷ್ಟು ಸಪ್ಪಳ ಮಾಡಿ ಸುಮ್ಮನಾಗಿದೆ. ಕೊನೆಯ ದಿನಗಳಲ್ಲಿ ತಾನು ಕಾಂಗ್ರೆಸ್‌ನಲ್ಲಿ ಖುಷಿಯಾಗೇನೂ ಇರಲಿಲ್ಲ ಎಂಬ ಮ್ಯಾಗಿಯ ಹತಾಶೆ ಈ 'ಕರೇಜ್ ಅಂಡ್ ಕಮಿಟ್‌ಮೆಂಟ್' ಎಂಬ ಹೆಸರಿನ ಆತ್ಮಕಥನದಲ್ಲಿ ನಿಚ್ಚಳವಾಗಿ ಗೋಚರಿಸುತ್ತದೆ! ಲೋಕ ಭಾವಿಸಿದಂತೆ ಮ್ಯಾಗಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿಗೆ ಅತ್ಯಾಪ್ತರೇನೂ ಆಗಿರಲಿಲ್ಲವೆಂಬ ವಸ್ತುಸ್ಥಿತಿ ಈ ಆತ್ಮಕತೆ ಹೊರ ಹಾಕಿದೆ. "ದೇಶಪಾಂಡೆಗೆ ಕಾಂಗ್ರೆಸ್ ಸೇರಲು ನೆರವಾದೆ; ಅಸೆಂಬ್ಲಿ ಟಿಕೆಟ್ಟು ಕೊಡಿಸಿದೆ; ಮಂತ್ರಿಯೂ ಮಾಡಿಸಿದೆ. ಆದರೂ ಆತ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ನನ್ನ ಸೋಲಿಗೆ ಸಂಚು ಮಾಡಿದರು. ಅಷ್ಟೇ ಅಲ್ಲ ಎಐಸಿಸಿಯಲ್ಲಿರುವ ನನ್ನ ಶತ್ರುಗಳ ಜತೆ ಸೇರಿ ಮಗ ನಿವೇದಿತ್‌ಗೂ ಅಸೆಂಬ್ಲಿ ಟಿಕೆಟ್ ಸಿಗದಂತೆ ಕಿತಾಪತಿ ಮಾಡಿದರು" ಎಂದು ಮ್ಯಾಗಿ ದ್ರೋಹ ಪುರಾಣ ಬಿಚ್ಚಿಟ್ಟಿದ್ದಾರೆ. ದೇಶಪಾಂಡೆ ರಾಮಕೃಷ್ಣ ಹೆಗಡೆಗೂ ದ್ರೋಹ ಮಾಡಿದರೆಂದು ಹೆಗಡೆಯೇ ತನಗೆ ಹೇಳಿದ್ದರು ಎಂದು ಮ್ಯಾಗಿ ಬರೆದಿದ್ದಾರೆ. ಆದರೆ ಇದರಲ್ಲಿ ವಿಶೇಷ ಅಥವಾ ಹೊಸತೇನೂ ಇಲ್ಲ. ದೇಶಪಾಂಡೆಯ ದ್ರೋಹ-ದೋಖಾ ಊರಿಗೆಲ್ಲ ಗೊತ್ತಿರುವ ಆತನ ಹುಟ್ಟು ಗುಣ!!

ಕಾಂಗ್ರೆಸ್‌ನ ದಿಲ್ಲಿ ದರ್ಬಾರಿನ ಆಯಕಟ್ಟಿನಲ್ಲಿ ಹಲವು ವರ್ಷ ಮೆರೆದಾಡಿದ್ದ ಮ್ಯಾಗಿ ಯಾನೆ ಮಾರ್ಗರೆಟ್ ಆಳ್ವರ ಆತ್ಮಕಥನ 'ಕರೇಜ್ ಅಂಡ್ ಕಮಿಟ್‌ಮೆಂಟ್' ಸಣ್ಣದೊಂದು ಸಪ್ಪಳ ಮಾಡಿ ಸುಮ್ಮನಾಗಿದೆ. ಆಕೆ ಕಾಂಗ್ರೆಸ್‌ನಲ್ಲಿ ಕಂಡ ಖುಷಿಗಿಂತಲೂ ಉಂಡ ನೋವನ್ನೇ 'ವಸ್ತು'ವಾಗಿಸಿ ಆತ್ಮಕಥೆ ಹೆಣೆದಂತಿದೆ. ದುಡ್ಡಿನ ಚೀಲ ಹಿಡಿದೇ ರಾಜಕಾರಣ ಮಾಡುವ ಸಾತ್ ನಂಬರ್ ಟ್ರೇಡ್ ಮಾರ್ಕ್ ರಾಜಕಾರ ಣೋದ್ಯಮಿ ಆರ್.ವಿ. ದೇಶಪಾಂಡೆ ಕಾಂಗ್ರೆಸ್ ಸೇರಿದ್ದೇ ಮ್ಯಾಗಿಗೆ ಗಂಡಾಂತರವಾಯ್ತಾ? ಅಥವಾ ಮ್ಯಾಗಿಗೆ ಕಾಂಗ್ರೆಸ್‌ನಲ್ಲಿ ಕಷ್ಟಗಳು ಶುರುವಾಗುವುದಕ್ಕೂ, ಡಾನ್ ದೇಶಪಾಂಡೆ ಜನತಾ ದಳದಿಂದ ಕಾಂಗ್ರೆಸ್‌ಗೆ ನೆಗೆಯುವುದಕ್ಕೂ ಸರಿಯಾಯ್ತಾ? ಖುದ್ದು ಮ್ಯಾಗಿಗೂ ಇದು ಗೊಂದಲದ ಪ್ರಶ್ನೆಯೆ! ಒಂದಂತೂ ಖರೆ; ಕಾಂಗ್ರೆಸ್ ಸೇರಿದ ಕೆಲವೇ ಕೆಲವು ದಿನದಲ್ಲೇ ವಲಸಿಗ ದೇಶಪಾಂಡೆ ಮೂಲ ನಿವಾಸಿ ಮ್ಯಾಗಿಯ ಕುತ್ತಿಗೆ ಒತ್ತಿ ಹಿಡಿದು ಉಸಿರುಗಟ್ಟಿಸಲು ಆರಂಭಿಸಿದವ ಆಕೆ ಜಿಲ್ಲೆ ಬಿಟ್ಟೋಡಿದರೂ ಅಟ್ಟಾಡಿಸುವುದು ಮಾತ್ರ ಬಿಟ್ಟಿಲ್ಲ.

ಇದು ಮ್ಯಾಗಿ ಆತ್ಮಕತೆ ಬರೆದು ಬಯಲಾಗಿಸುವ ಮೊದಲೇ ಊರಿಗೆಲ್ಲ ಗೊತ್ತಿರುವ ಇತಿಹಾಸ! ಅದು 1990ರ ದಶಕದ ಅಂತ್ಯದ ಕಾಲಮಾನ. ದೇವೇಗೌಡರು ಪ್ರಧಾನಿಯಾಗಿದ್ದರೂ ತನ್ನ ಆಜನ್ಮ ವೈರಿ ರಾಮಕೃಷ್ಣ ಹೆಗಡೆಯನ್ನು ಜನತಾದಳದಿಂದಲೇ ಎತ್ತಿ ಹೊರಗೆ ಬಿಸಾಕಿದ್ದರು. ಹೆಗಡೆ ಜೆಡಿಯು, ಲೋಕಶಕ್ತಿ, ಬಿಜೆಪಿ ಎನ್ನುತ್ತ ಅಂತರ್ ಪಿಶಾಚಿಯಂತಾಗಿದ್ದ ದಿನಗಳವು. ರಾಮಕೃಷ್ಣ ಹೆಗಡೆಜೀ ನಾಮಬಲದಿಂದಲೇ ಪ್ರಭಾವಿ ಮಂತ್ರಿ, ದಳದ



ಮುಂಚೂಣಿ ಮುಂದಾಳಾಗಿ ಬೆಳೆದಿದ್ದ 'ದೋಷ'ಪಾಂಡೆ ಗುರುವಿಗೇ ತಿರುಮಂತ್ರ ಹಾಕಲು ಸಂಪೂರ್ಣ ಸಜ್ಜಾಗಿದ್ದರು. ಕಾಂಗ್ರೆಸ್ ಆತನ ಆಯ್ಕೆ ಆಗಿತ್ತು. ಅದೇ ಹೊತ್ತಿಗೆ ಉತ್ತರ ಕನ್ನಡಕ್ಕೆ ಮ್ಯಾಗಿ ಎಂಟ್ರಿ ಹೊಡೆದಿದ್ದರು. ತಾನು ಉತ್ತರ ಕನ್ನಡದ ಸೊಸೆ ಎನ್ನುತ್ತ ತನ್ನ ಮಾವ (ಗಂಡನ ತಂದೆ) ಜೋಕಿಮ್ ಆಳ್ವ ಇದೇ ಜಿಲ್ಲೆಯ ಸಂಸದನಾಗಿದ್ದು ನೆನಪಿಸುತ್ತ ಅಂಡಲೆಯುತ್ತಿದ್ದರು.


ಮಹಾರಾಷ್ಟ್ರ ಲಾಬಿ ಮೂಲಕ ಕಾಂಗ್ರೆಸ್‌ನ ಪವರ್ ಬ್ರೋಕರ್‌ಗಳಾದ ಗುಲಾಮ್‌ನಬಿ ಆಜಾದ್, ಅಹ್ಮದ್ ಪಟೇಲ್, ಜಗದೀಶ್ ಟೈಟ್ಲರ್‌ರಂಥವರ ಸಖ್ಯ ಕುದುರಿಸಿಕೊಂಡಿದ್ದ ದೇಶಪಾಂಡೆಗೆ ಇವರಷ್ಟೇ ಪವರ್‌ಫುಲ್ ಆಗಿದ್ದ ಮ್ಯಾಗಿಯ ಕೃಪಾಕಟಾಕ್ಷದ ಅನಿವಾರ್ಯತೆಯೂ ಇತ್ತು. ಜತೆಗೆ ಆಕೆ 'ಸ್ಥಳೀಯ' ನಾಯಕಿಯಾಗಿ ಅವತರಿಸಿದ್ದರಲ್ಲ! ಹಾಗಾಗಿ ದೇಶಪಾಂಡೆ ಮ್ಯಾಗಿಯ ಪಾದಕ್ಕೆ ಬೀಳಬೇಕಾದ ಪರಿಸ್ಥಿತಿ ಬಂದಿತ್ತು. 1998ರ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಸೋತಿದ್ದ ಮ್ಯಾಗಿಗೂ ದೇಶಪಾಂಡೆಯಂಥ 'ಗಟ್ಟಿ' ನಾಯಕನ ಅವಶ್ಯಕತೆಯೂ ಇತ್ತು. ಆ ಹೊತ್ತಿಗಾಕೆ ಲೋಕಲ್ ಲೀಡರ್‌ಗಳಾದ ರಾಣೆ ದೇವರಾಯ ನಾಯ್ಕ, 'ಬಂ' ಭಂಟರ ವಿರೋಧವೂ ಕಟ್ಟಿಕೊಂಡಿದ್ದರು. ಹಾಗಾಗಿ ದೇಶಪಾಂಡೆಯೇ ಗತಿಯೆಂಬ ದುಸ್ಥಿತಿ ಮ್ಯಾಗಿಯದಾಗಿತ್ತು.


ಮೂಲ ಕಾಂಗ್ರೆಸಿಗರನ್ನೆಲ್ಲ ಬದಿಗೆ ಸರಿಸಿ ದೇಶಪಾಂಡೆಯನ್ನೇ ಬಹುವಾಗಿ ನೆಚ್ಚಿಕೊಂಡರು ಮ್ಯಾಗಿ. ದಿಲ್ಲಿ ಮಟ್ಟದಲ್ಲಿ ಕಟಿಪಿಟಿ ಪ್ರಬಲವಾಗೆ ನಡೆಸಿದ ಮ್ಯಾಗಿ ದೇಶಪಾಂಡೆಯನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡರು. ಇದು ಬಿಜೆಪಿಯ ಧರ್ಮ-ಕರ್ಮ ರಾಜಕಾರಣದ ಅಬ್ಬರದಲ್ಲಿ ಜಿಲ್ಲೆಯಲ್ಲಿ ನೆಲೆ ಕಳೆದುಕೊಂಡಿದ್ದ ಕಾಂಗ್ರೆಸ್‌ಗೆ ಬಲವೂ ತಂದುಕೊಟ್ಟಿತು. 1999ರ ಲೋಕಸಭಾ ಚುನಾವಣೆಯಲ್ಲಿ ಮ್ಯಾಗಿ ಬಿಜೆಪಿಯ ಅನಂತ್ಕುಮಾರ್‌ಯನ್ನು ಮಣಿಸಿ ಗೆದ್ದೇಬಿಟ್ಟರು! ಜತೆಯಲ್ಲೇ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಹಳಿಯಾಳದಿಂದ ದೇಶಪಾಂಡೆಯೂ ಕಾಂಗ್ರೆಸ್ ಕಲಿಯಾಗಿ ಚುನಾಯಿತರಾದರು. ಆಗೆಲ್ಲ ಮ್ಯಾಗಿ-ಮಾಮ (ದೇಶಪಾಂಡೆ) ಸಂಬಂಧ ಅನ್ಯೋನ್ಯವಾಗೇ ಇತ್ತು. ಮಾಮನಿಗೆ ಎಸ್.ಎಂ. ಕೃಷ್ಣರ ಸಂಪುಟದಲ್ಲಿ ಮಂತ್ರಿ ಮಾಡಲು ಮ್ಯಾಗಿ ಲಾಬಿಯೂ ಮಾಡಿದರು. ತನ್ನನ್ನು ಮುಂಬಾಗಿಲ ಮೂಲಕ ಪಾರ್ಲಿಮೆಂಟ್‌ಗೆ ಹೋಗಲು ದೇಶಪಾಂಡೆ ನೆರವಾಗಿದ್ದಾರೆಂಬ ಋಣ ಭಾವವೂ ಆಕೆಯಲ್ಲಿತ್ತು.

ಆ ನಂತರ ಶುರುವಾಯ್ತು ನೋಡಿ, ಮ್ಯಾಗಿ ತನ್ನ ಆತ್ಮಕತೆಯಲ್ಲಿ ಹೇಳಿದ 'ದ್ರೋಹ ಪುರಾಣ'!! ಉತ್ತರ ಕನ್ನಡ ಕಾಂಗ್ರೆಸ್ ಮತ್ತು ಆಡಳಿತ ಎರಡರಲ್ಲೂ ಎರಡು ಅಧಿಕಾರ ಕೇಂದ್ರಗಳು ಸೃಷ್ಟಿಯಾದವು. ಮ್ಯಾಗಿ ನೀರಿಗೆಳೆದರೆ, ಮಾಮ ಏರಿಗೆಳೆಯತೊಡಗಿದ. ತನಗೆ ರಾಜಕೀಯ ದೀಕ್ಷೆ ನೀಡಿ ಎತ್ತರೆತ್ತರಕ್ಕೆ ಬೆಳೆಸಿದ್ದ ಸಾಕ್ಷಾತ್ ರಾಮಕೃಷ್ಣ ಹೆಗಡೆಯಂಥ ಹಿರಿಯರಿಗೇ ಬತ್ತಿಯಿಟ್ಟಿದ್ದ ದೇಶಪಾಂಡೆ ಮ್ಯಾಗಿಯನ್ನು ಬಿಡುವುದುಂಟಾ?! ಮ್ಯಾಗಿ ಜಿಲ್ಲೆಯಲ್ಲಿ ಬೆಳೆದರೆ ತನ್ನ ಏಕಚಕ್ರಾಧಿಪತ್ಯಕ್ಕದು ಮಾರಕ ಎಂಬ ಕಾರಣಕ್ಕೆ ದೇಶಪಾಂಡೆ ಸಂದರ್ಭ ಸಿಕ್ಕಾಗೆಲ್ಲಾ ಮ್ಯಾಗಿಯ ಹಣಿಯತೊಡಗಿದರು. ಮ್ಯಾಗಿಯನ್ನು ಜಿಲ್ಲೆಯಿಂದ ಓಡಿಸಿದರಷ್ಟೇ ತನ್ನ ಕುಲಕಂಠೀರವ ಪ್ರಶಾಂತನಿಗೆ ಎಂಪಿಗಿರಿ ಚಾನ್ಸ್ ಎಂಬ ಹಿಡನ್ ಕಾರ್ಯಸೂಚಿಯಿಟ್ಟುಕೊಂಡು ದೇಶಪಾಂಡೆ 'ದ್ರೋಹ' ದಾಳಿ ನಡೆಸುತ್ತಲೇ ಹೋದರು.

ಇದು 'ಸೀನಿಯರ್ ಲೀಡರ್' ಮ್ಯಾಗಿಯನ್ನು ಕೆರಳಿಸಿತು. ಬೀದಿಪಾಲಾಗಿದ್ದ ದೇಶಪಾಂಡೆ ತನ್ನ ಕೃಪೆಯಿಂದಲೇ ಕಾಂಗ್ರೆಸ್ ಪ್ರವೇಶ ಪಡೆದದ್ದು; ತನ್ನಿಂದಲೇ ಮಂತ್ರಿಯೂ ಆಗಿದ್ದು ಎಂಬ ಭಾವನೆ ಮ್ಯಾಗಿಯದಾಗಿತ್ತು. ಇಂಥವನು ತನಗೆ ನಿಷ್ಠನಾಗಿರಬೇಕೆಂದು ಆಕೆಯ ಈಗೋ ಸಹಜವಾಗೇ ಬಯಸಿತ್ತು. ಆದರೆ ಉ.ಕನ್ನಡದಲ್ಲಿ ಯಾರೂ, ಯಾವ ಪಾರ್ಟಿಯಲ್ಲೂ ತನಗೆ ಸರಿಸಮನಾಗಿ ಬೆಳೆಯಬಾರದೆಂಬ ದ್ವೇಷಾಸೂಯೆಯ ದೇಶಪಾಂಡೆ ಮ್ಯಾಗಿಗೆ ಕ್ಯಾರೇ ಅನ್ನಲಿಲ್ಲ. ಕಾಂಗ್ರೆಸ್ ಎಂಬುದು ಬಣ ಬಡಿದಾಟದಲ್ಲಿ ಜರ್ಜರಿತವಾಗಿ ಹೋಯಿತು. 2004ರ ಲೋಕಸಭೆ ಚುನಾವಣೆ ಎದುರಾಗುವ ಸಮಯದಲ್ಲಿ ಮ್ಯಾಗಿ-ಮಾಮ ಹಾವು-ಮುಂಗುಸಿಯಂತಾಗಿದ್ದರು.


ಜಿಲ್ಲೆಯಲ್ಲಿ ಯಾರನ್ನೂ ಗೆಲ್ಲಿಸುವ ತಾಕತ್ತು ಇಲ್ಲದ ಹೇತ್ಲಾಂಡಿ ಪುಢಾರಿ ದೇಶಪಾಂಡೆಗೆ ಯಾರನ್ನಾದರೂ ಸೋಲಿಸುವ ಹಿಕಮತ್ತು ಮಾತ್ರ ಕರಗತವಾಗಿದೆ. 2004ರ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಮ್ಯಾಗಿ ವಿರುದ್ಧ ಕಿತಾಪತಿ ಮಾಡಿದ ದೇಶಪಾಂಡೆ ಬಿಜೆಪಿಯ ಕರ್ಮಗೇಡಿ ಬೆಂಕಿ ನವಾಬ ಅನಂತ್ಕುಮಾರ್‌ಯ ಪರ ಬಿರುಸಾಗಿಯೇ ಒಳ ಕಾರಸ್ಥಾನ ಮಾಡಿದ್ದರು. ತನ್ನ ಮಗನ ಮುಂದಿನ ಪಾರ್ಲಿಮೆಂಟ್ ಪ್ರಯಾಣದ ದಾರಿ ಸುಗಮ ಮಾಡಿಕೊಳ್ಳಲು ದೇಶಪಾಂಡೆ ಕೋಮುವಾದಿ ಬಿಜೆಪಿ ಮತ್ತು ಹಿಂಸಾವಾದಿ ಅನಂತ್ಕುಮಾರ್ ಗೆಲುವಿಗೆ ನಿದ್ದೆಗೆಟ್ಟು ಪ್ರಯತ್ನ ನಡೆಸಿದ್ದರು. ಆ ಚುನಾವಣೆಯಲ್ಲಿ ದೇಶಪಾಂಡೆ ಪಕ್ಷ ದ್ರೋಹ ಮಾಡದಿದ್ದರೆ ವೇಸ್ಟ್ ಬಾಡಿ ಅನಂತ್ಕುಮಾರ್ ಮತ್ತೆ ಎಂಪಿಯಾಗುವ ಚಾನ್ಸೇ





ಇಲ್ಲವಾಗಿತ್ತು. 2004ರ ಚುನಾವಣೆಯಲ್ಲಿ ನಡೆಸಿದಂಥದೇ ಸಂಚು 2009ರಲ್ಲೂ ದೇಶಪಾಂಡೆ ಯಶಸ್ವಿಯಾಗಿ ಮಾಡಿದ್ದರು. ಹೀಗಾಗಿ ಆಗಲೂ ಮ್ಯಾಗಿ ಸೋತರು. ಮ್ಯಾಗಿ ವ್ಯಕ್ತಿತ್ವಕ್ಕೆ ಹೋಲಿಸಿದರೆ ದಂಡಪಿಂಡದಂತಿರುವ ಜೀವವಿರೋಧಿ ಅನಂತ್ಕುಮಾರ್ ದೇಶಪಾಂಡೆ ಕೃಪೆಯಿಂದ ಸತತ ಎರಡು ಬಾರಿ ಸಲೀಸಾಗಿ ಸಂಸದನಾಗಿ ಆಯ್ಕೆಯಾಗಿ ಹೋದ! ಮಾಣಿಯ ಮತಾಂಧ ಮಸಲತ್ತಿಗಿಂತಲೂ ದೇಶಪಾಂಡೆಯ ದ್ರೋಹದ ಹಿಕಮತ್ತೇ ಆತನನ್ನು ಮತ್ತೆ-ಮತ್ತೆ ದಿಲ್ಲಿ ರೈಲು ಹತ್ತಿಸಿದೆ ಎಂಬುದು ಸರಳ ಸತ್ಯ!!

ಇದೆಲ್ಲ ಎಲ್ಲರಿಗೂ ಗೊತ್ತಿರುವ ರಾಜಕೀಯ ಇತಿಹಾಸ. ಇದನ್ನೇ ಮ್ಯಾಗಿ ಆತ್ಮಕತೆಯಲ್ಲಿ ಸರಣಿಯೂ ಪೋಣಿಸಿದ್ದಾರೆ. ಆದರೆ ಆಕೆ ಯಾರಿಗೂ ಗೊತ್ತಿಲ್ಲದ ದೇಶಪಾಂಡೆಯ



ಕೆಲವು ದೋಖಾ ದಾಖಲಿಸಿದ್ದಾರೆ. 2008ರ ಅ
ಎಲೆಕ್ಷನ್‌ನಲ್ಲಿ ಕೆನರಾ ಲೋಕಸಭಾ ವ್ಯಾಪ್ತಿಯ ಖಾ
(ಬೆಳಗಾವಿ ಜಿಲ್ಲೆ)ದಿಂದ ಕಣಕ್ಕೆ ಇಳಿಸಲು ಮ್ಯಾಗಿ
ಕಿರಿಯ ಪುತ್ರ ನಿವೇದಿತ್‌ನ ಸಜ್ಜುಗೊಳಿಸಿದ್ದರು. ನಿವೆ
ವರ್ಷಾನುಗಟ್ಟಲೆ ಖಾನಾಪುರದಲ್ಲಿ ಬೀಡುಬಿಟ್ಟು
ಹದಗೊಳಿಸಿ ಕೊಂಡಿದ್ದ. ಆದರೆ ದೇಶಪಾಂಡೆ ಅ
ಕಲ್ಲು ಹಾಕಿದರೆಂದು ಮ್ಯಾಗಿ ಆತ್ಮಕತೆಯಲ್ಲಿ ಕೊರೆದಿ
ಮ್ಯಾಗಿ ಕಂಡರಾಗದ ಮಹಾರಾಷ್ಟ್ರದ ಪೃಥ್ವಿ
ಚವ್ಹಾಣ್, ವಿಲಾಸ್‌ರಾವ್ ದೇಶಮ
ಜಗದೀಶ್ ಟೈಟ್ಲರ್‌ಗಳಿಗೆ ಚಾಡಿ
ನಿವೇದಿತ್‌ಗೆ ಟಿಕೆಟ್ ದಕ್ಕದಂತೆ ಮಾಡಿ


ಆಗಲೇ ಮ್ಯಾಗಿ ಕಾಂಗ್ರೆಸ್ ಹೈಕಮ
ವಿರುದ್ಧ ತಿರುಗಿ ಬಿದ್ದಿದ್ದು. ಅದು
ಮೊದಲ ಬಂಡಾಯವೇನೂ ಆಗಿ
ದೇವರಾಜ ಅರಸು ಕಾಂಗ್ರೆಸ್
ಹೊರಹೋದಾಗ ಮ್ಯಾಗಿ ಇಂದಿರಾ
ಉಳಿದಿರಲಿಲ್ಲ. ಅರಸು ನಿಧನಾನಂತರ
ಇಂದಿರಾ ಗಾಂಧಿ ಗೂಡು ಸೇರಿಕೊಂಡಿದ್ದ
ಬಗ್ಗೆ ಸೋನಿಯಾ ಗಾಂಧಿಗೂ
ನಂಬಿಕೆಯೇನೂ ಇರಲಿಲ್ಲ. ಇದು ಮ್ಯಾಗಿಯ ಆ
ಓದಿದಾಗ ಅರ್ಥವಾಗುವ ಕುತೂಹಲಕಾರಿ
ಹೊರಪ್ರಪಂಚಕ್ಕೆ ಮ್ಯಾಗಿ ದಿಲ್ಲಿ ದೊರೆಸಾನಿಯ
ಎಂಬಂತೆ ಬಿಂಬಿತವಾಗಿದೆ. ಆದರೆ ಪಿ.ವಿ. ನರಸಿಂ
ಪ್ರಧಾನ ಮಂತ್ರಿಯಾಗಿದ್ದಾಗ ಮ್ಯಾಗಿ ಡಬ್ಬಲ್
ಆಡುತ್ತಿದ್ದರೆಂಬ ಭಾವನೆ ಸೋನಿಯಾರಲ್ಲಿತ್ತು. ಸೋ
ಪಿವಿಎನ್ ನಡುವೆ 'ವಿಚಾರ ವಾಹಕಿ'ಯಾಗಿದ್ದ
ಕಡೆಕಡೆಗೆ ಆ ಇಬ್ಬರ ಬಗ್ಗೆಯೂ ರೋಸಿಹೋ

ಆಗ ಮ್ಯಾಗಿಯನ್ನು ದೂರ ಸರಿಸುತ್ತ
ಸೋನಿಯಾ ಕೇರಳದ ಎ.ಕೆ. ಆ್ಯಂಟನಿ, ಕರ್ನಾಟಕದ

⏭

ಹೆಗಡೆಜೀ ಎಚ್ಚರಿಕೆ

ರಾಷ್ಟ್ರ ರಾಜಕಾರಣದಲ್ಲಿ ಮಿಂಚಿದ ರಾಮಕೃಷ್ಣ ಹೆಗಡೆ ತಮ್ಮ ತವರು ಉತ್ತರ ಕನ್ನಡದಲ್ಲಿ ಗೆಲ್ಲಲಾಗದೇ ಸೋತು ಸೊರಗಿದ ದೊಡ್ಡ ನಾಯಕ; ಹಾಗೆಯೇ ಮ್ಯಾಗಿಯೂ ಅಂತಾರಾಷ್ಟ್ರೀಯ ಶೃಂಗ ಸಮ್ಮೇಳನಗಳಲ್ಲಿ ಪ್ರೌಢ ಪ್ರಬಂಧ-ಭಾಷಣ ಮಂಡಿಸುವ ತಾಕತ್ತಿನ ಬುದ್ಧಿವಂತ ನಾಯಕಿ. ಈಕೆಗೂ ಉತ್ತರ ಕನ್ನಡದ ಆಳ-ಅಗಲ-ಎತ್ತರ ಅರ್ಥವೇ ಆಗಲಿಲ್ಲ. ಈ ಇಬ್ಬರ ನಡುವೆ ತೆಳುವಾದ ಒಂದು ಬಾಂಧವ್ಯವಿತ್ತು. ಆಗಾಗ ಭೇಟಿಯಾಗುತ್ತಿದ್ದರು. ಮ್ಯಾಗಿ ಕೊನೆಯ ಬಾರಿ ಹೆಗಡೆಯನ್ನು ಸಂಧಿಸಿದ್ದು 2003ರ ಆಗಸ್ಟ್‌ನಲ್ಲಿ. ಹೆಗಡೆ 2004ರಲ್ಲಿ ಮೃತರಾದರು.




ಮ್ಯಾಗಿ ತನ್ನ ಆತ್ಮಕಥೆ 'ಕರೇಜ್ ಅಂಡ್ ಕಮಿಟ್‌ಮೆಂಟ್'ನಲ್ಲಿ ಹೆಗಡೆ ತನಗೆ ದೇಶಪಾಂಡೆಯನ್ನು ನಂಬಬೇಡ ಎಂದು ಹೇಳಿದ್ದರು ಎಂದು ಬರೆದಿದ್ದಾರೆ. ಹೆಗಡೆ ಹಾಗೆ ಹೇಳುವಾಗ ನಗುತ್ತ ಕೇಳಿದ್ದ ತನಗೆ ಕಾಲಕ್ರಮೇಣ ಅದು ನಿಜ ಅನ್ನಿಸಿತು ಎಂದಾಕೆ ಹೇಳಿದ್ದಾರೆ.

"ದೇಶಪಾಂಡೆಗೆ ಕಾಂಗ್ರೆಸ್ ಸೇರಲು ನೀನೇಕೆ ನೆರವಾದಿರಿ? ಆತನ ನಂಬಬೇಡಿ... ಆತನ ಅವಲಂಬಿಸ
ಬೇಡಿ.. ನಾನು ಆತನಿಗೆ ಎಷ್ಟೆಲ್ಲ ಸಹಾಯ ಮಾ
ಆದರೆ ಆತ ನನಗೆ ದ್ರೋಹ ಮಾಡಿದರು..."
ಹೆಗಡೆ ಮೃತರಾಗುವ ಕೆಲವು ತಿಂಗಳ ಮೊದಲು
ಹೇಳಿದ್ದರಂತೆ.

ಹೆಗಡೆಯ ಹಾಗೆ ತನಗೂ ದೇಶಪಾಂಡೆ
ಮಾಡಿದರು. ಆತನಿಗೆ ಕಾಂಗ್ರೆಸ್‌ಗೆ ಸೇರಲು ನೆ
ಟಿಕೆಟ್ ಕೊಡಿಸಿದೆ. ಮಂ
ಮಾಡಿಸಿದೆ. ಆದರೆ ಆತ
ಪಾರ್ಲಿಮೆಂಟ್ ಚುನಾವಣ
ಸೋಲಿಸಲು ಪ್ರಯತ್ನಿಸಿದರು
ಮ್ಯಾಗಿ ಅಲವತ್ತುಕೊಂಡಿದ್ದಾರೆ.
ಮೃತರಾದಾಗ ಅಂತಿಮ ದ
ಹೋಗಿದ್ದ ಮ್ಯಾಗಿಗೆ ಒಂದು
ದೃಶ್ಯ ಕಾಣಿಸಿತಂತೆ. ಹೆಗಡೆ
ಅಂತಿಮ ವಿಧಿವಿಧಾನಕ್ಕೆ ದೇ
ತುಂಬ ಮುತುವರ್ಜಿ ವಹಿಸಿ
ಮಾಡುತ್ತಿದ್ದರಂತೆ. ತಾನು
ಮಾಡಿದ 'ದ್ರೋಹ' ಜನರಿಂದ ಮರೆಮಾಚಲು ದೇ
ಮುಂದೆ ನಿಂತು ಅಂತಿಮಯಾತ್ರೆಯ ಸಿದ್ಧ
ತೊಡಗಿಸಿಕೊಂಡಿದ್ದು ವ್ಯಂಗ್ಯವಾಗಿ ಮ್ಯಾಗಿಗೆ ಗೋಚ

ಇದು ದೋಷಪಾಂಡೆಯ ಅಸಲಿ ಗುಣ-
ಆತನ ಮೂರೂವರೆ ದಶಕದ ರಾಜಕಾರಣವ
ನೋಡಿದರೆ ಇದು ಎಂಥವರಿಗೂ ಖಾತ್ರಿ ಆಗು

ಕೊಡಗು: ಚೆಡ್ಡಿಗಳ ಜೊತೆ ಅರಣ್ಯ ಇಲಾಖೆಯ ಮಸಲತ್ತು



ಸಿದ್ದರಾಮಯ್ಯನವರ ಪುತ್ರ ರಾಕೇಶನ ಸಾವಿನಲ್ಲೂ ...ಕೃತ ಸಂತೋಷವನ್ನು ಕಂಡುಕೊಂಡ ಸಂಘ ಪರಿವಾರ ...ಂತಹ ಕುಕೃತ್ಯಕ್ಕೂ ಹೇಸುವುದಿಲ್ಲ ಎಂಬುದು ಗುಜರಾತ್ ...ಕರಣವೂ ಸೇರಿದಂತೆ ಹಲವಾರು ಪ್ರಕರಣಗಳಿಂದ ...ಬೀತಾಗಿದೆ. ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ...ಜಕೀಯವನ್ನು ಮಾಡಿದ ಹಿಂದೂಪರ ಸಂಘಟನೆಗಳು, ...ಳಸಾ ಬಂಡೂರಿ ಬಗ್ಗೆ ದಿವ್ಯ ಮೌನವನ್ನು ವಹಿಂಸಿವೆ. ...ವರಿಗೆ ಜನರ ನೆಮ್ಮದಿಯ ಬದುಕು ಬೇಕಾಗಿಲ್ಲ, ಶಾಂತಿ ...ದಡುವ ಕಾರ್ಯ ಮಾತ್ರ ಸಾಕು ಎಂಬುದು ಮೇಲಿಂದ ...ಮೇಲೆ ಸಾಬೀತಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ತಾವೇ ಹುಟ್ಟು ಹಾಕಿದ ಟಿಪ್ಪು ...ನ್ಮ ದಿನಾಚರಣೆಯ ವಿವಾದದಿಂದ ಸೃಷ್ಟಿಯಾದ ಅಥವ ...ವರಿಂದಲೇ ಸೃಷ್ಟಿಸಲ್ಪಟ್ಟ ದೇವಟ್‌ಪರಂಬು ಎಂಬ ...ವಾದದಿಂದ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ...ಳಿಕೊಳ್ಳಲಾರದಷ್ಟು ಪೆಟ್ಟು ಬಿದ್ದಿದೆ. ಅವರ ಬುಡವೇ ...ಲ್ಲಾಡಿಹೋಗಿದೆ. ಟಿಪ್ಪುವಿನ ಹೆಸರಿನಲ್ಲಿ ಮತ ಬ್ಯಾಂಕ್ ...ಷ್ಟಿಸುತ್ತೇವೆ ಎಂದು ಅಂದುಕೊಂಡಿದ್ದ ಸಂಘ ಪರಿವಾರಕ್ಕೆ ...ರಿಯಾದ ಹೊಡೆತ ಬಿದ್ದಿದೆ. ದೇವಟ್‌ಪರಂಬು ಎಂಬ ...ಲ್ಲದ ವಿವಾದವನ್ನು ಸೃಷ್ಟಿಸುವ ಮೂಲಕ ಅವರ ...ಜೊತೆಯಲ್ಲಿ ಸಿ.ಎನ್.ಸಿ. ಸಂಘಟನೆ ಮತ್ತು ಅದರ ಅಧ್ಯಕ್ಷ ...ನ್.ಯು. ನಾಚಪ್ಪ ಮುಳುಗುವ ಹಂತದಲ್ಲಿ ಇದ್ದಾರೆ.

ಇದು ಕೊಡಗು ಜಿಲ್ಲೆಯ ಅರಣ್ಯ ಇಲಾಖೆಯ ಕಾರ್ಯ...ವೈಖರಿ ಗಂಭೀರವಾಗಿ ವಿಮರ್ಶೆಗೆ ಒಳಪಡಬೇಕಾದಂತಹ ...ಚಾರವಾಗಿದೆ. ಕೊಡಗು ಜಿಲ್ಲೆಯ ಮುಖ್ಯ ಅರಣ್ಯ ...ರಕ್ಷಣಾಧಿಕಾರಿ ಮನೋಜ್‌ಕುಮಾರ್ ಎಂಬ ಅಂದರಿಕಿ ...ಂಚ್‌ವಾಡು ಮತ್ತು ಅನಂತರಾಮು ಎಂಬ ವ್ಯಕ್ತಿ ಬಹಳ ...ಯುಗ್ಧತೆಯ ಸೋಗನ್ನು ಹಾಕಿಕೊಂಡು, ಕೊಡಗು ಜಿಲ್ಲೆಯ ...ತಾಪಿವರ್ಗಕ್ಕೆ ಅನ್ಯಾಯ ಮಾಡಲು ಹೊರಟಿದ್ದಾರೆ. ...ವಟ್‌ಪರಂಬು ವಿಚಾರದಲ್ಲಿ ಅರಣ್ಯ ಇಲಾಖೆಯವರು ...ಪೂರ್ಣವಾಗಿ ಈ ವಿವಾದಕ್ಕೆ ಸಹಕಾರ ನೀಡಿದ್ದಾರೆ ...ತ್ತು ಸಂಘ ಪರಿವಾರ ಮತ್ತು ನಾಚಪ್ಪರ ಜೊತೆ ...ರಿಕೊಂಡು ಅರಣ್ಯ ಇಲಾಖೆಯ ಜಮೀನಿನಲ್ಲಿ ಸ್ಮಾರಕ ...ರ್ಮಿಸಲು ಸಹಕಾರ ನೀಡಿದ್ದಾರೆ ಎಂಬುದು ಅರಣ್ಯ ...ಲಾಖೆಯವರು ಮಡಿಕೇರಿ ಅಡಿಷನಲ್ ಮುನ್ಸಿಫ್ ...ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪಣಾ ಪಟ್ಟಿ ...ಮನಿಸಿದಾಗ ಕಂಡುಬರುತ್ತದೆ.

ದೋಷಪೂರ್ಣ ದೋಷಾರೋಪಣಾ ಪಟ್ಟಿ

ಅರಣ್ಯ ಇಲಾಖೆ ನಾಚಪ್ಪ ಮತ್ತು ಸಂಗಡಿಗರ ಮೇಲೆ ಆರೋಪ ಪಟ್ಟಿಯನ್ನು ಸಲ್ಲಿಸಿದೆ. ಈ ಆರೋಪ ಪಟ್ಟಿಯಲ್ಲಿ 21-12-2015ರಂದು ಆರೋಪಿಗಳು ಭಾಗಮಂಡಲ ಅರಣ್ಯ ವಲಯದ ಅಯ್ಯಂಗೇರಿ ಮೀಸಲು ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಪ್ರವೇಶಿಸಿ ಚೌಕಾಕಾರದಲ್ಲಿ 4 ಕಲ್ಲಿನ ಕಂಬಗಳನ್ನು ನೆಟ್ಟು, ಮಧ್ಯಭಾಗದಲ್ಲಿ ಕಲ್ಲಿನ ಸ್ಮಾರಕವನ್ನು ನಿರ್ಮಿಸಿದ್ದಾರೆ. ಜೊತೆಗೆ ಇದಕ್ಕೆ ಬಳಸಲಾದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ಅಂದರೆ ನಾಚಪ್ಪ ಮತ್ತು ಸಂಗಡಿಗರು ಅರಣ್ಯವನ್ನು ಅಕ್ರಮವಾಗಿ ಪ್ರವೇಶಿಸಿದ್ದಾರೆ ಎಂಬ ಆರೋಪವನ್ನು ಅರಣ್ಯ ಇಲಾಖೆಯೇ ಮಾಡಿದೆ. ಹಾಗಿರುವಾಗ ಅವರನ್ನು ಬಂಧಿಸಿ, ಸಂಬಂಧಪಟ್ಟ ವಾಹನಗಳನ್ನು ವಶಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿತ್ತು, ಆದರೆ ಇಲಾಖೆ ಹಾಗೆ ಮಾಡದೆ ತನ್ನ ವ್ಯಾಪ್ತಿಯಲ್ಲಿ ಅವರನ್ನು ಬಂಧಿಸಿದಂತೆ ಮಾಡಿ ಮತ್ತು ವಾಹನಗಳನ್ನು ವಶಪಡಿಸಿಕೊಂಡಂತೆ ಮಾಡಿ, ಎಲ್ಲವನ್ನೂ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಇದೆಲ್ಲಾ ಪೂರ್ವ ನಿರ್ಧಾರಿತ.

ತಮಾಷೆ ಎಂದರೆ ಅರಣ್ಯ ಇಲಾಖೆ ಅಲ್ಲಿನ ಕಲ್ಲುಗಳನ್ನು ವಶಪಡಿಸಿಕೊಳ್ಳುವ ವಿಚಾರದಲ್ಲಿ ಮೀನಾ-ಮೇಷ ಎಣಿಸುತ್ತಿದೆ. ಇಲಾಖೆ ನಾಚಪ್ಪ ಮತ್ತು ಸಂಗಡಿಗರ ವಿರುದ್ಧ ಪ್ರಕರಣವೊಂದನ್ನು ದಾಖಲಿಸಿಕೊಂಡಿದೆ. ಈ ಪ್ರಕರಣದ ವಿಚಾರಣೆಗೆ ಸಂಬಂಧಪಟ್ಟ ಅರಣ್ಯ ಅಧಿಕಾರಿಗಳ ಮುಂದೆ ಹಾಜರಾಗಬೇಕು ಎಂದು ನೋಟಿಸು ನೀಡಿದ್ದು, ನಾಚಪ್ಪ ಈಗಾಗಲೇ ಮಡಿಕೇರಿ ಡಿ.ಸಿ.ಎಫ್. ಮುಂದೆ ಹಾಜರಾಗಿದ್ದಾರೆ.



ಇದರಲ್ಲಿ ತಮಾಷೆ ಏನೆಂದರೆ ಕಲ್ಲುಗಳನ್ನು ಅಕ್ರಮವಾಗಿ ನೆಟ್ಟ ಜಾಗ ನಿಮ್ಮದು ಎನ್ನುವುದಕ್ಕೆ ದಾಖಲೆಗಳನ್ನು ಹಾಜರುಪಡಿಸಬೇಕು ಎಂದು ಇಲಾಖೆ ಅವರನ್ನು ಕೇಳಿದೆ. ಒಂದು ಕಡೆ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವಾಗ ಅವರ ಮೇಲೆ ಅಕ್ರಮ ಪ್ರವೇಶದ ಆರೋಪವನ್ನು ಮಾಡಿದ ನಂತರ, ಮತ್ತೊಂದು ಕಡೆ ಆ ಪ್ರದೇಶ ನಿಮ್ಮದು ಎನ್ನುವುದಕ್ಕೆ ಏನು ದಾಖಲೆ ಇದೆ ಎಂಬುದನ್ನು ನಮಗೆ ನೀಡಿ ಎಂದು ಅರಣ್ಯ ಇಲಾಖೆ ಕೇಳುತ್ತದೆ ಎಂದಾದರೆ, ಇದು ಯಾವ ರೀತಿಯ ವಿಚಾರಣೆ ಎಂದು ಪ್ರಶ್ನಿಸಬೇಕಾಗುತ್ತದೆ.


ಮತ್ತೊಂದು ಕಡೆ ಅರಣ್ಯ ಇಲಾಖೆಯವರು ಕಲ್ಲುಗಳನ್ನು ವಶಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅವುಗಳು ತನ್ನ ವಶದಲ್ಲಿ ಇದೆ ಎಂದು ಕೂಡ ಹೇಳಿಲ್ಲ. ಇಡೀ ಪ್ರಕರಣವೇ ಸ್ಮಾರಕ ನಿರ್ಮಿಸಿದ ವಿಚಾರಕ್ಕೆ ಸಂಬಂಧಪಟ್ಟದ್ದಾಗಿದೆ. ಹಾಗಿರುವಾಗ ನ್ಯಾಯಾಲಯಕ್ಕೆ ಕಲ್ಲುಗಳನ್ನು ಹಾಜರುಪಡಿಸಿಲ್ಲ ಎಂದಾದರೆ, ಪ್ರಕರಣ ಖಂಡಿತವಾಗಿಯೂ ನ್ಯಾಯಾಲಯದಲ್ಲಿ ಸಾಬೀತಾಗುವುದಿಲ್ಲ. ನಾಚಪ್ಪ ತನ್ನ ಲಿಖಿತ ಹೇಳಿಕೆಯಲ್ಲಿ ಜೆಸಿಬಿ ಸಹಾಯದಿಂದ ತಾನು ಅಕ್ರಮ ಪ್ರವೇಶ ಮಾಡಿ, ಸ್ಮಾರಕ ನಿರ್ಮಿಸಿರುವುದು ಸತ್ಯ ಎಂದು ಒಪ್ಪಿಕೊಂಡಿದ್ದಾರೆ.

ಈ ಕಲ್ಲನ್ನು ನೆಡುವ ಮುನ್ನ ಈ ಹಿಂದೆ ಪತ್ರಿಕೆಯಲ್ಲಿ ಬರೆದಂತೆ ಮತ್ತೊಂದು ಕಡೆ ನಾಚಪ್ಪ ಸ್ಮಾರಕ ಕಲ್ಲನ್ನು ನೆಟ್ಟಿದ್ದು, ಅದನ್ನು ಅರಣ್ಯ ಇಲಾಖೆ ವಶಪಡಿಸಿಕೊಳ್ಳುವುದಾಗಲಿ ಅಥವ ಆ ಬಗ್ಗೆ ಪ್ರಕರಣ ದಾಖಲಿಸಲಾಗಲಿ ಮುಂದಾಗಿಲ್ಲ. ಅಂದರೆ ಅರಣ್ಯ ಇಲಾಖೆ ಇಲ್ಲಿ ಸಂಪೂರ್ಣವಾಗಿ ನಾಚಪ್ಪನಿಗೆ ಬೆಂಬಲವಾಗಿ ನಿಂತಿದೆ ಎಂಬುದು ಖಚಿತವಾಗುತ್ತದೆ.

ಮನೋಜ್‌ಕುಮಾರ್‌ರವರ ಅತೀ ಜಾಣ್ಮೆ

ದೇವಟ್‌ಪರಂಬು ವಿವಾದದಲ್ಲಿ ಅರಣ್ಯ ಇಲಾಖೆಯ ಕಾರ್ಯವೈಖರಿ ಟೀಕೆಗೆ ಒಳಗಾದ ಕೂಡಲೇ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್ ಅತ್ಯಂತ ಜಾಣ್ಮೆಯನ್ನು ಪ್ರದರ್ಶಿಸಿ ತನ್ನ ದಾಳವನ್ನು ಉರುಳಿಸಿದ್ದಾರೆ. ಕೊಡಗಿನಲ್ಲಿ ಜನವಿರೋಧಿ ಮತ್ತು ರೈತ ವಿರೋಧಿ ಧೋರಣೆಯನ್ನು ತಾಳಿಕೊಂಡು ತನ್ನ ನಾಜೂಕಿನ ಮಾತಿನಿಂದ ಮರುಳು ಮಾಡುತ್ತಾ, ಕೊಡಗಿನ ಕಾಫಿತೋಟಗಳಲ್ಲಿ ನೆಲೆ ನಿಂತಿರುವ ಆನೆಗಳನ್ನು ಕಾಡಿಗೆ ಅಟ್ಟುವ ವಿಚಾರದಲ್ಲಿ ತನ್ನಷ್ಟು ಕೆಲಸ ಮಾಡಿದವರು ಯಾರೂ ಇಲ್ಲ ಎಂದು ಹೇಳಿಕೊಂಡು, ತನ್ನ ಕೈಕೆಳಗಿನವರು ಮಾಡಿದ ಕಾರ್ಯಕ್ಕೂ ತಾನೇ ಶಭಾಷ್‌ಗಿರಿ ಪಡೆಯುತ್ತಾ, ತನ್ನ ಬೆನ್ನನ್ನು ತಾನೇ ತಟ್ಟುಕೊಳ್ಳುತ್ತಿರುವ ವ್ಯಕ್ತಿ ಮನೋಜ್ ಕುಮಾರ್.

ಕರ್ನಾಟಕ ರಾಜ್ಯ ಸರಕಾರ ಅರಣ್ಯ ಕಾಯ್ದೆಗೆ ತಿದ್ದುಪಡಿಯನ್ನು ತಂದ ನಂತರ ಕೆಲವು ಬಗೆಯ ಮೆದು ಮರಗಳನ್ನು ಕಡಿಯಲು ಇಲಾಖೆಯ ಅನುಮತಿಯ ಅಗತ್ಯವಿಲ್ಲ, ಕೃಷಿಕ ಅದನ್ನು ಕಡಿಯಲು ಮುಕ್ತವಾಗಿರುತ್ತಾನೆ ಎಂದು ಕಾನೂನು ಕೃಷಿಕನ ಪರವಾಗಿ ನಿಲುವು ತೆಗೆದುಕೊಂಡರೆ ಈ ಕಾನೂನಿಗೆ ವಿರುದ್ಧವಾಗಿ ಮನೋಜ್‌ಕುಮಾರ್ ತನ್ನ ಕೆಳಗಿನ ಅಧಿಕಾರಿಗಳಿಗೆ ಆದೇಶವನ್ನು ನೀಡಿ, ಮೆದು ಮರಗಳನ್ನು ಕಡಿದರೆ ಅದನ್ನು ಅಮಾನತ್ತುಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಈ ಆದೇಶ ಅಕ್ರಮವಾಗಿದೆ. ಇದನ್ನು ಪ್ರಶ್ನಿಸಿದರೆ ತಾನು ಇರುವುದು ಅರಣ್ಯವನ್ನು ಸಂರಕ್ಷಿಸಲೇ ವಿನಹ, ಅರಣ್ಯವನ್ನು ನಾಶಪಡಿಸಲು ಅಲ್ಲ ಎನ್ನುವ ಉದ್ಧಟತನದ ಉತ್ತರವನ್ನು ಅವರು ನೀಡುತ್ತಾರೆ. ಸರಕಾರ ತಂದ ತಿದ್ದುಪಡಿ ಅರಣ್ಯ ಇಲಾಖೆಯ ವಶದಲ್ಲಿರುವಂತಹ ಪ್ರದೇಶದಲ್ಲಿ ಮೆದು ಮರವನ್ನು ಕಡಿಯುವುದಕ್ಕೆ ಅಲ್ಲ, ತಿದ್ದುಪಡಿ ತಂದದ್ದು ಕೃಷಿಕನ ವಶದಲ್ಲಿರುವ ಜಮೀನಿನಲ್ಲಿ ಮರ ಕಡಿಯುವುದಕ್ಕೆ. ಆದರೆ ಮನೋಜ್ ಕುಮಾರ್ ದಿಕ್ಕು ತಪ್ಪಿಸುವ ಹೇಳಿಕೆಯನ್ನು ನೀಡುತ್ತಾರೆ. ಹಾಗೆಯೇ ಕೆಲವು ಮರ ವ್ಯಾಪಾರಿಗಳು ಇದರ ಹೆಸರಿನಲ್ಲಿ ಬೇರೆ ಮರಗಳನ್ನು ಕಡಿದು ಸಾಗಿಸುತ್ತಾರೆ ಎಂದು ಹೇಳುತ್ತಾರೆ. ಕೊಡಗಿನ ಎಲ್ಲಾ ಗಡಿಯಲ್ಲಿಯೂ ಅರಣ್ಯ ಇಲಾಖೆಯ ಚೆಕ್‌ಪೋಸ್ಟ್‌ಗಳು ಇದ್ದು, ಹಾಗೆ ಕಳ್ಳತನದಿಂದ ಮರ ಸಾಗಾಟವಾದರೆ ಅದನ್ನು ಪತ್ತೆಹಚ್ಚಬೇಕೇ ವಿನಃ, ಅದರ ಹೆಸರಿನಲ್ಲಿ ಕಿರುಕುಳ ನೀಡುವುದು ಸರಿಯಲ್ಲ, ಇದನ್ನೂ ಸೇರಿದಂತೆ ಮನೋಜ್ ಕುಮಾರ್‌ರವರ ಹಲವಾರು ಕಾರ್ಯವೈಖರಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನ್ಯಾಯಾಲಯ ಇಲಾಖೆಯ ಈ ವೈಖರಿಯನ್ನು ಟೀಕಿಸಿದೆ. ಹಲವಾರು ಪ್ರಕರಣಗಳಲ್ಲಿ ಕೃಷಿಕನ ಪರವಾಗಿ ಆದೇಶವನ್ನು ಹೊರಡಿಸಿದೆ.




ಮನೋಜ್ ಕುಮಾರ್

ಈ ಆದೇಶವನ್ನು ಸ್ವೀಕರಿಸಿ, ಅದರಂತೆ ಕಾರ್ಯ ನಡೆಸುವ ಬದಲು, "ನ್ಯಾಯಾಧೀಶರು ಮತ್ತು ವಕೀಲರು ಸೇರಿಕೊಂಡು ಯಾವುದೇ ಆದೇಶವನ್ನು ಹೊರಡಿಸಬಹುದು. ಅದನ್ನು ತಾನು ಮಾನ್ಯ ಮಾಡುವುದಿಲ್ಲ" ಎಂದು ನ್ಯಾಯಾಂಗ ನಿಂದನೆಯ ಮಾತುಗಳನ್ನು ಮನೋಜ್ ಕುಮಾರ್ ಆಡಿದ್ದಾರೆ ಮತ್ತು ನ್ಯಾಯಾಲಯದ ಆದೇಶಗಳನ್ನು ಧಿಕ್ಕರಿಸಿದ್ದಾರೆ. ಹಾಗಾಗಿ ಹಲವು ಪ್ರಕರಣಗಳಲ್ಲಿ ನ್ಯಾಯಾಂಗನಿಂದನೆ ಮೊಕದ್ದಮೆಯನ್ನು ನೇರವಾಗಿ ಎದುರಿಸುತ್ತಿದ್ದಾರೆ. ತಾನು ನ್ಯಾಯಾಲಯದ ಅವಕೃಪೆಗೆ ಒಳಗಾಗಿದ್ದೇನೆ ಎಂಬುದು ಮನೋಜ್ ಕುಮಾರ್‌ರವರಿಗೆ ತಿಳಿದಿದೆ. ಆದರೂ ನಾಚಪ್ಪನ ಜೊತೆಯಲ್ಲಿ ಸೇರಿಕೊಂಡು, ಚಾರಿತ್ರ್ಯ ಹನನ ಕಾರ್ಯದಲ್ಲಿ ತೊಡಗಿದ್ದಾರೆ.

ಇಂತಹ ಹಲವು ಪ್ರಕರಣಗಳಿಗೆ ಹಿರಿಯ ವಕೀಲರಾದ ಎ.ಕೆ. ಸುಬ್ಬಯ್ಯ ವಕಾಲತ್ತು ವಹಿಸಿದ್ದಾರೆ. ದೇವಟ್‌ಪರಂಬು ವಿವಾದದಲ್ಲಿ ನಾಚಪ್ಪ ಇಲ್ಲದ ವಿವಾದವನ್ನು ಸೃಷ್ಟಿಸಿ ಕೊಡಗಿನಲ್ಲಿ ಜನಾಂಗೀಯ ದ್ವೇಷಕ್ಕೆ ಕಾರಣರಾಗಿದ್ದಾರೆ. ಹಾಗಾಗಿ ಅವರ ಮತ್ತು ಅವರ ಸಂಘಟನೆಯ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸುಬ್ಬಯ್ಯ ಕೊಡಗು ಸೌಹಾರ್ದ ವೇದಿಕೆಯ ಮೂಲಕ ಒತ್ತಡವನ್ನು ತಂದಿದ್ದೇ ಅಲ್ಲದೆ, ಆ ಕಲ್ಲುಗಳನ್ನು ವಶಪಡಿಸಿಕೊಳ್ಳಬೇಕೆಂದು ಆಗ್ರಹಪಡಿಸಿದ್ದರು. ಜೊತೆಗೆ ಅರಣ್ಯ ಇಲಾಖೆಯ

⏭ 06

ಹರಪನಹಳ್ಳಿ: ಬುರ್ಡೆ ಪರುಶ್ರಾಮನ 'ಬೋಗಸ್' ಪುರಾಣಗಳ


ಬುರ್ಡೆ ಪರುಶ್ರಾಮ

ಹರಪನಹಳ್ಳಿಯ ತೆಗ್ಗಿನಮಠದಲ್ಲಿ 'ನಟರಾಜ ಕಲಾಭವನ' ಎಂಬೊಂದು ರಂಗಶಾಲೆ ಇದೆ. ಅದಕ್ಕೊಬ್ಬ ಪ್ರಿನ್ಸಿಯೂ ಇದ್ದಾನೆ. ಅವನ ಹೆಸರು ಬಿ.ಪರಶುರಾಮ. ಹರಪನಹಳ್ಳಿಯ ಮಂದಿ ಇವನಿಗೆ ಪ್ರೀತಿಯಿಂದ ಕೊಟ್ಟ ಬಿರುದು 'ಬುರ್ಡೆ ಪರುಶ್ರಾಮ'! ಅಷ್ಟರಮಟ್ಟಿಗೆ ಸಾಂಸ್ಕೃತಿಕ ಲೋಕಕ್ಕೆ ಅಂಟಿದ ಘಾತಕ ಚಹರೆ ಇವನದು. ದಲಿತ ಚಳವಳಿ, ಎಡಪಂಥೀಯ ಹೋರಾಟ, ರಂಗಸೇವೆ ಅಂತ ಸಜ್ಜನಿಕೆಯ ಮುಖವಾಡ ತೊಟ್ಟ ಇವನ ಕರಾಳ ಮುಖದ ತುಂಬಾ ಹರಡಿಕೊಂಡಿರುವ ನಕಲಿ ಜಾತಿಪತ್ರ, ಬೋಗಸ್ ಡಿಪ್ಲೊಮಾ ಸರ್ಟಿಫಿಕೇಟ್, ನಂಬಿಕೆದ್ರೋಹದಂತಹ ವ್ರಣಗಳೇ ಹತ್ತಿರದಿಂದ ನೋಡುವವರಿಗೆ ಅಸಹ್ಯ ಹುಟ್ಟಿಸುತ್ತವೆ. ಒಂದುಕಾಲದಲ್ಲಿ ಇಡೀ ಬಳ್ಳಾರಿ ಜಿಲ್ಲೆಯೇ ಗೌರವ ಕೊಡುತ್ತಿದ್ದಂತಹ ಪ್ರಗತಿಪರ, ಎಡಪಂಥೀಯ ಹೋರಾಟಗಳಿಗೆ ಮುಂಚೂಣಿ ನಾಯಕತ್ವ ಒದಗಿಸಿಕೊಟ್ಟಿದ್ದ ಪ್ರೊಫೆಸರ್ ಹಿರೇಮಠರಂತವರನ್ನೂ ಮುಕ್ಕಿ ಮುಗಿಸಿಬಿಡುವ ಬುರ್ಡೆ ಪರುಶ್ರಾಮನ ಪರಾಕ್ರಮಗಳು ಒಂದೆರಡಲ್ಲ.

ಇವತ್ತು ತಾನೊಬ್ಬ ರಂಗಕರ್ಮಿ ಅಂತ ಪೋಜು ಕೊಡುತ್ತಿರುವ ಬುರ್ಡೆ ಪರುಶ್ರಾಮ ಇಪ್ಪತ್ತೈದು ವರ್ಷಗಳ ಹಿಂದೆ ಖಾಕಿ ಧಿರಿಸು ಧರಿಸಿದ್ದ ಪೊಲೀಸಪ್ಪ, ಅದೇನಂತಹ ಕರಾಮತ್ತು ತೋರಿಸಿದನೋ ಏನೊ ಇಲಾಖೆ ಇವನನ್ನು ಡಿಸ್ಮಿಸ್ ಮಾಡಿ ಮನೆಗಟ್ಟಿತ್ತು. ಅಷ್ಟರಲ್ಲಾಗಲೆ ಜನರನ್ನು ವಂಚಿಸಲು ಬೇಕಾದ 'ಬೂಟಾಟಿಕೆ'ಗಳನ್ನೆಲ್ಲ ಆತ ಕರಗತ ಮಾಡಿಕೊಂಡಿದ್ದ. ಖಾಕಿ ಕೆಲಸ ಹೋಗುತ್ತಿದ್ದಂತೆಯೇ ಹರಪನಹಳ್ಳಿಯಲ್ಲಿ ತಳವೂರಿದ ಬುರ್ಡೆ ಪರುಶ್ರಾಮನಿಗೆ ಬಂಡವಾಳ ಆದದ್ದು ಅಂದಿನ ಬಳ್ಳಾರಿಯ ಹೀನಸ್ಥಿತಿ. ಆಗಿನ್ನೂ ಹರಪನಹಳ್ಳಿ ಬಳ್ಳಾರಿ ಜಿಲ್ಲೆಯಲ್ಲಿತ್ತು. ಹಸಿವು-ಬಡತನ ಅಂತೆಲ್ಲ ಬರಗಾಲದ ಬೀಡಾಗಿದ್ದ ಬಳ್ಳಾರಿಯಲ್ಲಿ ಅನಕ್ಷರತೆ, ಉಳ್ಳವರ ದೌರ್ಜನ್ಯ, ಫ್ಯೂಡಲ್ ವರಸೆಗಳು, ಪಂಚಮಸಾಲಿ ಭೂಮಾಲೀಕರ ದರ್ಪಗಳು ಬಡವರನ್ನು ಕಿತ್ತು ತಿನ್ನುತ್ತಿದ್ದವು. ಅದೇವೇಳೆಗೆ ಕರ್ನಾಟಕ ಬಂಡಾಯ, ದಲಿತ, ಕಮ್ಯುನಿಸ್ಟ್ ಚಳವಳಿಗಳಿಗೆ ತೆರೆದುಕೊಳ್ಳಲು ಶುರುವಾಡಿತ್ತು. ಅದರ ಕಾವು ಹರಪನಹಳ್ಳಿಯಲ್ಲೂ ತೋರಿಬರುತ್ತಿದ್ದವು. ಅಂತಹ ಹೋರಾಟಗಳಿಗೆಲ್ಲ ಕಾಲೇಜು ಉಪನ್ಯಾಸಕರಾಗಿದ್ದ ಪ್ರೊಫೆಸರ್ ಹಿರೇಮಠರದ್ದೇ ಸಾರಥ್ಯ. ಕೆಲಸ ಕಳೆದುಕೊಂಡು ಖಾಲಿ ದಾಸಯ್ಯನಂತೆ ಅಂಡಲೆಯುತ್ತಿದ್ದ ಬುರ್ಡೆ ಪರುಶ್ರಾಮ ಅಂತಹ ಕಮ್ಯುನಿಸ್ಟ್ ಚಳವಳಿಯನ್ನೇ ಅನ್ನಕ್ಕೆ ದಾರಿ ಮಾಡಿಕೊಂಡದ್ದು ವಿಪರ್ಯಾಸ.

ಹಿರೇಮಠ ಅವರಿಗಿದ್ದ ಪ್ರಭಾವಳಿಯನ್ನು ಕಂಡು ಅವರ ವಿಶ್ವಾಸ ಗಳಿಸಿದ ಬುರ್ಡೆ ಪರುಶ್ರಾಮ ಕೆಲವೇ ದಿನಗಳಲ್ಲಿ ಅವರ ಸ್ವಯಂಘೋಷಿತ ಶಿಷ್ಯನಂತೆ ಠಳಾಯಿಸಲು ಶುರುಮಾಡಿದ್ದ. ಕಮ್ಯುನಿಸ್ಟ್ ಚಳವಳಿಯ ಒಲವಿನಿಂದಲೇ ತಾನು ಪೊಲೀಸ್ ಕೆಲಸಕ್ಕೆ ರಾಜೀನಾಮೆ ಗೀಚಿಬಂದೆ ಎನ್ನುತ್ತಿದ್ದ ಅವನ ಸುಳ್ಳುಗಳನ್ನು ಸಾಮಾನ್ಯ ಮುಗ್ಧ ಜನರಂತೆ ಪ್ರೊಫೆಸರ್ ಹಿರೇಮಠರೂ ಸಲೀಸಾಗಿ ನಂಬಿಬಿಟ್ಟಿದ್ದರು. ಅದೇ ಅವರ ಬದುಕಿಗೆ ಬಹುದೊಡ್ಡ ಮುಳುವಾಯ್ತು.

ಹಿರೇಮಠರದು ಶ್ರೀಮಂತ ಹಿನ್ನೆಲೆಯೇನಲ್ಲ, ಕಾಲೇಜು ಉಪನ್ಯಾಸಕರಾಗಿ ಸರಳ ಜೀವನಕ್ಕೆ ಒಗ್ಗಿಕೊಂಡಿದ್ದವರು. ಮೂಲತಃ ಪ್ರಭಾವಿ ಲಿಂಗಾಯತ ಸಮುದಾಯಕ್ಕೆ ಸೇರಿದ್ದರೂ ಜಾತಿ-ಧರ್ಮಗಳ ಬೇಲಿದಾಟಿ ಮನುಷ್ಯ ಪಥದಲ್ಲಿ ಮಾನವೀಯ ಹೆಜ್ಜೆ ಇಟ್ಟವರು. ತಮ್ಮ ಹೋರಾಟದ ನಡುವೆಯೇ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ಅವರಿಗೆ ವಿಪರೀತ ಹಂಬಲವಿತ್ತು. ಹಾಗಾಗಿ ದುಡಿಮೆಯ ದುಡ್ಡನ್ನೇ ಚೂರುಪಾರು ಕೂಡಿಟ್ಟು ನಗರಕ್ಕೆ ಹೊಂದಿಕೊಂಡಂತೆಯೇ ಒಂದಷ್ಟು ಎಕರೆ ಜಮೀನು ಖರೀದಿಸಿ, ಅದಕ್ಕೆ 'ಶೃಂಗಾರ ತೋಟ' ಅನ್ನೋ ಹೆಸರಿಟ್ಟಿದ್ದರು. ಅಂತಹ ಅವರ ಕನಸಿನ ನೆಲದ ಮೇಲೆ ಬುರ್ಡೆ ಪರುಶ್ರಾಮನ ಕಣ್ಣುಬಿತ್ತು ನೋಡಿ, ತಡಮಾಡಲಿಲ್ಲ, ಬಂಡಾಯ ಸಾಹಿತ್ಯದ ಬೇರಿನಂತಿದ್ದ ಹಿರೇಮಠರನ್ನು ಅಕ್ಷರಶಃ ರಿಯಲ್ ಎಸ್ಟೇಟ್ ಏಜೆಂಟರನ್ನಾಗಿಸಿ ಅವರ ಬದುಕಿನ ಮೌಲ್ಯಗಳನ್ನೇ ತನ್ನ ಕಾಲಡಿ ಹಿಸುಕಾಡಿ ಕೊಂದುಬಿಟ್ಟ ಈ ಕಿರಾತಕ.


ಬುರ್ಡೆ ಪರುಶ್ರಾಮನನ್ನು ಅತಿಯಾಗಿ ನಂಬಿದ್ದ ಹಿರೇಮಠರು ಅವನಾಡುತ್ತಿದ್ದ ಕೃಷಿ ಕನಸಿನ ಮಾತುಗಳಿಗೆ ಬೆರಗಾಗಿ ತಮ್ಮ ಶೃಂಗಾರ ತೋಟವನ್ನು ಇವನ ಕೈಗಿತ್ತಿದ್ದಲ್ಲದೇ ಉಳುಮೆ ಮಾಡಲೆಂದು ಜೋಡಿ ಎತ್ತುಗಳು, ಇನ್ನಿತರೆ ಸಲಕರಣೆಗಳನ್ನು ಕೊಡಿಸಿ ಈ ನೆಲವನ್ನು ಹಸಿರಾಗಿಸು ಎಂದರು. ಆದರೆ ಬುರ್ಡೆ ಪರುಶ್ರಾಮನಿಗೆ ಹರಪನಹಳ್ಳಿಯಂತಹ ಸಿಟಿಯಿಂದ ಕೇವಲ ನಾಲ್ಕೇ ಕಿಲೋಮೀಟರ್ ದೂರದಲ್ಲಿರುವ ಆ ನೆಲದ 'ಬೆಲೆ'ಯ ಮೇಲೆ ಕಣ್ಣಿತ್ತೇ ವಿನಃ ಅದನ್ನು ಹಸಿರಾಗಿಸುವ ಯಾವ ಇರಾದೆಯೂ ಇರಲಿಲ್ಲ. ಹಾಗಾಗಿ ಸುಖಾಸುಮ್ಮನೇ ಕೃಷಿಯನ್ನು ಲುಕ್ಸಾನಿನ ಹಾದಿಯೆಂಬಂತೆ ಬಿಂಬಿಸುತ್ತಾ ಬಂದ. ಕೊನೆಗೊಮ್ಮೆ ಹೀಗೆ ವ್ಯವಸಾಯ ಮಾಡುವುದಕ್ಕಿಂತ ಇದೇ ಜಮೀನನ್ನು ಸೈಟುಗಳಾಗಿ ಪರಿವರ್ತಿಸಿ ಮಾರಾಟ ಮಾಡಿದರೆ ಕಾಸು ಕಾಣಬಹುದೆಂದು ಹಿರೇಮಠರನ್ನು ಪುಸಲಾಯಿಸಿದ. ವಿಪರ್ಯಾಸವೆಂದರೆ, ಅಷ್ಟೂದಿನ ಅಂತಹ ಬಂಡವಾಳಶಾಹಿ ಕಸುಬುಗಳ ವಿರುದ್ಧ ಹೋರಾಡುತ್ತಲೇ ಬಂದಿದ್ದ ಹಿರೇಮಠರು ಕೂಡಾ ಅದಕ್ಕೆ ಸಮ್ಮತಿಸಿಬಿಟ್ಟರು. ಅಷ್ಟರಮಟ್ಟಿಗೆ ಅವರ ಬ್ರೈನ್ ವಾಶ್ ಮಾಡಿದ್ದ ಈ ನಮ್ಮ ಬುರ್ಡೆ ಪರುಶ್ರಾಮ. ತಮ್ಮ ತಪ್ಪಿನ ಅರಿವಾಗುವ ವೇಳೆಗಾಗಲೆ ಕಾಲಮಿಂಚಿಹೋಗಿತ್ತು. ಬುದ್ಧ, ಬಸವ, ಮಾರ್ಕ್ಸ್, ಲೆನಿನ್ ಅಂತ ಮಕ್ಕಳಿಗೆ ಪಾಠ ಮಾಡುವುದು, ಹೋರಾಡುವುದಷ್ಟೇ ಬದುಕಾಗಿಸಿಕೊಂಡಿದ್ದ ಹಿರೇಮಠರಿಗೆ ಇಂತಹ ವ್ಯವಹಾರ ಜ್ಞಾನವೇ ಇರಲಿಲ್ಲ, ಅದನ್ನೇ ಬಂಡವಾಳ ಮಾಡಿಕೊಂಡು ನಿವೇಶನಗಳನ್ನು ಮಾರಾಟ ಮಾಡಿದ ಹಣವನ್ನು ಬುರ್ಡೆ ಪರುಶ್ರಾಮ ಲಪಟಾಯಿಸುತ್ತಾ ಬಂದ. ಪರುಶ್ರಾಮ ಮಾಡಿದ ನಿವೇಶನ ಬಾನ್ಗಡಿಗೆ ಬಲಿಯಾಗಿ ಚಿಂತೆಗೀಡಾದ ಹಿರೇಮಠರು ಹಾಸಿಗೆ ಹಿಡಿದು ಕೊನೆಗೊಂದು ದಿನ ಸತ್ತೇಹೋದರು. ಅಷ್ಟೊತ್ತಿಗಾಗಲೆ ಬುರ್ಡೆ ಪರುಶ್ರಾಮನ ಬದುಕು ದುಂಡಗಾಗಿತ್ತು!

ನಕಲಿ ಹೋರಾಟಗಾರನ ಬೋಗಸ್ ಜಾತಿ

ಬುರ್ಡೆ ಪರುಶ್ರಾಮ ಸಾಮಾನ್ಯದವನಲ್ಲ, ಬದುಕಬೇಕೆಂದರೆ ಏನು ಬೇಕಾದರು ಮಾಡಲು ಸಿದ್ಧ. ಅವನ ನಕಲಿ ಜಾತಿಪ್ರಮಾಣ ಪತ್ರವೇ ಇದಕ್ಕೆ ಸಾಕ್ಷಿ. ಈ ಬುರ್ಡೆ ಮೂಲತಃ ಉಪ್ಪಾರ ಜಾತಿಗೆ ಸೇರಿದವ. ಇನ್ನು ಇವನ ಹೆಂಡತಿ ದೇವೀರಮ್ಮ ಕಬ್ಬಾರ ಜಾತಿಗೆ ಸೇರಿದವರು. ಇವರಿಬ್ಬರದೂ ಅಂತರ್ಜಾತಿ ವಿವಾಹ. ವಿಚಿತ್ರವೆಂದರೆ ಇವೆರಡೂ ಜಾತಿಯಲ್ಲದ ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರುವ 'ನಾಯಕ' ಜಾತಿಯ ಬೋಗಸ್ ಸರ್ಟಿಫಿಕೇಟ್ ಸೃಷ್ಟಿಸಿ ಕೊಂಡು ಸರ್ಕಾರದ ಸೌಲತ್ತುಗಳ ಲೂಟಿ ಹೊಡೆಯುತ್ತಿದ್ದಾನೆ.

ಇಂತಹ ಬೋಗಸ್ ಕೆಲಸಕ್ಕೆ ಬುರ್ಡೆ ಪರುಶ್ರಾಮನ ತನ್ನ ಹೆಂಡತಿಯ ಹಿನ್ನೆಲೆಯನ್ನು ಬಳಸಿಕೊಂಡಿದ್ದಾನೆ. ದೇವೀರಮ್ಮನ ತಾಯಿ ಹನುಮವ್ವ ಗುಂಡಗತ್ತಿ ಎಂಬ ಮಹಿಳೆಯ ಗಂಡನ ಹೆಸರು ಮಮದಿಸಾಬ್. ಇವರದೂ ಕೂಡಿಕೆಯ ಸಂಸಾರ. ಈ ಕುಟುಂಬ ಬಡತನದಿಂದ ಊರು ಬಿಟ್ಟುಬಂದು ಸೇರಿದ್ದು ಹರಪನಹಳ್ಳಿ ಪಕ್ಕದ ಅರಸೀಕೆರೆ ಎಂಬ ಗ್ರಾಮವನ್ನು. ಈ ಊರಿನ ನಾಯಕ ಜನಾಂಗದ ಆದಿಮನಿ ಮನೆತನದ ಹನುಮಂತಪ್ಪನವರ ಮನೆಯಲ್ಲಿ ಚಾಕರಿ ಮಾಡಿಕೊಂಡಿದ್ದರು. ಆದಿಮನಿ ಮನೆತನದ ದೊರೆಸಾನಿ ಆದಿಮನಿ ಸಾಂತಮ್ಮ ದಯಾಳು ವಾದ್ದರಿಂದ ಹನುಮವ್ವ ಮತ್ತು ಮಮದಿಸಾಬ ದಂಪತಿಗಳನ್ನು ತನ್ನ ಸ್ವಂತ ಮನೆಯವರೆಂದೇ ಭಾವಿಸಿ ನೆಲೆ ನೀಡಿದರು. ದೇವೀರಮ್ಮ ಹುಟ್ಟಿದ್ದು ಕೂಡಾ ಅಲ್ಲಿಯೇ. ಅವಳನ್ನೂ ತಮ್ಮ ಮನೆಮಗಳಂತೆಯೇ ಆದಿಮನಿ ಕುಟುಂಬ ಬೆಳೆಸಿತು.

ಈ ನಡುವೆ ಬೆಳೆದು ದೊಡ್ಡವಳಾದ ದೇವಿರಮ್ಮನಿಗೂ ಬುರ್ಡೆ ಪರುಶ್ರಾಮನಿಗೂ ಪ್ರೀತಿ ಶುರುವಾಗಿ ಮದುವೆಯಾಗಿದ್ದರು. ಅಲ್ಲಿಯವರೆಗೂ ಶಾಲಾ ದಾಖಲಾತಿಗಳಲ್ಲಿ ದೇವೀರಮ್ಮನ ಜಾತಿಯ ಕಲಂನಲ್ಲಿ ಕಬ್ಬಾರ ಅಂತಲೇ ನಮೂದಾಗಿತ್ತು, ಆದರೆ ಯಾವಾಗ ಬುರ್ಡೆ ಪರುಶ್ರಾಮನಿಗೆ ತನ್ನ ಹೆಂಡತಿ ನಾಯಕ ಜನಾಂಗದ ಆದಿಮನಿ ಕುಟುಂಬದಲ್ಲಿ ಮನೆಮಗಳಂತೆ


ಹಿರೇಮಠ

ಬೆಳೆದುಬಂದವಳು ಎನ್ನುವುದು ತಿಳಿಯಿತೋ ಆಗ ಆ... ಆದಿಮನಿ ಕುಟುಂಬ ಹೆಸರನ್ನು ಬಳಸಿಕೊಂಡು ಆಕೆಯ... ನಾಯಕ ಜನಾಂಗದವಳು ಅಂತ ಖೊಟ್ಟಿ ಜಾತಿಪ್ರಮಾ... ಪತ್ರವನ್ನು ಸೃಷ್ಟಿಸಿಬಿಟ್ಟ. ಅಷ್ಟೊತ್ತಿಗಾಗಲೆ ಚಳವಳಿಯ... ಗುರುತಿಸಿಕೊಂಡು, ಹಿರೇಮಠರ ಶಿಷ್ಯನೆನ್ನುವ ಇಮೇ... ಹೆಗಲಿಗೇರಿಸಿಕೊಂಡಿದ್ದ ಬುರ್ಡೆ ಪರುಶ್ರಾಮನಿಗೆ ನ... ದಾಖಲೆ ಸೃಷ್ಟಿಸುವುದು ಕಷ್ಟವೇನೂ ಆಗಲಿಲ್ಲ. ಅ... ಬಂಡಾಯ, ಹೋರಾಟ ಅಂತ ಬಡಾಯಿ ಕೊಚ್ಚಿಕೊಳ್ಳ... ಅವನು ಪರಿಶಿಷ್ಟ ಜನರ ಅನ್ನಕ್ಕೆ ಅನಾಮತ್ತು ಬಾಯಿ... ಮೇಯಲು ಕುಂತಿರುವುದು ಖಾತ್ರಿಯಾಗಿತ್ತು. ಇದು ಅ... ಹೋರಾಟದ ಪರಿ!

ಬಿತ್ತುನೋಡಿ ಕೇಸು!

ಮುಖವಾಡ ಅದೆಷ್ಟು ದಿನ ತಾನೆ ಅಸ... ಚಹರೆಯನ್ನು ಮರೆಮಾಡಿಯಾತು. ಒಂದಲ್ಲ ಒಂದು ... ಅದು ಕಳಚಿಬೀಳಲೇ ಬೇಕು. ಕೆ. ಶಿವರಾಂರು ದಾವಣ... ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಬುರ್ಡೆಗೆ ಅ... ದುರ್ಗತಿ ಎದುರಾಗಿತ್ತು. ಹರಪನಹಳ್ಳಿಯ ಕೊ... ಅನ್ನುವವರು ಪರಶುರಾಮನ ನಕಲಿ ಜಾತಿಪತ್ರ ಪ್ರಕರ... ವಿರುದ್ಧ ದೂರು ದಾಖಲಿಸಿದ್ದರು. ಆಗ ಡಿಸಿಯಾ... ಶಿವರಾಂ ಅದನ್ನು ಗಂಭೀರವಾಗಿ ಪರಿಗಣಿಸಿ ತನಿ... ಆದೇಶಿಸಿದ್ದರು. ಸುಳ್ಳು ಜಾತಿಪತ್ರ ಪಡೆದಿರುವ... ಮೇಲ್ನೋಟಕ್ಕೆ ಸಾಬೀತಾಗಿ, ಅದರ ಫಲಾನುಭವಿಯಾ... ಬುರ್ಡೆ ಪರುಶ್ರಾಮನ ಮಗನನ್ನು ಅರೆಸ್ಟ್ ಮಾಡು... ವಾರೆಂಟ್ ಹೊರಬಿದ್ದಿತ್ತು. ಆದರೆ ಜೆ.ಎಚ್. ಪಟೇ... ತಮ್ಮ ಪ್ರೊಫೆಸರ್ ಎಸ್.ಎಚ್.ಪಟೇಲರ ಕಾಲುಹಿ... ಬುರ್ಡೆ ಆ ಪ್ರಕರಣದಿಂದ ಬಚಾವಾಗಿದ್ದ. ಆದರೆ ಆ ... ಸಂಪೂರ್ಣ ಬಿದ್ದುಹೋಗಿಲ್ಲ, ಈಗಲೂ ನ್ಯಾಯಾಲಯ... ವಿಚಾರಣೆ ನಡೆಯುತ್ತಿದೆ. ಯಾವತ್ತಿದ್ದರೂ ಅದು ಬು... ಕಂಟಕವೇ! ಅವತ್ತು ಬುರ್ಡೆ ಪರುಶ್ರಾಮ ಮಾ... ಮರುಳಾಗಿದ್ದ ಎಸ್.ಎಚ್. ಪಟೇಲ್, ಕಡಕೊಳ, ಗುಡಿ... ನಾಗರಾಜ್‌ರಂತವರೇ ಇವತ್ತು ಅವನ ಅಸಲಿಯತ್ತು ಗೊ...


05 ⏮

ಕಾರ್ಯವೈಖರಿಯನ್ನು ಸುಬ್ಬಯ್ಯ ಟೀಕಿಸಿದ್ದರು. ಸಂಘ ಪರಿವಾರದ ಹುನ್ನಾರವನ್ನು ಕೂಡ ಬಯಲಿಗೆಳೆದಿದ್ದರು.

ಹಾಗಾಗಿ ಈಗ ಅರಣ್ಯ ಇಲಾಖೆ, ನಾಚಪ್ಪ ಮತ್ತು ಸಂಘ ಪರಿವಾರ ಒಂದಾಗಿ ಕಾರ್ಯಾಚರಣೆ ಮಾಡುತ್ತಿವೆ. ಈ ಮೂವರ ಮನಸ್ಥಿತಿ ಒಂದೇ ರೀತಿಯಲ್ಲಿ ಇದೆ ಎನ್ನುವಂತೆ ನಡೆದುಕೊಳ್ಳುತ್ತಿವೆ. ನಾಚಪ್ಪನ ಮೂಲಕ ಅರಣ್ಯ ಇಲಾಖೆ ಸುಬ್ಬಯ್ಯನವರ ತೇಜೋವಧೆ ಮಾಡಲು ಹೊರಟಿದೆ. ಹಾಗಾಗಿ ನಾಚಪ್ಪ ಸುಬ್ಬಯ್ಯನವರ ವಿರುದ್ಧ ಹೇಳಿಕೆಯನ್ನು ನೀಡುತ್ತಾ "ಟಿಂಬರ್ ಮಾಫಿಯಾಗಳ ಪರವಾಗಿ ಸುಬ್ಬಯ್ಯನವರು ವಕಾಲತ್ತು ವಹಿಸಿದ್ದಾರೆ; ನ್ಯಾಯಾಲಯನಿಂದನೆ ಪ್ರಕರಣವನ್ನು ದಾಖಲಿಸಿದ್ದಾರೆ. ಇದರಿಂದಾಗಿ ಪ್ರಾಮಾಣಿಕ ಅಧಿಕಾರಿ ಮನೋಜ್ ಕುಮಾರ್‌ರವರಿಗೆ ಅರಣ್ಯ ಇಲಾಖೆಯ ಕಾರ್ಯಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ" ಎಂದು ಆರೋಪಿಸಿದ್ದಾರೆ. ವಾಸ್ತವದಲ್ಲಿ ಮನೋಜ್ ಕುಮಾರ್ ಕೊಡಗಿನಲ್ಲಿ ಇರುವುದೇ ವಿರಳ. ಯಾವಾಗಲೂ ಬೆಂಗಳೂರಿನಲ್ಲಿಯೇ ಇರುತ್ತಾರೆ. ಅವರಿಗೆ ಇಂತಹ ಪ್ರಕರಣಗಳು ಸಿಕ್ಕಿದರೆ, ಬೆಂಗಳೂರಿನಲ್ಲಿ ಇರಲು ಮುಕ್ತ ಅವಕಾಶ ಸಿಕ್ಕಿದಂತೆ ಆಗುತ್ತದೆ. ನಾಚಪ್ಪ ಮಾಡಿರುವ ಆರೋಪಗಳು ನ್ಯಾಯಾಲಯ ನಿಂದನೆ ಎನ್ನುವುದರಲ್ಲಿ ಸಂಶಯವಿಲ್ಲ. ಒಂದುವೇಳೆ ನ್ಯಾಯಾಲಯವು ಸ್ವಯಂ ಪ್ರೇರಿತರಾಗಿ ನ್ಯಾಯಾಂಗನಿಂದನೆ ಪ್ರಕರಣವನ್ನು ದಾಖಲಿಸಿದರೆ ನಾಚಪ್ಪ ಕಂಬಿ ಎಣಿಸಬೇಕಾಗುತ್ತದೆ. ನಾಚಪ್ಪ ತಾನೊಬ್ಬ ವಕೀಲ ಎಂದು ಹೇಳಿಕೊಳ್ಳುತ್ತಾರೆ. ಒಬ್ಬ ವಕೀಲನಾದವನಿಗೆ ವಕಾಲತ್ತು ವಹಿಸುವ ಸ್ವಾತಂತ್ರ್ಯ ಇದೆ ಎಂಬುದು ಅರಿಯದಷ್ಟು ಪೆದ್ದ ವಕೀಲನೇ ನಾಚಪ್ಪ ಎಂದು ಪ್ರಶ್ನಿಸಬೇಕಾಗಿದೆ.

ಅರಣ್ಯ ಇಲಾಖೆಯವರು ಮತ್ತೊಂದು ಅಪಾಯದ ವಿಚಾರವನ್ನೂ ನಾಚಪ್ಪನ ಮೂಲಕ ತೇಲಿಬಿಟ್ಟಿದ್ದಾರೆ. ಅದೇನೆಂದರೆ ಕೊಡಗು ಜಿಲ್ಲೆಯಲ್ಲಿರುವ ಬಾಣೆ ಜಮೀನು 'ಅರಣ್ಯ ಪ್ರದೇಶ' ಎಂಬುದಾಗಿದೆ. ಬಾಣೆ ಜಮೀನಿಗೆ ಸಂಬಂಧಪಟ್ಟಂತೆ 3-10-2015ರಲ್ಲಿ ನಡೆದ ಸಭೆಯನಂತರ, ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಎಂ ಮದನ್ ಗೋಪಾಲ್‌ರವರು ಕಂದಾಯ ಇಲಾಖೆಗೆ ಪತ್ರವೊಂದನ್ನು ಬರೆದಿದ್ದು, ಹಲವಾರು ವಿಚಾರಗಳನ್ನು ಪ್ರಸ್ತಾಪಿಸಿ "ಬಾಣೆ ಜಮೀನು ಅರಣ್ಯ ಪ್ರದೇಶ ಆಗಿದೆ. ಅದು ಕಂದಾಯ ವ್ಯಾಪ್ತಿಗೆ ಬರುವಂತಹ ಪ್ರದೇಶವಲ್ಲ" ಎಂದು ಹೇಳಿದ್ದಾರೆ.

ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು 'ಚೆಕ್ಕೇರ ಪೂವಯ್ಯ' ಪ್ರಕರಣದಲ್ಲಿ ಬಾಣೆ ಜಮೀನಿಗೆ ಸಂಬಂಧಪಟ್ಟಂತೆ ಐತಿಹಾಸಿಕ ತೀರ್ಪೊಂದನ್ನು 1993ರಲ್ಲಿ ನೀಡಿದ್ದು, ಈ ತೀರ್ಪಿನ ಆಧಾರದಲ್ಲಿ ಕಂದಾಯಕ್ಕೆ ಒಳಪಟ್ಟ ಬಾಣೆ ಜಮೀನಿನಲ್ಲಿ ಹಿಡುವಳಿದಾರನ ಹಕ್ಕು ಇದೆ ಎಂದು ನ್ಯಾಯಾಲಯ ಹೇಳಿದೆ. ಆದರೆ ಇದನ್ನು ಎಲ್ಲಿಯೂ ಉಲ್ಲೇಖಿಸದೆ ತಮಗೆ ಬೇಕಾದಂತಹ ಅಂಶಗಳನ್ನು ಮಾತ್ರ ತೆಗೆದುಕೊಂಡು, ಮದನ್‌ಗೋಪಾಲ್ ಪತ್ರ ಬರೆದಿದ್ದಾರೆ. 1975ರಲ್ಲಿಯೇ ಸರ್ವೋಚ್ಚ ನ್ಯಾಯಾಲಯ ಇ.ಜೆ.ವೈಟ್ ಪ್ರಕರಣದಲ್ಲಿ ಕಂದಾಯಕ್ಕೆ ಒಳಪಟ್ಟ ಜಮೀನಿನಲ್ಲಿ ಇರುವ ಮರಗಳು ಕಂದಾಯಕ್ಕೆ ಒಳಪಟ್ಟ ನಂತರ ಬೆಳೆದದ್ದಾದರೆ ಅದರ ಹಕ್ಕು ಹಿಡುವಳಿದಾರನದು ಎಂದು ಹೇಳಿದೆ.


ಜಗದೀಶ್ ಕಾರಂತ

ಅರಣ್ಯ ಇಲಾಖೆ ಈ ಹಕ್ಕುಗಳನ್ನು ನೀಡಲು ಇಲ್ಲದ ಸರ್ಕಸ್‌ಗಳನ್ನು ಮಾಡುತ್ತಿದೆ. ಮರದ ಬೆಳವಣಿಗೆಗೆ ಸಂಬಂಧಪಟ್ಟಂತೆ, ಮರದ ವಯಸ್ಸನ್ನು ನಿಗದಿಪಡಿಸಲು ಸೂತ್ರಗಳು ಇದ್ದರೂ ಹಲವಾರು ಹೊಸ ಸೂತ್ರಗಳನ್ನು ಮತ್ತೆ ಮತ್ತೆ ತಂದು, ಯಾವ ಸೂತ್ರವನ್ನು ಅಳವಡಿಸಿದರೂ ಮರದ ಮೇಲೆ ಕೃಷಿಕನ ಹಕ್ಕನ್ನು ನಿರಾಕರಿಸಲು ಸಾಧ್ಯವಾಗುತ್ತಿಲ್ಲ ಎನ್ನುವ ಕಾರಣಕ್ಕಾಗಿ ಸಮಿತಿಯೊಂದನ್ನು ರಚಿಸಿ, 6 ತಿಂಗಳಲ್ಲಿ ವರದಿ ನೀಡಬೇಕು ಎಂದು ಹೇಳಿಕೊಂಡು, 6 ವರ್ಷಗಳು ಕಳೆದರೂ ಇಲ್ಲಿಯವರೆಗೆ ವರದಿ ನೀಡಿಲ್ಲ. ಕೊಡಗಿನ ಬಾಣೆ ಜಮೀನಿಗೆ ಸಂಬಂಧಪಟ್ಟಂತೆ ವರ್ಗ ಭೂಮಿಗೆ ಅಂದರೆ ... ಒತ್ತಿನಲ್ಲಿರುವ ಬಾಣೆಯನ್ನು ಅದರ ಬಳಕೆಗಾಗಿ ಕೃಷಿ... ನೀಡಲಾಗಿದ್ದು, ಎಲ್ಲವೂ ಈಗ ಕಾಫಿ ಕೃಷಿಗೆ ಒಳಪ... ಅದನ್ನು ಅರಣ್ಯ ಎಂದು ಅರಣ್ಯ ಇಲಾಖೆ ವ್ಯಾಖ್ಯಾನಿ... ಬಂದಿದೆ. ಇದು ಕಾನೂನಿಗೆ, ನ್ಯಾಯಾಲಯದ ತೀ... ವಿರುದ್ಧವಾಗಿದೆ. ಮಾತ್ರವಲ್ಲ ಜನವಿರೋಧಿಯೂ ಅ... ಅರಣ್ಯ ಇಲಾಖೆ ಯಾವಾಗಲೂ ತಮ್ಮನ್ನು ರಕ್ಷಿಸಿಕೊ... ಸರ್ವೋಚ್ಚ ನ್ಯಾಯಾಲಯದ ಗೋದಾವರ್ಮ... ತಿರುಮಲ್‌ಪಾದ್ ಪ್ರಕರಣದ 1996ರ ಮಧ್ಯ... ತೀರ್ಪನ್ನು ಮುಂದಿಡುತ್ತದೆ. ಆದರೆ ಆ ನಂತರ ಇಲಾ... ನಿಲುವುಗಳಿಗೆ ಸರ್ವೋಚ್ಚ ನ್ಯಾಯಾಲಯ 201... ನೀಡಿರುವಂತಹ ಎರಡು ಪ್ರಮುಖ ತೀರ್ಪುಗ... ಎಲ್ಲಿಯೂ ಉಲ್ಲೇಖಿಸುವುದಿಲ್ಲ. ಇದು ಅರಣ್ಯ ಇಲಾ... ನಯವಂಚಕತನ.

ಮದನ್ ಗೋಪಾಲ್ ಬರೆದ ಪತ್ರ... ಮುಂದಿಟ್ಟುಕೊಂಡು ನಾಚಪ್ಪ ಹೇಳಿಕೆಯನ್ನು ನೀಡ... ಬಾಣೆ ಜಮೀನು ಅರಣ್ಯ ಎಂದಿದ್ದರೂ ಸುಬ... ನ್ಯಾಯಾಲಯದ ಮೆಟ್ಟಲೇರಿ ತೀರ್ಪು ಪಡೆಯುತ್ತಿ... ಎಂಬ ಆರೋಪವನ್ನು ಮಾಡಿದ್ದಾರೆ. ಅರಣ್ಯ ಇಲಾ... ಈ ಸಹಾವಳಿ ತಪ್ಪಾಗಿದ್ದರೂ, ಅದನ್ನು ನಾಚಪ್ಪನ... ತಲುಪಿಸಿದ್ದು ಅರಣ್ಯ ಇಲಾಖೆ. ತಮ್ಮ ಮೇಲೆ ... ಆರೋಪ ಮತ್ತು ಸ್ವತಃ ನಾಚಪ್ಪನ ಮೇಲೆ ... ಆರೋಪಗಳನ್ನು ಬದಿಗಿಟ್ಟು, ಸುಬ್ಬಯ್ಯನವರ ... ಆರೋಪ ಮಾಡಿ ಜನರಿಗೆ ತಪ್ಪು ಮಾಹಿತಿ ನೀ... ಕಾರ್ಯಕ್ಕೆ ಇವರಿಬ್ಬರೂ ಕೈಜೋಡಿಸಿದ್ದಾರೆ. ಕೊ...

ಪಶ್ಚಾತ್ತಾಪ ಪಡುತ್ತಿದ್ದಾರೆ. ಬುರ್ಡೆಗೂ ಅಂತಹ ಪಶ್ಚಾತ್ತಾಪ ಎದುರಾಗುವ ದಿನಗಳು ದೂರವಿಲ್ಲ.

ರಂಗಕರ್ಮಿ ಪತ್ರ'ಕೊ'ರ್ತ

ಪ್ರೊಫೆಸರ್ ಹಿರೇಮಠರ ಮಾತುಗಳು ಮಾತ್ರ ಪ್ರಗತಿಪರ ಚಿಂತನೆಗಳನ್ನು ಧ್ವನಿಸುತ್ತಿರಲಿಲ್ಲ; ಅವರ ಬದುಕೇ ಜನರಿಗೆಂದು ಅರ್ಪಣೆಯಾಗಿತ್ತು. ಹಾಗಾಗಿ ಬಂಡಾಯ ಸಾಹಿತ್ಯವಲ್ಲದೆ ಬೀದಿನಾಟಕಗಳ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕೆಂದು 'ಸಮುದಾಯ' ಎಂಬ ಸಾಂಸ್ಕೃತಿಕ ಸಂಸ್ಥೆ ಕಟ್ಟಿ ನಾಡಿನಾದ್ಯಂತ ಅಭಿಯಾನ ಶುರು ಮಾಡಿದ್ದರು. ಅವರ ಶಿಷ್ಯನ ಗೆಟಪ್ಪಿನಲ್ಲಿದ್ದ ಬುರ್ಡೆ ಪರುಶ್ರಾಮ ನಾಟಕರಂಗಕ್ಕೆ ಕಾಲಿರಿಸಲು ಇದು ನೆರವಾಯ್ತು. ಹೀಗೆ ರಂಗಲೋಕಕ್ಕೆ ವಕ್ಕರಿಸಿದ ಆತ ಇವತ್ತು ಇಡೀ ಸಾಂಸ್ಕೃತಿಕ ಪರಿಸರಕ್ಕೆ ತಲೆನೋವಾಗಿದ್ದಾನೆ.

ಯಾವಾಗ ಹಿರೇಮಠರಂತವರನ್ನು ಮಣ್ಣಿಗಿಟ್ಟನೋ ಅಲ್ಲಿಂದ ಬುರ್ಡೆ ಪರುಶ್ರಾಮನ ನಾಟಕಗಳು ಅಸಹ್ಯ ಹುಟ್ಟಿಸತೊಡಗಿದ್ದವು. 2000ರಲ್ಲಿ 'ಸಮಸ್ತರು' ಅಂತಾ ನಾಟಕತಂಡ ಕಟ್ಟಿದ. ಸರ್ಕಾರದಿಂದ ಹರಿದುಬರುವ ಅನುದಾನವನ್ನು ಮುಂಡಾಯಿಸುವುದಷ್ಟೇ ಅವನ ಪ್ರಯತ್ನದ ಇರಾದೆಯಾಗಿತ್ತು. ಗೋಪಾಲಕೃಷ್ಣ ನಾಯರಿಯಂತ ಅರೆಬೆಂದ ನಿರ್ದೇಶಕನನ್ನು ಈ ನಾಟಕ ತಂಡದ ಮುಂದಿಟ್ಟುಕೊಂಡು ದುಡ್ಡು ಮಾಡತೊಡಗಿದ್ದಾನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಮಾನವ ಸಂಪನ್ಮೂಲ ಇಲಾಖೆಯಿಂದ ಪರಿಶಿಷ್ಟ ವರ್ಗದ (ನಾಯಕ) ಹೆಸರಿಗೆ ಸಿಗುವ ಹತ್ತು ಲಕ್ಷ ರೂಪಾಯಿ ಅನುದಾನವನ್ನು 2000ರಿಂದ ಇಲ್ಲಿಯವರೆಗೆ ಪ್ರತಿವರ್ಷ ದೋಚುತ್ತಿದ್ದಾನೆ. ಸಾಂಸ್ಕೃತಿಕ ಹೆಸರಲ್ಲಿ ದೋಚುವ ಈ ಕಸುಬಿನ ರಕ್ಷಣೆಗೆ ಅಂತಾನೇ 2001ರಲ್ಲಿ 'ಸಮಸ್ತರು' ಅಂತಾ ವಾರಪತ್ರಿಕೆಯನ್ನೂ ಹೊರತಂದ. ಅಲ್ಲಿಂದಲೆ ಪರಶುರಾಮನ ಮೈತುಂಬಾ ನೆಣ ಆವರಿಸಿದ್ದು. ನಕಲಿ ಜಾತಿಪತ್ರದ ಪ್ರಕರಣ ಬಯಲಾದಂಗೆಲ್ಲ ಪರಶುರಾಮ ವಿಕೃತಗೊಳ್ಳತೊಡಗಿದ. ಅವನ ನಕಲಿ ಜಾತಿಪತ್ರ ಪ್ರಕರಣವನ್ನು ಬಯಲು ಮಾಡಲು ಯಾರೇ ಪ್ರಯತ್ನಿಸಿದರೂ ಮೊದಲು ಕಾಲುಹಿಡಿದು ಕ್ಷಮೆ ಕೇಳುತ್ತಾನೆ. ಇವನ ಭಂಡಾಟ ಗೊತ್ತಿದ್ದು ಮೊಸಳೆ ಕಣ್ಣೀರಿಗೆ ಮರುಳಾಗದೆ ಅವರು ಮುಂದುವರೆದರೆ ತನ್ನ 'ಸಮಸ್ತರು' ಪತ್ರಿಕೆಯಲ್ಲಿ ಅಂತವರ ತೇಜೋವಧೆಗೆ ಕೈಹಾಕುವ ಮೂಲಕ ಘಟಾನುಘಟಿಗಳನ್ನೇ ಮೆತ್ತಗೆ ಮಾಡಿಬಿಡುತ್ತಾನೆ. ಅವನ ಪತ್ರಕರ್ತ ಗೆಟಪ್ಪಿನ ಅಸಲಿ ಲುಕ್ ಇದು!

ಇವನ ಅಪರಾತಪರಾಗಳು ಇಷ್ಟಕ್ಕೇ ಮುಗಿಯುವುದಿಲ್ಲ. ಈಗ ಇವನು ತೆಗ್ಗಿನಮಠದ ನಟರಾಜ ಕಲಾಭವನ ರಂಗಶಾಲೆಯ ಪ್ರಿನ್ಸಿಯಾಗಲು ಬಳಸಿರುವ ಡಿಪ್ಲೊಮಾ ಸರ್ಟಿಫಿಕೇಟ್ ಕೂಡಾ ಬೋಗಸ್ ಎನ್ನುವ ಮಾತುಗಳು ಕೇಳಿಬರುತ್ತಿವೆ. ಹಂಪಿಯ ಜಾನಪದ ವಿವಿ ಹೆಸರಲ್ಲಿ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲೇ ಇರದ ಕಾಲೇಜಿನಿಂದ ನಕಲಿ ಡಿಪ್ಲೊಮಾ ಸರ್ಟಿಫಿಕೇಟು ಪಡಕೊಂಡು ಅದನ್ನೇ ತೋರಿಸಿ ಪ್ರಿನ್ಸಿ ಹುದ್ದೆ ಗಿಟ್ಟಿಸಿಕೊಂಡಿದ್ದಾನೆ. ವೃತ್ತಿರಂಗಭೂಮಿಯ ಓಂನಾಮ ಗೊತ್ತಿರದ ಈ ಬುರ್ಡೆ ಪರುಶ್ರಾಮ ವಿದ್ಯಾರ್ಥಿಗಳಿಗೆ ಪ್ರಿನ್ಸಿಯೆಂದರೆ ಅದಕ್ಕಿಂತ ದುರ್ದೈವ ಮತ್ತೊಂದಿದೆಯಾ?

■ ಟಿ.ಎನ್. ಷಣ್ಮುಖ


ಮ್ಯಾಗಿ ಅಜ್ಜಿಯ ಆತ್ಮಕಥೆಯೂ...

04 ⏮

ಫರ್ನಾಂಡಿಸ್‌ರ ಮೇಲೆ ಹೆಚ್ಚು ವಿಶ್ವಾಸವಿಟ್ಟಿದ್ದರು. ಇದು ಮ್ಯಾಗಿಯಲ್ಲಿ ಅಸೂಯೆ ಮಾಡಿಸಿತ್ತು. ದಿಲ್ಲಿಯಲ್ಲಿ ಮ್ಯಾಗಿಯ ಕುಂದಿದ ವರ್ಚಸ್ಸಿನ ಮರ್ಮ ಅರಿತಿದ್ದ ದೇಶಪಾಂಡೆ ಸೂಟ್‌ಕೇಸ್ ಹಿಡಿದು ದಿಲ್ಲಿಯಲ್ಲಿ ಆಟ ಆಡಿದರು. ಇದರಿಂದಾಗಿ ಮ್ಯಾಗಿ ದೇಶಪಾಂಡೆಯನ್ನು ಪಳಗಿಸಲು ಅದೆಷ್ಟೇ ಪ್ರಯತ್ನ ಮಾಡಿದರೂ ಯಶ ಮಾತ್ರ ಸಿಗಲೇ ಇಲ್ಲ. 2008ರ ಕರ್ನಾಟಕ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಟಿಕೆಟ್ ಮಾರಾಟವಾಗಿದೆ ಎಂದು ಮ್ಯಾಗಿ ಖಾಸಗಿಯಾಗಿ ಒಬ್ಬ ಆತ್ಮೀಯ ಪತ್ರಕರ್ತನ ಬಳಿ ಹೇಳಿದ್ದೇ ದೊಡ್ಡ ಗಂಡಾಂತರವಾಗಿ ಆಕೆಯನ್ನು ಕಾಡಿತು. ಆ ಪತ್ರಕರ್ತ ಮಹಾಶಯ ಮ್ಯಾಗಿ 'ಆಫ್ ದಿ ರೆಕಾರ್ಡ್' ಹೇಳಿದ್ದನ್ನು ಯಥಾವತ್ ಬರೆದುಬಿಟ್ಟಿದ್ದನೇ ಹೊರತು ಮ್ಯಾಗಿಯೇನೂ ಮಾಧ್ಯಮದ ಮುಂದೆ ಹೈಕಮಾಂಡ್ ಅಥವಾ ಟಿಕೆಟ್ ಕಮಿಟಿ ವಿರುದ್ಧ ಮಾಡಿದ ಟೀಕೆ ಇದಾಗಿರಲಿಲ್ಲ. ಇದನ್ನೇ ನೆಪವಾಗಿಟ್ಟುಕೊಂಡು ಮ್ಯಾಗಿ ವಿರೋಧಿಗಳಾದ ಎ.ಕೆ ಆ್ಯಂಟನಿಯಂಥವರು ಆಟ ಆಡಿದ್ದರು. ಸೋನಿಯಾರಿಗೂ ಮ್ಯಾಗಿ ಬಗ್ಗೆ ಸಿಟ್ಟು ಬಂದಿತ್ತು. ಆಕೆಯನ್ನು ಪಕ್ಷದಿಂದಲೆ ಉಚ್ಚಾಟಿಸಲು ವಿರೋಧಿಗಳು ಪ್ರಯತ್ನಿಸಿದ್ದರು. ಆದರೆ ಸೋನಿಯಾರೇ ಕರುಣೆ ತೋರಿಸಿದ್ದರು.

ಮಗನಿಗೆ ದೇಶಪಾಂಡೆ ಕಿತಾಪತಿಯಿಂದ ಖಾನಾಪುರ ಟಿಕೆಟ್ ಸಿಗಲಿಲ್ಲವೆಂಬ ಹತಾಶೆಯಲ್ಲಿ ಮ್ಯಾಗಿ ಬಡಬಡಿಸಿದ್ದರು. ಇದು ಮ್ಯಾಗಿಯ ಎಐಸಿಸಿ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸಂಚಕಾರ ತಂದಿತು. ಸೋನಿಯಾರ ಅವಕೃಪೆ ಖುದ್ದು ಕಂಡ ಮ್ಯಾಗಿ ಮರುದಿನವೇ ಪ್ರಧಾನ ಕಾರ್ಯದರ್ಶಿಗಿರಿಗೆ ರಾಜೀನಾಮೆ ನೀಡಿದರು. ರಾಜೀನಾಮೆ ಪತ್ರದಲ್ಲಿ ಟಿಕೆಟ್ ಬಿಕರಿ ಕತೆ ಬರೆದಿದ್ದರು. ತನ್ನ ಮಗ ನಿವೇದಿತ್, ಜಾಫರ್ ಷರೀಫ್ ಮೊಮ್ಮಗನಿಗೆ ಟಿಕೆಟ್ ನಿರಾಕರಿಸಿರುವ ಬಗ್ಗೆ ಆಕ್ರೋಶವೂ ವ್ಯಕ್ತಪಡಿಸಿದ್ದರು. ರಾಜೀನಾಮೆ ನಂತರ ಮ್ಯಾಗಿ ಕಂಡಕಂಡಲ್ಲಿ ನನ್ನ ಮಗನಿಗೆ ಟಿಕೆಟ್ ಕೊಡದಿರಲು ವಂಶಪಾರಂಪರ್ಯ ರಾಜಕಾರಣ ಸಬೂಬು ಹೇಳಿದ್ದನ್ನೆ ಪ್ರಶ್ನಿಸಿದ್ದರು. ನನ್ನ ಮಗ-ಜಾಫರ್ ಮೊಮ್ಮಗ ಸ್ಮಗ್ಲರ್‌ಗಳಾ? ಭಯೋತ್ಪಾದಕರಾ ಎಂದು ಬೊಬ್ಬೆ ಹೊಡೆದಿದ್ದರು. ಉತ್ತರ ಕನ್ನಡಕ್ಕೆ ಬಂದಾಗಲೂ ಆತ್ಮೀಯರೊಂದಿಗೆ ಮಾತಾಡುವಾಗ "ನಾನು ಎತ್ತಿ ಆಡಿಸಿದ ಹುಡುಗ ರಾಹುಲ್.... ಆತನೂ ನನ್ನನ್ನು ಪ್ರಶ್ನಿಸುತ್ತಾನೆಂದರೆ...?" ಎಂದು ಲೊಚಗುಟ್ಟಿದ್ದೂ ಇದೆ. ಮ್ಯಾಗಿಯ ದುರಂತ ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ ಅಲ್ಲಿ ದೇಶಪಾಂಡೆ ಮಾತ್ರವಲ್ಲ ಎಐಸಿಸಿಯಲ್ಲಿದ್ದ ಆಕೆಯ ಕಡು ಶತ್ರುಗಳೂ ಕಾಣಿಸುತ್ತಾರೆ. ಸಾಕ್ಷಾತ್ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗೂ ಮ್ಯಾಗಿ ಬಗ್ಗೆ ಅಖಂಡ ಒಲವು-ವಿಶ್ವಾಸವಿಲ್ಲದಿರುವುದೂ ಗೋಚರಿಸುತ್ತದೆ.

ಮ್ಯಾಗಿ ಆತ್ಮಕಥನದಲ್ಲಿ ಉತ್ತರ ಕನ್ನಡದ ರಾಮಕೃಷ್ಣ ಹೆಗಡೆ ಜತೆ ಒಡನಾಟ ಇದ್ದಿದ್ದನ್ನು ಬರೆದಿದ್ದಾರೆ. 1986 ರಲ್ಲಿ ತಾನು ರಾಜ್ಯಸಭೆಗೆ ಆಯ್ಕೆಯಾಗಲು ಹೆಗಡೆ



ಸೋನಿಯಾ ಗಾಂಧಿ

ನೆರವಾಗಿದ್ದರೆಂದು ಹೇಳಿದ್ದಾರೆ. ತನ್ನ ಮಾವ-ಉ.ಕನ್ನಡ ಸಂಸದರಾಗಿದ್ದ ಜೋಕಿಂ ಆಳ್ವ ಕಾರವಾರದಲ್ಲಿ ಕೊಂಡಿದ್ದ ಎರಡು ಎಕರೆ ಜಮೀನಿನಲ್ಲಿ 'ಗುಂ' ಸಿಎಂ ಆಗಿದ್ದಾಗ ಕಾರವಾರ ಬಸ್ ನಿಲ್ದಾಣ ನಿರ್ಮಿಸಲು ನಿರ್ಧರಿಸಿದ್ದರು. ಇದಕ್ಕೆ ಕಾರಣ ಮ್ಯಾಗಿ ದೇವರಾಜ್ ಅರಸು ಜತೆ ಹೋಗಿದ್ದೇ ಆಗಿತ್ತಂತೆ. ಆದರೆ ಅನಂತರ ಸಿಎಂ ಆದ ಹೆಗಡೆ ಆಳ್ವರ ಆಸ್ತಿ ಮುಟ್ಟದಿರಲು ತೀರ್ಮಾನ ಕೈಗೊಂಡಿದ್ದರೆಂದು ಮ್ಯಾಗಿ ನೆನೆದಿದ್ದಾರೆ.

ಈ ಜೋಕಿಮ್ ಆಳ್ವ ಎರಡೆರಡು ಬಾರಿ ಉತ್ತರ ಕನ್ನಡದ ಸಂಸದನಾದರೂ ಜಿಲ್ಲೆಗೇನೂ ಪ್ರಯೋಜನ ಆಗಿಲ್ಲ. ಜಿಲ್ಲೆ ಬಗ್ಗಾತನಿಗೆ ಯಾವ ಭಾವನಾತ್ಮಕ ಸಂಬಂಧವೂ ಇರಲಿಲ್ಲ. ಮಂಗಳೂರು ಮೂಲದ ಜೋಕಿಂ ಉತ್ತರ ಕನ್ನಡದಲ್ಲಾಗಲಿದ್ದ ಸರ್ವಋತು ಬಂದರಿಗೆ ಕಲ್ಲು ಹಾಕಿದ್ದು ಬಹಳ ಜನರಿಗೆ ಗೊತ್ತಿಲ್ಲ. ಮಂಗಳೂರಲ್ಲಿ ಬಂದರು ಸ್ಥಾಪಿಸಲು ಅಲ್ಲಿನ ಸಂಸದ ಮಲ್ಯ ಪ್ರಯತ್ನಿಸಿದ್ದರು. ಆದರೆ ಕಾರವಾರ ಸರ್ವಋತು ಬಂದರಿಗೆ ಯೋಗ್ಯ ಸ್ಥಳವೆಂದು ಸರ್ಕಾರಿ ಏಜೆನ್ಸಿಗಳು ಆಯ್ಕೆ ಮಾಡಿದ್ದವು. ಆದರೆ ಮಲ್ಯ ಹಠ ಬಿಡಲಿಲ್ಲ. ದಕ್ಷಿಣ ಕನ್ನಡ ಮೂಲದ ಜೋಕಿಂ ಆಳ್ವರಿಂದ ಮಂಗಳೂರು ಬಂದರಿಗೆ 'ನಿರಾಕ್ಷೇಪಣಾ ಪತ್ರ' ಬರೆಸಿಕೊಂಡರು. ಎಂಪಿ ಜೋಕಿಂ ಕಾರವಾರಕ್ಕೆ ಬಂದರು ಬೇಡ ಎಂದು ಬರೆದುಕೊಟ್ಟರು.

ಇಂಥ ಜೋಕಿಮ್‌ರ ಮಡದಿ ವೈಲೆಟ್ ಆಳ್ವ ಇಂದಿರಾ ಗಾಂಧಿಗೆ ಆಪ್ತರಾಗಿದ್ದರು. ಆಕೆ ರಾಜ್ಯಸಭೆ ಉಪಾಧ್ಯಕ್ಷೆಯೂ ಆಗಿದ್ದರು. ಈ ನಂಟು ಮ್ಯಾಗಿಯನ್ನು ಮತ್ತೆ-ಮತ್ತೆ ರಾಜ್ಯಸಭೆಗೆ ಆಯ್ಕೆಯಾಗಲು ನೆರವಾಯಿತು. ಮಾವ ನಿರಾಯಾಸವಾಗಿ ದಶಕಗಟ್ಟಲೆ ಎಂಪಿಯಾಗಿದ್ದ ಉತ್ತರ ಕನ್ನಡದ ಸೊಸೆಯೆಂದು ಹೇಳಿಕೊಂಡು ಬಂದು ಮ್ಯಾಗಿಗೆ ಮಾತ್ರ ಜಿಲ್ಲೆಯ ಜನರ ನಾಡಿಮಿಡಿತ ಅರ್ಥವೇ ಆಗಲಿಲ್ಲ. ಇಲ್ಲಿ ಗೆಲ್ಲುವುದು ಆಕೆಗೆ ಕಷ್ಟವಾಯ್ತು. ಉತ್ತರ ಕನ್ನಡದಲ್ಲಿನ ಹಿಂದೂತ್ವ ಹಿಕಮತ್ತು, ಬ್ರಾಹ್ಮಣಶಾಹಿ ಹಿಡಿತ ಮತ್ತು ಮೇಲುವರ್ಗದ ಫ್ಯೂಡಲ್ ಮನಸ್ಥಿತಿ ಮತ್ತು ದೇಶಪಾಂಡೆಯ ಸೂಟ್‌ಕೇಸ್ ರಾಜಕಾರಣಕ್ಕೆ ಪ್ರತಿತಂತ್ರ ಹೆಣೆಯಲು ಮ್ಯಾಗಿಯಿಂದ ಸಾಧ್ಯವಾಗಲೇ ಇಲ್ಲ. ಇದಕ್ಕೆ ಕಾರಣ- ಆಕೆ ಕಟ್ಟಿಕೊಂಡಿದ್ದ ನಾಲಾಯಕರು, ಪುಂಡರು, ಜನಸಂಪರ್ಕ ಇಲ್ಲದ ಹೇತ್ಲಾಂಡಿಗಳ ದಂಡು. ಈ ದಂಡಪಿಂಡಗಳ ಮಾತು ಕೇಳಿ ಮ್ಯಾಗಿ ಹಳ್ಳಕ್ಕೆ ಬಿದ್ದರು.

ಈಗ ಮ್ಯಾಗಿ ಉತ್ತರ ಕನ್ನಡದ ರಾಜಕಾರಣದಲ್ಲಿ ಇಲ್ಲ. ದೇಶಪಾಂಡೆಯ ಕಾಟ ತಾಳಲಾರದೆ ಆಕೆ ಗಂಟು-ಮೂಟೆ ಕಟ್ಟಿಕೊಂಡು ಹೋಗಿದ್ದಾರೆ. ಹೈಕಮಾಂಡಲ್ಲಿ ಸೃಷ್ಟಿಯಾಗಿರುವ ಶತ್ರು ಪಡೆ ಉತ್ತರ ಕನ್ನಡದತ್ತ ತಲೆ ಹಾಕಿ ಮಲಗಲಿಕ್ಕೂ ಬಿಡುತ್ತಿಲ್ಲ. ಹಾಗಂತ ಮ್ಯಾಗಿ ಮಗ ನಿವೇದಿತ್ ಆಳ್ವ ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷನಾಸೆಯಿಂದ ಜಿಲ್ಲೆಯಲ್ಲಿ ಓಡಾಡಿಕೊಂಡಿದ್ದಾನೆ. ಶಿರಸಿಯಿಂದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಒಂದು ಕೈ ನೋಡುವ ಉಮೇದಿ ಆತನಿಗಿದೆ. ಕೆನರಾದಿಂದ ಎಂಪಿಯಾಗುವ ಕನಸೂ ಇದೆ. ಆದರೆ ಅಮ್ಮ ಜಿಲ್ಲೆಯಿಂದ ದುರ್ದಾನ ಪಡೆದಂತೆ ಹೋದನಂತರ ಬೆಂಬಲ ಕಡಿಮೆಯಾಗಿದೆ. ದೇಶಪಾಂಡೆಯಂತೂ ಅಡಿಗಡಿಗೆ ಕಾಡುತ್ತಿದ್ದಾರೆ.


ಎ.ಕೆ. ಆ್ಯಂಟನಿ

ಮ್ಯಾಗಿಯ ಆತ್ಮಕತೆಯ ಪಾಯಿಂಟ್‌ಗಳಿಂದ ಯಾರ್‍ಯಾರಿಗೆ ಯಾವ್ಯಾವ ಥರ ಧಕ್ಕೆಯಾಗಿದೆಯೋ ಏನೋ? ಆದರೆ ಮ್ಯಾಗಿ ಮಗ ನಿವೇದಿತ್‌ನ ಭವಿಷ್ಯಕ್ಕೆ ಆತನ ಅಮ್ಮನ ಆತ್ಮಕಥನವೇ ಮುಳುವಾಗಲಿದೆ ಎಂಬ ಜಿಜ್ಞಾಸೆ ಈಗ ಕಾಂಗ್ರೆಸ್ ವಲಯದಲ್ಲಿ ನಡೆಯುತ್ತಿದೆ. ದೇಶಪಾಂಡೆಗೆ ಮ್ಯಾಗಿಯ ಆತ್ಮಕತೆಯಿಂದ ಒಂಚೂರು ಅಪಮಾನವಾಗಿದೆ. ಆತನ ಪಟಾಲಮ್ ಮ್ಯಾಗಿ 'ಹಾಗೆಲ್ಲ' ಬರೀಬಾರದಿತ್ತು ಎಂದು ಪತ್ರಿಕಾಗೋಷ್ಠಿ ಕರೆದು ಗೋಗರೆಯುತ್ತಿದ್ದಾರೆ. ಆದರೆ ಜನರೇನೂ ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಯಾಕೆಂದರೆ, ಮ್ಯಾಗಿ ಹೇಳಿದ್ದೆಲ್ಲ ಮೊದಲೇ ಉತ್ತರ ಕನ್ನಡಿಗರಿಗೆ ಗೊತ್ತಿರುವ ಸಂಗತಿ-ಸಮಾಚಾರಗಳೇ! ದುರಂತವೆಂದರೆ, ಮ್ಯಾಗಿ ಜಿಲ್ಲೆಯ ಬ್ರಾಹ್ಮಣರನ್ನು ನಂಬಲಿಲ್ಲ; ಬಹುಸಂಖ್ಯಾತ ಅಬ್ರಾಹ್ಮಣರಲ್ಲಿ ವಿಶ್ವಾಸ ಮೂಡಿಸಲಿಲ್ಲ. ಒಂದಿಷ್ಟು ಚಾಡಿಕೋರರ ಮಾತು ಕೇಳಿ ಎಡಬಿಡಂಗಿ ರಾಜಕಾರಣ ಮಾಡಿದ ಮ್ಯಾಗಿ ದೇಶಪಾಂಡೆಯ ರಾಕ್ಷಸ ರಾಜಕಾರಣಕ್ಕೆ ವಿಪುಲ ಅವಕಾಶ ಮಾಡಿಕೊಟ್ಟರಷ್ಟೇ.

■ ವರದಿಗಾರ


ಬಾಣೆ ಜಮೀನನ್ನು ಅರಣ್ಯ ಪ್ರದೇಶ ಎಂದು ನಾಚಪ್ಪ ಒಪ್ಪಿಕೊಳ್ಳುವುದಾದರೆ, ಅವರು ಕೊಡಗಿನ ಜನತೆಯನ್ನು ವಂಚಿಸುತ್ತಿದ್ದಾರೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ 1 ಲಕ್ಷದ 2 ಸಾವಿರ ಹೆಕ್ಟೇರ್ ಪ್ರದೇಶವು ಕೊಡಗಿನಲ್ಲಿ ಕಾಫಿ ಕೃಷಿಗೆ ಒಳಪಟ್ಟಿದೆ. ಇದನ್ನು ಅರಣ್ಯ ಎಂದರೆ ಕೊಡಗಿನ ಜನತೆ ಮಣ್ಣು ತಿನ್ನಬೇಕಾದ ಪರಿಸ್ಥಿತಿ ಬರುತ್ತದೆ. ಕೊಡಗಿನಲ್ಲಿ ಅರಣ್ಯ ಪ್ರದೇಶವು 1 ಲಕ್ಷ 12 ಸಾವಿರ ಹೆಕ್ಟೇರ್‌ನ ಇದ್ದು, ಆನೆಗಳು ಕಾಡನ್ನು ಬಿಟ್ಟು ಕಾಫಿತೋಟಗಳಲ್ಲಿ ಬೀಡು ಬಿಟ್ಟಿದೆ. ಮೀಸಲು ಅರಣ್ಯದ ಸ್ಥಿತಿ ಹೀಗಿದ್ದರೂ, ನಾಚಪ್ಪ ಮತ್ತು ಕೊಡಗು ಜಿಲ್ಲೆಯ ಡೋಂಗಿ ಪರಿಸರವಾದಿಗಳು ಈ ಬಗ್ಗೆ ಮಾತನಾಡುತ್ತಿಲ್ಲ. ಅರಣ್ಯ ಪ್ರದೇಶವನ್ನು ಸ್ಮಾರಕದ ಹೆಸರಿನಲ್ಲಿ ಅತಿಕ್ರಮಣ ಮಾಡಿದ್ದರೂ, ಡೋಂಗಿ ಪರಿಸರವಾದಿಗಳು 'ಸೊಲ್ಲೆತ್ತಿಲ್ಲ. ಅಂದರೆ ಇವರೆಲ್ಲರೂ ಈ ವಿಚಾರದಲ್ಲಿ ಒಂದಾಗಿದ್ದಾರೆ ಎಂಬುದು ಖಚಿತವಾಗುತ್ತದೆ. ಕೇಂದ್ರ ಸರಕಾರವು ಈಗ ಅಗ್ರೋ ಫಾರೆಸ್ಟ್ ನೀತಿಯನ್ನು ಜಾರಿಗೆ ತಂದಿದೆ. ಅದು ಕೂಡ ತಮ್ಮ ಗಮನದಲ್ಲಿ ಇಲ್ಲ ಎನ್ನುವಂತೆ ಅರಣ್ಯ ಇಲಾಖೆ ವರ್ತಿಸುತ್ತಿದೆ. ಅರಣ್ಯ ರಕ್ಷಣೆ ಎಂದರೆ ಸರಕಾರಿ ಅರಣ್ಯದ 'ರಕ್ಷಣೆ' ಅಲ್ಲ. ಖಾಸಗಿಯವರ ಕೈಯಲ್ಲಿ ಉತ್ತಮವಾಗಿ ಇರುವಂತಹ ಹಸಿರನ್ನು ವಶಪಡಿಸಿಕೊಂಡು, ಅದನ್ನೇ ಅರಣ್ಯ ಎಂದು ಹೇಳಲು ಅರಣ್ಯ ಇಲಾಖೆ ನಿರಂತರವಾಗಿ ಶ್ರಮಿಸುತ್ತಿದ್ದು, ನಾಚಪ್ಪನಂತಹವರು ಅವರ ಕೈಯಲ್ಲಿ ದಾಳಗಳಾಗುತ್ತಿದ್ದಾರೆ.

ಸಂಘ ಪರಿವಾರದ ಚಡಪಡಿಕೆ

ದೇವಟ್‌ಪರಂಬು ವಿವಾದದ ಬಗ್ಗೆ ಸಿ.ಎನ್.ಸಿಯ ನಾಚಪ್ಪ ಹೇಗೆ ಇಕ್ಕಟ್ಟಿನಲ್ಲಿ ಇದ್ದಾರೋ, ಅದಕ್ಕಿಂತಲೂ ಹೆಚ್ಚಿನ ಇಕ್ಕಟ್ಟಿನಲ್ಲಿ ಈಗ ಸಂಘ ಪರಿವಾರ ಇದೆ. ವಿಶ್ವ ಹಿಂದೂ ಪರಿಷತ್ತಿನ ಪ್ರಮುಖ ಜಗದೀಶ್ ಕಾರಂತ ಈಗ ಈ ಪ್ರದೇಶದಲ್ಲಿಯೇ ಬೀಡುಬಿಟ್ಟಿದ್ದಾರೆ. ಇತಿಹಾಸದ ಪ್ರಕಾರ ಜಗದೀಶ್ ಕಾರಂತ ಕೊಡಗಿಗೆ ಕಾಲಿಟ್ಟಾಗಲೆಲ್ಲಾ ಏನಾದರೊಂದು ಅನಾಹುತ ನಡೆಯುತ್ತದೆ. ಈಗ ಯಾವ ಅನಾಹುತ ಕಾದಿದೆಯೋ ತಿಳಿಯದು.

ಸುಳ್ಳುಗಳನ್ನು ಸೃಷ್ಟಿಸುವುದರಲ್ಲಿ ಸಂಘ ಪರಿವಾರ ಹೇಗೆ ನಿಸ್ಸೀಮವೋ ಅದೇ ರೀತಿ ಜಗದೀಶ ಕಾರಂತ ಕೂಡ ನಿಸ್ಸೀಮರು. ಈಗ ಒಡೆದು ಹೋಗಿರುವ ಬಿಜೆಪಿಯ ಪರಂಪರಾಗತ ಮತಗಳಾದ ಕೊಡವ ಮತ್ತು ಅರೆಭಾಷೆ ಗೌಡರನ್ನು ಒಂದಾಗಿಸಲು ಹರಸಾಹಸವನ್ನು ಜಗದೀಶ್ ಕಾರಂತ್ ಮಾಡುತ್ತಿದ್ದಾರೆ. ಇದಕ್ಕಾಗಿಯೇ ಇಲ್ಲಿ ಹಿಂದೂ ಸ್ಮಾರಕವನ್ನು ನಿರ್ಮಾಣ ಮಾಡುವ ಎಂದು ಹೇಳುತ್ತಿದ್ದಾರೆ. ಆದರೆ ನಾಚಪ್ಪ ಇದಕ್ಕೆ ಒಪ್ಪುವುದು ಸಾಧ್ಯವಿಲ್ಲದ ಮಾತು. ತಾನು ಬಿತ್ತಿದ ಬೀಜದ ಫಸಲು ಇನ್ನೊಬ್ಬರಿಗೆ ಕಟಾವು ಮಾಡಲು ನಾಚಪ್ಪ ಖಂಡಿತಾ ಬಿಡುವುದಿಲ್ಲ. ನಾಚಪ್ಪ ಸಂಘ ಪರಿವಾರ ಮತ್ತು ಬಿಜೆಪಿಯನ್ನು ಬೆಂಬಲಿಸುತ್ತಿದ್ದರೂ, ಈ ವಿಚಾರದಲ್ಲಿ ಆತ ತಮ್ಮನ್ನು ಬೆಂಬಲಿಸುವುದಿಲ್ಲ ಎಂದು ಜಗದೀಶ್ ಕಾರಂತರಿಗೆ ಚೆನ್ನಾಗಿಯೇ ತಿಳಿದಿದೆ. ಹಾಗಾಗಿ ಈಗ ಮತ್ತೊಂದು ಸುತ್ತಿನ ಅಪಪ್ರಚಾರದಲ್ಲಿ ತೊಡಗಿದ್ದಾರೆ.

ದೇವಟ್‌ಪರಂಬು ವಿವಾದದಿಂದ ಮೂವರು ವಕೀಲರು ಅಂದರೆ ಎನ್.ಯು. ನಾಚಪ್ಪ, ಎ.ಕೆ. ಸುಬ್ಬಯ್ಯ ಹಾಗೂ ಕೆ.ಆರ್. ವಿದ್ಯಾಧರ ಅವರನ್ನು ಹೊರಗಿಡಬೇಕು ಎಂದು ಜಗದೀಶ್ ಕಾರಂತ ಹೇಳಿದ್ದಾರೆ. ವಾಟ್ಸಪ್‌ನಲ್ಲಿ ಬಂದ ಒಂದು ಸಂದೇಶ ಈ ರೀತಿ ಇದೆ: "ಸ್ಮಾರಕ ನಿರ್ಮಾಣ ವಿಚಾರದಲ್ಲಿ ಏನೇ ಬಿನ್ನಾಭಿಪ್ರಾಯಗಳಿದ್ದರೂ ಅದನ್ನು ಉತ್ತಮ ರೀತಿಯ ಮಾತುಕತೆಯ ಮೂಲಕ ಸರಿಪಡಿಸಬಹುದು. ದೇವಟ್‌ಪರಂಬು ಸಮಸ್ಯೆಯೇ ಅಲ್ಲ. ಆದರೆ ಅಲ್ಲಿ ನುಸುಳಿರುವ ಕ್ಯಾನ್ಸರ್ ತರಹದ ಮೂರು ಸಮಯಸಾಧಕ ವಿಕೃತ ಮನಸ್ಸಿನ ವಕೀಲರೇ ದೊಡ್ಡ ಸಮಸ್ಯೆ. ಮೊದಲು ಈ ಮೂವರನ್ನು ಹೊರ ದಬ್ಬಬೇಕು. ಸಮಾಜದ ಬಗ್ಗೆ ಉತ್ತಮ ಕಾಳಜಿ ಇರುವವರು ಮುಂದೆ ಬರಬೇಕು. ಇಂದಿನ ಪ್ರಜ್ಞಾವಂತ ಯುವ ಜನತೆ ಯಾವುದೇ ಪ್ರಚೋದನೆಗೆ ಒಳಗಾಗದೆ, ಮುಂದಿನ ಪೀಳಿಗೆಗೆ ಬಲಾಢ್ಯ ಹಿಂದೂ ಸಮಾಜವನ್ನು ಉಳಿಸಿಕೊಡಬೇಕಾಗಿದೆ. ಹಾಗಾಗದಿದ್ದಲ್ಲಿ ಕಾಶ್ಮೀರ ಮತ್ತು ಕೇರಳದಲ್ಲಿನ ಹಿಂದೂಗಳ ಸ್ಥಿತಿ ನಮಗೂ ತಪ್ಪಿದ್ದಲ್ಲ."


ಎ.ಕೆ. ಸುಬ್ಬಯ್ಯ

ಇದರಿಂದ ಸಂಘ ಪರಿವಾರ ಯಾವ ಪ್ರಮಾಣದ ಚಡಪಡಿಕೆಗೆ ಒಳಗಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ದೇವಟ್‌ಪರಂಬು ವಿವಾದ ಯಾರು ಹುಟ್ಟು ಹಾಕಿದ್ದು ಎಂಬುದು ಈಗ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ. ಏಕೆಂದರೆ ಬಿಜೆಪಿಯ ಪರಂಪರಾಗತವಾದ ಮತಗಳನ್ನು ಒಡೆಯಲು ಕಾಂಗ್ರೆಸಿನ ಪ್ರಮುಖರು ಇದನ್ನು ಸೃಷ್ಟಿಸಿದವರಿಗೆ 50 ಲಕ್ಷ ರೂಪಾಯಿ ಕಿಕ್‌ಬ್ಯಾಕ್ ನೀಡಿದ್ದಾರೆ ಎಂಬ ವಿಚಾರ ಈಗ ಬಿಜೆಪಿ ವಲಯದಲ್ಲಿ ಚರ್ಚೆಯಾಗುತ್ತಿದೆ. ಮತ್ತೊಂದು ಕಡೆ ನಾಚಪ್ಪ ಇತ್ತೀಚೆಗೆ ತನ್ನ ಸಂಘಟನೆಯಿಂದ ಆಚರಿಸಿದ 'ಕಕ್ಕಡ 18' ಕಾರ್ಯಕ್ರಮಕ್ಕೆ ನೂತನ ವಿಧಾನ ಪರಿಷತ್ ಸದಸ್ಯರಾದ ಕಾಂಗ್ರೆಸಿನ ಶ್ರೀಮತಿ ವೀಣಾ ಅಚ್ಚಯ್ಯ, ಬಿಜೆಪಿಯ ಸುನಿಲ್ ಸುಬ್ರಹ್ಮಣಿರವರಿಗೆ ಸನ್ಮಾನ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಈ ಕಾರ್ಯಕ್ರಮದಿಂದ ಬುದ್ಧಿವಂತಿಕೆಯಿಂದ ಸುನಿಲ್ ಸುಬ್ರಹ್ಮಣಿ ತಪ್ಪಿಸಿಕೊಂಡಿದ್ದರು. ಆದರೆ ವೀಣಾ ಅಚ್ಚಯ್ಯ ಸನ್ಮಾನವನ್ನು ಸ್ವೀಕರಿಸಿದರು.

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಮತ್ತು ಕಾಂಗ್ರೆಸ್ ಪಕ್ಷದ ವಕ್ತಾರ ಬ್ರಿಜೇಶ್ ಕಾಳಪ್ಪ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಾಚಪ್ಪ ಮತ್ತು ಸಿಎನ್‌ಸಿ ಸಂಘಟನೆಯ ಎಲ್ಲಾ ಚಟುವಟಿಕೆಗೆ ತಮ್ಮ ಬೆಂಬಲವಿದೆ ಎಂದು ಘೋಷಿಸಿದರು. ಕರ್ನಾಟಕದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ರಾಜ್ಯ ಸರಕಾರ ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸಿತ್ತು. ಅದನ್ನು ನಿರಂತರವಾಗಿ ಆಚರಿಸಲು ನಿರ್ಧರಿಸಿದೆ. ಇದನ್ನು ಸಿಎನ್‌ಸಿ ಮತ್ತು ನಾಚಪ್ಪ ವಿರೋಧಿಸುತ್ತಿದ್ದಾರೆ. ಇವರ ಎಲ್ಲಾ ಚಟುವಟಿಕೆಗೆ ತಮ್ಮ ಬೆಂಬಲ ಎಂದು ವೀಣಾ ಅಚ್ಚಯ್ಯ ಮತ್ತು ಬ್ರಿಜೇಶ್ ಕಾಳಪ್ಪ ಹೇಳುವುದಾದರೆ, ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಈ ವಿಚಾರದಲ್ಲಿ ರಾಜ್ಯ ಸಮಿತಿಯ ಮತ್ತು ರಾಜ್ಯ ಸರಕಾರದ ನಿಲುವಿಗೆ ವಿರುದ್ಧವಾಗಿದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕಾದ ಜವಾಬ್ದಾರಿಯನ್ನು ಹೊತ್ತುಕೊಂಡಿದೆ.

■ ಬಿ.ಎನ್.ಮನು ಶೆಣೈ


ಮಂಡ್ಯ: ಮನ್‌ಮುಲ್ ಅಕ್ರಮಕ್ಕೆ ತಕ್ಕ ಶಾ

ಅಡ್ಡದಾರಿ ತುಳಿದವರಿಗೆ ಉಳಿಗಾಲವಿಲ್ಲ ಅನ್ನೋದು ಮತ್ತೆ ಸಾಬೀತಾಗಿದೆ. ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ(ಮನ್‌ಮುಲ್)ದಲ್ಲಿ ನಡೆದಿದ್ದ ನೇಮಕಾತಿ ಸಮಯದಲ್ಲಿ ಬೋಗಸ್ ಸರ್ಟಿಫಿಕೇಟ್ ಕೊಟ್ಟು ಕೆಲಸಕ್ಕೆ ಸೇರಿದ್ದವರ ಬಗ್ಗೆ 'ಪತ್ರಿಕೆ' ಏಪ್ರಿಲ್‌ನಲ್ಲಿ ವಿಸ್ತೃತ ವರದಿ ಮಾಡಿತ್ತು, ಅದರಲ್ಲಿ ಮೂವರು ಇದೀಗ ವಜಾಗೊಂಡು ಮನೆ ಸೇರಿದ್ದಾರೆ. ಕಾಸು ಕೊಟ್ಟರೆ ಕಮಂಗಿಗಳಿಗೂ ಕೆಲಸ ಕೊಡಿಸುವ ದಿ (ಡೀಲ್) ಕಂಪನಿಯೊಂದು ಮನ್‌ಮುಲ್ ಅಂಗಳದಲ್ಲಿ ಚೆನ್ನಾಗಿ ಮೇಯ್ದಾಡುತ್ತಿದೆ. ಎಂಡಿ ಕೃಷ್ಣೇಗೌಡ ಮತ್ತು ಜಂಟಿ ನಿಬಂಧಕಿ ಆಶಾ ಇಂತದ್ದನ್ನೆಲ್ಲ ಕಂಡೂಕಾಣದಂತೆ ಗಪ್‌ಚುಪ್ ಆಗಿ ಇದ್ದವರು. ಈಗ ಅವರಿಗೂ ಎತ್ತಂಗಡಿ ಭಾಗ್ಯ ಸಿಕ್ಕಿದೆ. ಹಣ ಕೊಟ್ಟು ಅಕ್ರಮವಾಗಿ ತೂರಿಕೊಂಡಿದ್ದ ಟಿ.ಎಸ್. ಸಂದೀಪ್, ಎಂ.ಅಶೋಕ್, ಜಗದೀಶ್ ಮಡಿವಾಳರ್ ಈಗ ಅತ್ತ ಕಾಸೂ ಇಲ್ಲ, ಇತ್ತ ಉದ್ಯೋಗವು ಇಲ್ಲದೆ ಗೋತಾ ಅನ್ನೋ ಸ್ಥಿತಿಗೆ ಬಂದು ತಲುಪಿದ್ದಾರೆ.

ಮನ್‌ಮುಲ್‌ನಲ್ಲಿ ಹಲವರು ನಕಲಿ ಅಂಕಪಟ್ಟಿ ಹಾಗೂ ನಕಲಿ ಸೇವಾ ಪ್ರಮಾಣಪತ್ರ ಸಲ್ಲಿಸಿ, ಡೀಲ್ ಕಂಪನಿಯ ಸದಸ್ಯರಿಗೆ ಹತ್ತಾರು ಲಕ್ಷ ಹಣ ತೆತ್ತು ನೌಕರಿ ಗಿಟ್ಟಿಸಿಕೊಂಡಿದ್ದಾರೆ ಎಂದು ಪತ್ರಿಕೆ ಮಾಡಿದ ಸ್ಫೋಟಕ ವರದಿಯ ಪರಿಣಾಮದಿಂದಲೇ ನೌಕರರಾದ ಈ ತ್ರಿಮೂರ್ತಿಗಳು ಕೆಲಸದಿಂದ ವಜಾ ಆಗಿದ್ದಾರೆ. ಪತ್ರಿಕೆಯಲ್ಲಿ ವರದಿ ಬಂದೊಡನೆ ಪ್ರಜ್ಞಾವಂತ ನಾಗರಿಕರು ಪತ್ರಿಕಾಗೋಷ್ಠಿ ನಡೆಸಿ ಮನ್‌ಮುಲ್ ಹಗರಣಗಳ ಬಗ್ಗೆ ಜನರ ಗಮನ ಸೆಳೆದಿದ್ದರು. 2-3 ಬಾರಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ 2015ರ 123 ಮಂದಿ ಹಾಗೂ 2016ರ 75 ಮಂದಿ ನೌಕರರ ನೇಮಕಾತಿಯಲ್ಲಿ ನಡೆದಿದ್ದ ಭ್ರಷ್ಟಾಚಾರ, ರೈತ ಕಲ್ಯಾಣ ಟ್ರಸ್ಟ್ ಹಣದಲ್ಲಿ 5 ಕೋಟಿ ಲೂಟಿಗೆ ನಿಂತಿದ್ದ ಡೀಲ್ ಕಂಪನಿಯ ಸಂಚು, ಖರೀದಿ ಮತ್ತು ಗುತ್ತಿಗೆಯಲ್ಲಿ ನಡೆದಿರುವ ಗೋಲ್‌ಮಾಲ್ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿತ್ತು, ಅಲ್ಲದೆ ಮನ್‌ಮುಲ್ ಉಳಿಸಿ ಹೋರಾಟ ಸಮಿತಿ ಕಟ್ಟಿಕೊಂಡು ಗೆಜ್ಜಲಗೆರೆಯಲ್ಲಿರುವ ಮನ್‌ಮುಲ್ ಕಚೇರಿಗೆ ಮುತ್ತಿಗೆ ಹಾಕಲು ದಿನವನ್ನೂ ನಿಗದಿಪಡಿಸಲಾಗಿತ್ತು, ಅದಕ್ಕೂ ಮೊದಲೇ ಎಚ್ಚೆತ್ತ ಮನ್‌ಮುಲ್ ಆಡಳಿತ ಮಂಡಳಿ 2015ರ ನೇಮಕಾತಿಯಲ್ಲಿ ಕೆಲಸ ಪಡೆದ ಎಲ್ಲರ ಅಂಕಪಟ್ಟಿ ನೈಜತೆಯನ್ನು ದೃಢಪಡಿಸುವ ಸಲುವಾಗಿ ಆಯಾ ಕಾಲೇಜಿಗೆ ಪತ್ರ ಬರೆದಿತ್ತು.

ಅದರ ಪರಿಣಾಮವಾಗಿ ನಕಲಿ ಅಂಕಪಟ್ಟಿ ಸಲ್ಲಿಸಿ ಜ್ಯೂನಿಯರ್ ಟೆಕ್ನಿಷಿಯನ್ ಆಗಿ ಕೆಲಸ ಪಡೆದಿದ್ದ ಎಂ.ಅಶೋಕ ಸಿಕ್ಕಿಬಿದ್ದಿದ್ದ. ಈತ ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣನ ಹತ್ತಿರದ ಸಂಬಂಧಿ. ಅಶೋಕ ಚನ್ನಪಟ್ಟಣದ ಕೆಂಗಲ್‌ನಲ್ಲಿರುವ ಹೊಂಬೇಗೌಡ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಐಟಿಐ ಫಿಟ್ಟರ್ ಕೋರ್ಸನ್ನೇನೊ ಓದಿದ್ದ ಆದರೆ ಅದರಲ್ಲಿ ಆತ ಪಡೆದದ್ದು 481 ಅಂಕಗಳನ್ನು, ಮನಮುಲ್ ಹುದ್ದೆಗೆ ಅರ್ಜಿ ಸಲ್ಲಿಸುವಾಗ 481ರ ಬದಲಿಗೆ 631 ಎಂದು ಅಂಕಪಟ್ಟಿ ತಿದ್ದಿದ್ದ, ಅಧ್ಯಕ್ಷ ಕದಲೂರು ರಾಮಕೃಷ್ಣನ ಕೃಪೆಯಿಂದ ಜೂನಿಯರ್ ಟೆಕ್ನಿಷಿಯನ್ ಹುದ್ದೆಯೂ ಇವನಿಗೆ ಒಲಿದುಬಂದಿತ್ತು, ಯಾವಾಗ 'ಪತ್ರಿಕೆ'ಯಲ್ಲಿ ಅಶೋಕನ ಅಂಕಪಟ್ಟಿ ಪುರಾಣ ಹೊರಬಿತ್ತೋ ಮನ್‌ಮುಲ್ ಆಡಳಿತ ಮಂಡಳಿ ಹೊಂಬೇಗೌಡ ಕಾಲೇಜಿಗೆ ಅಶೋಕನ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಅಂಕಪಟ್ಟಿಯ ನೈಜತೆ ದೃಢೀಕರಿಸುವಂತೆ ಪತ್ರ ಬರೆದಿತ್ತು, ಆಗಲೇ ಅವನ 'ತಿದ್ದುಪಡಿ' ಪ್ರಳಯಾಂತಕತನ ಬಯಲಾದದ್ದು. ಈಗವನು ಮನೆಹಾದಿ ನೋಡಬೇಕಾಗಿದೆ. ಆದರೆ ಅಂಕಪಟ್ಟಿ ತಿದ್ದುವುದೆಂದರೆ ಅದು 'ಫೋರ್ಜರಿ' ಅಪರಾಧವಾಗುತ್ತೆ, ಮನ್‌ಮುಲ್ ಹಾಗೊಂದು ಕಂಪ್ಲೆಂಟ್ ಕೊಟ್ಟಿದ್ದೇ ಆದಲ್ಲಿ ಆತ ಸೇರಬೇಕಾದ್ದು ಮನೆಯನ್ನಲ್ಲ, ಜೈಲನ್ನು. ಆದರೆ ಕದಲೂರು ರಾಮಕೃಷ್ಣನ ಕೃಪಾಕಟಾಕ್ಷದಿಂದಾಗಿ ಸೇಫಾಗಿ ಮನೆ ಹೊಕ್ಕಿದ್ದಾನೆ.




ಕದಲೂರು ರಾಮಕೃಷ್ಣ


ಬೋರೇಗೌಡ

ಇದೇರೀತಿ ಜಗದೀಶ ಮಡಿವಾಳರ್ ಎಂಬಾತ ನಕಲಿ ಬಿಎ ಮಾರ್ಕ್ಸ್‌ಕಾರ್ಡ್ ಸಲ್ಲಿಸಿ, ಡೀಲ್ ಕಂಪನಿಗೆ ಲಕ್ಷಲಕ್ಷ ಸುರಿದು ವಿಸ್ತರಣಾಧಿಕಾರಿ ಹುದ್ದೆ ದಕ್ಕಿಸಿಕೊಂಡಿದ್ದ. ಮನ್‌ಮುಲ್ ಬರೆದ ಪತ್ರಕ್ಕೆ ಉತ್ತರಿಸಿದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಜಗದೀಶ್ ಮಡಿವಾಳರ್ ನೀಡಿರುವ ರಿ.ಸಂ. 1134ಬಿಎ0566 ನಕಲಿ ಎಂದು ಸ್ಪಷ್ಟಪಡಿಸಿತ್ತು, ಇನ್ನು ಸಂದೀಪ್ ಎಂಬಾತನದ್ದೂ ಇದೇ ಗೋಳು. ಮನ್‌ಮುಲ್ ಹೊಕ್ಕಿದ್ದ ಮೀನುಗಳೇನೊ ತಗುಲಿಕೊಂಡಿವೆ. ಆದರೆ ಮೇಯ್ದಾಡುತ್ತಿರುವ ತಿಮಿಂಗಿಲಗಳು ಮಾತ್ರ ಗಡದ್ದಾಗಿ ಅಲ್ಲೇ ತಳವೂರಿ ಕೂತಿವೆ.

ಈ ಮೂವರನ್ನು ವಜಾ ಮಾಡಿದರಷ್ಟೇ ಸಾಲದು, ಅಕ್ರಮ ನೇಮಕಾತಿಯ ಸೂತ್ರಧಾರರು ಯಾರು ಅನ್ನೋದನ್ನು ಪತ್ತೆಹಚ್ಚಿ ಸದೆ ಬಡಿಯಬೇಕಿದೆ. ಈಗಾಗಲೇ ಮನ್‌ಮುಲ್ ಅಕ್ರಮಗಳನ್ನು ಕಂಡು ಬೆಚ್ಚಿದ ಜಿಲ್ಲೆಯ ಜನ ಹೋರಾಟ ನಡೆಸುತ್ತಿದ್ದಾರೆ. ಮನ್‌ಮುಲ್ ಉಳಿಸುವ ಭಾಗವಾಗಿ ಮಾಜಿ ಅಧ್ಯಕ್ಷ ಜವರೇಗೌಡ ಹಾಗೂ ತಿಮ್ಮನಹೊಸೂರು ಹಾಲು ಉತ್ಪಾದಕರ ಸಂಘದ ನಿರ್ದೇಶಕ ಮದ್ದೂರು ಜೆಎಂಎಫ್‌ಸಿ ಕೋರ್ಟ್‌ನಲ್ಲಿ 2015ರ ನೇಮಕಾತಿ ಅಕ್ರಮದ ಬಗ್ಗೆ ಖಾಸಗಿ ದೂರು ಸಲ್ಲಿಸಿದ್ದರು. ಅದರಂತೆ 24 ಮಂದಿಯ ಮೇಲೆ ಎಫ್‌ಆರ್ ನಂ.414/16 ಕೇಸು ದಾಖಲಾಗಿದೆ. ಅಲ್ಲದೇ ಈ ಕುರಿತು ತನಿಖೆ ನಡೆಸುವಂತೆ ಸ್ವತಃ ನ್ಯಾಯಾಧೀಶರೇ ಮದ್ದೂರು ಟೌನ್ ಪಿಎಸ್‌ಐಗೆ ಆದೇಶ ನೀಡಿದ್ದರು. ಪ್ರಾಥಮಿಕ ತನಿಖೆಯಲ್ಲಿ ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣ ಸೇರಿದಂತೆ 11 ಮಂದಿ ನಿರ್ದೇಶಕರು ಹಾಗೂ ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕ ಕೃಷ್ಣೇಗೌಡ, 11 ಮಂದಿ ಅಧಿಕಾರಿಗಳು ಸೇರಿ ಒಟ್ಟು 24 ಮಂದಿ ಅವ್ಯವಹಾರ ನಡೆಸಿರುವುದು ಬೆಳಕಿಗೆ ಬಂದಿದೆ.

2015ರ ನೇಮಕಾತಿ ಪ್ರಕ್ರಿಯೆಯಲ್ಲಿ ಸಾಕಷ್ಟು ಅಕ್ರಮ ನಡೆದಿದೆ ಎಂಬುದು ನೂರಕ್ಕೆ ನೂರರಷ್ಟು ಸತ್ಯ. ಸರಿಯಾದ ವಿಚಾರಣೆ ನಡೆದರೆ ಇನ್ನೂ ಹಲವರು ಕೆಲಸ ಕಳೆದುಕೊಳ್ಳುವುದು ಖಚಿತ. ನೇಮಕಾತಿ ಪ್ರಕ್ರಿಯೆಯಲ್ಲಿ ಯಾವ ಲೋಪವೂ ಇಲ್ಲದಂತೆ ನೋಡಿಕೊಳ್ಳಲು ಡೀಲ್ ಕಂಪನಿ ಮನ್ಮಥರಾಜ ಅಂಡ್ ಟೀಂನ್ನು ನೇಮಿಸಿತ್ತು, ನಕಲಿ ಅಂಕಪಟ್ಟಿ ತಿದ್ದಿ ಕೆಲಸಕ್ಕೆ ಸೇರಿದ ಅಶೋಕ, ಸಂದೀಪ, ಜಗದೀಶ ಮಡಿವಾಳರ್ ಅಂಕಪಟ್ಟಿ ಎಲ್ಲವನ್ನು ಪರಿಶೀಲಿಸಿದ ಎಸ್.ಡಿ.ಮನ್ಮಥರಾಜ, ವಿ.ಎಲ್.ಕಾಂತರಾಜ್, ಎಂ.ಎಸ್.ಮಾದಶೆಟ್ಟಿ ಎಂಬ ನಿವೃತ್ತ ಅಧಿಕಾರಿಗಳ ತಂಡ ಎಲ್ಲವೂ ಸರಿಯಾಗಿದೆ ಎಂದು ಹೇಳಿತ್ತು. ಅಶೋಕನ ಮಾರ್ಕ್ಸ್‌ಕಾರ್ಡ್ ನೋಡಿದ ಯಾರಿಗೆ ಆದರೂ ಇದು ತಿದ್ದಿರುವ ಮಾರ್ಕ್ಸ್‌ಕಾರ್ಡ್ ಎಂದು ಮೇಲ್ನೋಟಕ್ಕೆ ಗೊತ್ತಾಗುವಂತಿತ್ತು, ಆದರೆ ಮನ್ಮಥರಾಜ್‌ನ ಚೋರ ಟೀಂ ಎಲ್ಲವೂ ಸರಿಯಾಗಿದೆ ಎಂದು ತಿಪ್ಪೆ ಸಾರಿಸಿತ್ತು.

ನಿವೃತ್ತ ಅಧಿಕಾರಿಗಳಾದ ಮನ್ಮಥರಾಜ, ಕಾಂತರಾಜ, ಮಾದಶೆಟ್ಟಿಯನ್ನು ನೇಮಕಾತಿ ಪ್ರಕ್ರಿಯೆ ಪರಿಶೀಲನೆಗೆ ನೇಮಿಸಿದ್ದೇ ಡೀಲ್ ಕಂಪನಿಯ ಬೋರೇಗೌಡ. ... ಕಂಪನಿಗೆ ಲಕ್ಷಲಕ್ಷ ಹಣ ಕೊಟ್ಟ ಅಕ್ರಮ ಅಭ್ಯರ್ಥಿ... ಸಕ್ರಮ ಮಾಡಿಕೊಡುವ ಕಲೆ ಮನ್ಮಥರಾಜ್ ... ಟೀಂಗೆ ನೀರು ಕುಡಿದಷ್ಟೇ ಸಲೀಸು. ಹಾ... ಬೋರೇಗೌಡನ ಡೀಲ್‌ಗೆ ಸೈ ಅಂದ ಮನ್ಮಥ... ಟೀಮನ್ನು ಸರಿಯಾಗಿ ತಡವಿಕೊಂಡರೆ ನಡೆದಿರುವ ... ಅಕ್ರಮಗಳು ಬಯಲಾಗುತ್ತದೆ.

ಇನ್ನು 2016ರಲ್ಲಿ 75 ವಿವಿಧ ಹುದ... ನೇಮಕಾತಿಗಾಗಿ ಮನ್‌ಮುಲ್‌ನಿಂದ ಅರ್ಜಿ ಆಹ... ಲಾಗಿತ್ತು, ಈ ನೇಮಕಾತಿಯ ದಾಖಲಾತಿ ಪರಿಶೀ... ನಡೆಸಿದ್ದು ಕೂಡಾ ಕಾಂತರಾಜ ಹಾಗೂ ಮಾದ... ಮನ್ಮಥರಾಜನಿಗೆ ಅದೇನು ಭಯ ಕಾಡಿತೊ ... 2016 ನೇಮಕಾತಿ ಪ್ರಕ್ರಿಯೆಯಲ್ಲಿ ಮೂಗು ತೂ... ಬೋರೇಗೌಡನ ಚೇಲಾಗಳಾಗಿರುವ ಇವರೆಲ್ಲಾ 20... ನೇಮಕಾತಿಯ ಸಂದರ್ಭದಲ್ಲಿಯೇ ಯಾವ ರೀತಿ ... ಮಾಡಬಹುದೆಂಬುದನ್ನು ಆತನಿಗೆ ಹೇಳಿಕೊಟ್ಟಿ... ನೇಮಕಾತಿಗಳಲ್ಲಿ ದುಡ್ಡಿನ ರುಚಿ ಕಂಡಿ... ಬೋರೇಗೌಡನಿಗೆ ನೇಮಕಾತಿ ಬಂತೆಂದರೆ ಹಬ... ಹಬ್ಬ, ಮನ್ಮಥರಾಜನ ಡೀಲ್ ಟೀಮನ್ನು ಕರೆಸಿಕೊ... ಅವರಿಗೊಂದಿಷ್ಟು ಬಸಾಕಿ, ಇನ್ನುಳಿದ ಡೀಲ್ ಕಂಪ... ಸದಸ್ಯರ ಜೊತೆ ಮೃಷ್ಟಾನ್ನಭೋಜನಕ್ಕೆ ಚಕ್ಕಮಕ್ಕಳ ... ಕೂತುಬಿಡುತ್ತಾನೆ. ಇಂತಹ ಹಣದಿಂದಲೇ ಹತ್ತು ವ... ಅವಧಿಯಲ್ಲಿ ಸಾಕಷ್ಟು ಸ್ಥಿತಿವಂತನಾಗಿರುವ ಬೋರೇ... ಮನೆ, ಜಮೀನು ಎಲ್ಲಾ ಖರೀದಿಸಿದ್ದಾನೆ. ಮ... ಅಮೆರಿಕದ ಡೆಟ್ರಾಯಿಟ್‌ಗೆ ಓದಲು ಕಳುಹಿಸುತ್ತಿ...


ಆಡಳಿತಾಧಿಕಾರಿ ಎಂ.ಎಲ್. ಮನೀಷ್ ಮತ್ತು ... ವ್ಯವಸ್ಥಾಪಕ ಡಾ.ಅಕ್ಕಲಪ್ಪ ರೆಡ್ಡಿ ಕೂಡ ಡೀಲ್ ... ಸದಸ್ಯರ ತಾಳಕ್ಕೆ ತಕ್ಕಂತೆ ಕುಣಿಯುವುದು ವಿಪರ್ಯ... ನೇಮಕಾತಿಯ ಸಂದರ್ಭದಲ್ಲಿ ಪರಿಶೀಲನೆ ಮಾ... ಕೆಲಸ ವಹಿಸಿಕೊಂಡಿದ್ದ ಮನ್ಮಥರಾಜ್ ಅಂಡ್ ... ನಕಲಿ ಅಂಕಪಟ್ಟಿ, ನಕಲಿ ಸೇವಾ ಅನುಭವ ಪತ್ರ ... ಬೀಳಲಿಲ್ಲವೆ ಅಂತ ಕೇಳಿದರೆ ಅವರೆಲ್ಲಾ ಬೊಟ್ಟು ... ತೋರಿಸುವುದು ಆಡಳಿತಾಧಿಕಾರಿ ಮನೀಷ್ ಹ... ಅಕ್ಕಲಪ್ಪ ರೆಡ್ಡಿಯತ್ತ, ಅವರಿಬ್ಬರು ಹೇಳಿದಂತೆ ... ಕೇಳಿದ್ದೇವೆ ಎಂದು ನುಣುಚಿಕೊಳ್ಳುತ್ತಿದ್ದಾರೆ. ಮ... ಹಾಗೂ ಅಕ್ಕಲಪ್ಪ ರೆಡ್ಡಿ ಮೇಲೂ ಇದೇ ವಿಚಾ... ಕೇಸು ದಾಖಲಾಗಿದೆ. ಇವರಿಬ್ಬರನ್ನು ಅಮಾನತು ... ತನಿಖೆ ನಡೆಸಿದರೆ ಮಾತ್ರ ಸತ್ಯ ಹೊರಬರಬ... ಇಲ್ಲದೇ ಹೋದರೆ ಡೀಲ್ ಕಂಪನಿಯ ರಹಸ್ಯ... ಮನ್‌ಮುಲ್ ಆವರಣದಲ್ಲೇ ಸಮಾಧಿ ಮಾಡು... ಇವರಿಗೇನು ಕಷ್ಟದ ಕೆಲಸವಲ್ಲ.


ಮನ್‌ಮುಲ್ ಹಗರಣಗಳು ಒಂದೆರಡಲ್ಲ, ಅದ... ನೇಮಕಾತಿ ಅವ್ಯವಹಾರವನ್ನು ಕಣ್ಣಾರೆ ಕಂಡನಂತರ, ... ಬಿಟ್ಟರೆ ಕೆಲವೇ ದಿನಗಳಲ್ಲಿ ಮನ್‌ಮುಲ್ ಶಾಶ್ವ... ಕಣ್ಮುಚ್ಚಲಿದೆ ಅನ್ನೋ ಸತ್ಯ ಜನರಿಗೆ ಮನದಟ... ಹಾಗಾಗಿ ಮನ್‌ಮುಲ್ ಉಳಿವಿಗಾಗಿ ಹೋ... ಸಿದ್ಧರಾಗಿದ್ದಾರೆ. ಅದಕ್ಕೋಸ್ಕರ ಅಗತ್ಯ ಮಾಹಿತಿ ... ಸಂಗ್ರಹಿಸಲು ಮಾಹಿತಿ ಹಕ್ಕು ಕಾಯ್ದೆಯಡಿ ಮ... ಕೇಳಿದರೆ 'ನಮ್ಮದು ಸಹಕಾರಿ ಸಂಸ್ಥೆಯಾಗಿದ್ದು ಮ... ಹಕ್ಕು ವ್ಯಾಪ್ತಿಯಡಿ ಬರುವುದಿಲ್ಲ'ವೆ... ಆಡಳಿತಾಧಿಕಾರಿಗಳು ಹಾಗೂ ಡೀಲ್ ಕಂಪನಿ ಸ... ಕೈ ತೊಳೆದುಕೊಳ್ಳುತ್ತಿದ್ದಾರೆ. ಸರ್ಕಾರದಿಂದ ಅನು... ಪಡೆಯುವ ಎಲ್ಲ ಸಹಕಾರಿ ಸಂಘಸಂಸ್ಥೆಗಳು ಮ... ಹಕ್ಕು ಕಾಯ್ದೆಗೆ ಒಳಪಡುತ್ತವೆ ಎನ್ನುವ ಸರ್ಕಾರಿ ಆ... ಬಗ್ಗೆ ಇವರದು ಜಾಣ ಕುರುಡು. ಡೀಲ್ ಕಂಪನಿ ... ವ್ಯವಹಾರ ಕುದುರಿಸಿಕೊಂಡಿರುವ ಆಡಳಿತಾಧಿಕಾರಿ ಮ... ಜನರಿಗೆ ತಪ್ಪು ಮಾಹಿತಿ ನೀಡುತ್ತಾ ಸಾರ್ವಜನ... ಬಕರಾ ಮಾಡುತ್ತಿದ್ದಾನೆ. ಆದರೆ ಹೋರಾಟ ಸಮಿತಿಯ... ಸರ್ಕಾರಿ ಆದೇಶ ಪ್ರತಿ ಸಮೇತ, ಸಕಲಸನ್ನದ್ಧರಾ... ಹೋರಾಟಕ್ಕಿಳಿದಿರುವುದರಿಂದ ಡೀಲ್ ಕಂಪನಿಗೆ ಸನಿಹದಲ್ಲೇ ಅಮರಿಕೊಳ್ಳಲಿದೆ.

ಗುತ್ತಿಗೆಯಲ್ಲೂ ಗೋಲ್‌ಮಾಲ್ ಕಲ್ಯಾಣವೂ ಗೋತಾ!

ಮನ್‌ಮುಲ್‌ನಲ್ಲಿ ಖರೀದಿ ವ್ಯವಹಾ... ಸಮಿತಿಯೊಂದು ರಚನೆಯಾಗಿದೆ. ಡೀಲ್ ಕಂಪನಿ ಸ... ಹಾಗೂ ಆಡಳಿತ ಸಂಸ್ಥೆಯ ಅಧಿಕಾರಿಗಳೇ ಇರು... ಸಮಿತಿ ಯಂತ್ರೋಪಕರಣ ಮತ್ತಿತರ ಖರೀದಿ... ಕಮೀಷನ್ ಹೊಡೆಯುತ್ತಿದೆ. ಕಮೀಷನ್ ಹಣ ಎ... ಸಮನಾಗಿ ಹಂಚಿಕೆಯಾಗುವುದರಿಂದ ಯಾರೂ ... ಗೋಲ್‌ಮಾಲ್ ಪ್ರಶ್ನಿಸುವ ಗೋಜಿಗೆ ಹೋಗಿಲ್ಲ...

ಇದೇರೀತಿ ಬೆಂಗಳೂರಿನ ಕುಂಬಳಗೆ... ಯುಹೆಚ್‌ಟಿ (ultra high treatment) ಗು...


ಮನ್‌ಮುಲ್ ಆರ್‌ಟಿಐಗೆ ಒಳಪಡುತ್ತದೆನ್ನುವ ಸರ್ಕಾರಿ ಆದೇಶ



ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ,

ವಿಷಯ: ಶ್ರೀ ಜಗದೀಶ ಮಡಿವಾಳರ, ವಿಸ್ತರಣಾಧಿಕಾರಿ-3 ರವರನ್ನು ಒಕ್ಕೂಟದ ಸೇವೆಯಿಂದ ವಜಾಗೊಳಿಸುವ ಬಗ್ಗೆ.

ಉಲ್ಲೇಖ: 1) ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಮಂಹಾಒ/...../ನೇಮಕಾತಿ/04/ 2015-16, ದಿನಾಂಕ:11-09-2015.
2) ಉದ್ಯೋಗಿಯ ಕಾರ್ಯವರದಿ ದಿನಾಂಕ:29-09-2015.
3) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು ರವರ ಪತ್ರ ಸಂಖ್ಯೆ KSOU:EB:Coll.Inst:Verification:2016-17, ದಿನಾಂಕ:25-06-2016.
4) ಈ ಕಚೇರಿ ಕಾರಣ ಬಹಿರಂಗ ಪತ್ರ ಸಂಖ್ಯೆ:ಮಂಹಾಒ/ಆಡಳಿತ/129/ 2016-17, ದಿನಾಂಕ:05-07-2016.

ಪ್ರಸ್ತಾವನೆ:

... "The Photo Copy Marks Cards sent by you for verification of Bachelor of Arts bearing Reg.No.1134BA0566 pertaining to Jagadeesh Madivalar does not corroborates with this office records. It is Fabricated and Fake" ...


ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ,

ವಿಷಯ: ಶ್ರೀ ಎಂ.ಅಶೋಕ, ಜೂನಿಯರ್ ಟೆಕ್ನಿಷಿಯನ್ ರವರನ್ನು ಒಕ್ಕೂಟದ ಸೇವೆಯಿಂದ ವಜಾಗೊಳಿಸುವ ಬಗ್ಗೆ.

ಉಲ್ಲೇಖ: 1) ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಮಂಹಾಒ/ಆಡಳಿತ/ನೇಮಕಾತಿ/04/ 2015-16, ದಿನಾಂಕ:11-09-2015.

ಜಗದೀಶ್ ಮತ್ತು ಅಶೋಕ್‌ರನ್ನು ನೌಕರಿಯಿಂದ ವಜಾಗೊಳಿಸಿದ ಆದೇಶ ಪ್ರತಿಗಳು

ಾಲು ಘಟಕದಲ್ಲೂ ಅಧಿಕಾರಿಗಳ ಮತ್ತು ಡೀಲ್ ಕಂಪನಿ ದಸ್ಯರ ಆಟಾಟೋಪ ಮಿತಿಮೀರಿದೆ. ಇಲ್ಲಿ 140ಕ್ಕೂ ಚ್ಚು ಗುತ್ತಿಗೆ ಕಾರ್ಮಿಕರಿದ್ದಾರೆ. ಮಹೇಶ್‌ಗೌಡ ಎಂಬಾತ ನೌಕರರನ್ನು ಸರಬರಾಜು ಮಾಡುವ ಕಾಂಟ್ರ್ಯಾಕ್ಟ್ ಡಿದಿದ್ದಾನೆ. ಈ 140 ಕಾರ್ಮಿಕರಲ್ಲಿ ಪ್ರತಿ ದಿನ 30-40 ಂದಿ ಗೈರುಹಾಜರಾಗುತ್ತಾರೆ. ಆದರೆ ಹಾಜರಾತಿ ಪುಸ್ತಕದಲ್ಲಿ ಲ್ಲರಿಗೂ ಹಾಜರಿ ಇರುತ್ತೆ ಗೈರಾದ ಕಾರ್ಮಿಕರ ಸಂಬಳದ ಾಬ್ತಿನಲ್ಲೇ ಮಹೇಶ್‌ಗೌಡ ಪ್ರತಿ ತಿಂಗಳು ಲಕ್ಷಲಕ್ಷ ಹಣ ೀಬಗಿಳಿಸುತ್ತಾನೆ. ತಮಗೆ ಇಎಸ್‌ಐ ಮತ್ತು ಪಿಎಫ್ ುಟ್ಟುತ್ತಿದ್ದಾರೋ ಇಲ್ಲವೋ ಎಂಬುದು ಕಾರ್ಮಿಕರಿಗೇ ೊತ್ತಿಲ್ಲ. ಇದರಲ್ಲೂ ಪ್ರತಿ ತಿಂಗಳು ಏನಿಲ್ಲವೆಂದರೂ 2 ಕ್ಷ ರೂ. ಕಪ್ಪಕಾಣಿಕೆಯಾಗಿ ಹಂಚಿಹೋಗುತ್ತದೆ. ಇಲ್ಲಿ ೀಲ್ ಕಂಪನಿ ಅದೆಷ್ಟು ಬಲಾಢ್ಯವಾಗಿದೆಯೆಂದರೆ ಯಾರಾದರು ಅಧಿಕಾರಿ ಗೈರುಹಾಜರಾದ ಕಾರ್ಮಿಕರಿಗೆ ಹಾಜರಾತಿ ನೀಡದೇ ಇದ್ದಲ್ಲಿ ಅಂತವರಿಗೆ ತಕ್ಷಣವೇ ರ್ಗಾವಣೆ ಭಾಗ್ಯ ಖಚಿತ. ಹಾಗಾಗಿ ಬಂದವರೆಲ್ಲ ಡೀಲ್ ಂಪನಿಗೆ ಶರಣಾಗುತ್ತಾರೆ. ಗುತ್ತಿಗೆದಾರ ಮಹೇಶ್‌ಗೌಡ ಾಗೂ ಡೀಲ್ ಕಂಪನಿಯ ಸದಸ್ಯರ ನಡುವೆ ಭಾಯಿ-ಾಯಿ ಸಂಬಂಧವಿರುವುದರಿಂದ ಗುಡ್‌ಲೈಫ್ ಘಟಕದ ುತ್ತಿಗೆಯಲ್ಲೂ ಭರ್ಜರಿ ಗೋಲ್‌ಮಾಲ್ ನಡೆಯುತ್ತಿದೆ.


ಹಾಲು ಉತ್ಪಾದಕರ ಮಕ್ಕಳಿಗೆ ವಸತಿಶಾಲೆ ಟ್ಟಿಕೊಡುತ್ತೇವೆ ಎಂದು ಭ್ರಷ್ಟ ಡೀಲ್ ಕಂಪನಿ ಶ್ರೀರಂಗಪಟ್ಟಣದ ಕೆ.ಶೆಟ್ಟಿಹಳ್ಳಿ ಬಳಿಯ ಜಮೀನಿಗೆ 2.18 ಕೋಟಿ ಅಡ್ವಾನ್ಸ್ ಕೊಟ್ಟಿತ್ತು. ಆದರೆ ಆ ಜಮೀನಿನ ುತ್ತಮುತ್ತ ಕಲ್ಲುಗಣಿಗಾರಿಕೆ ನಡೆಯುತ್ತಿದ್ದು, ಅಲ್ಲಿ ಪ್ರತಿ ಂಟೆಗೆ ಹೆಚ್ಚೆಂದರೆ 40-50 ಸಾವಿರ ರೂಗಳಷ್ಟೆ ಇದೆ. ಾಗಿರುವಾಗ ಬರೋಬ್ಬರಿ 2.18 ಕೋಟಿ ರೂಪಾಯಿ, ಅದೂ ಅಡ್ವಾನ್ಸಾಗಿ ಕೊಟ್ಟಿದ್ದಾರೆಂದರೆ ಅಲ್ಲೂ ಭರಪೂರ ಸಮ್ಮಿಶ್ರ ಭೋಜನ' ನಡೆದಿರುವುದು ಖಾತ್ರಿಯಾಗುತ್ತದೆ. ಈ ಬಗ್ಗೆ ಮನ್‌ಮುಲ್ ಉಳಿಸಿ ಹೋರಾಟ ಸಮಿತಿ ಸದಸ್ಯರಾದ ಜವರೇಗೌಡ ಮತ್ತು ಕೃಷ್ಣೇಗೌಡ ವಸತಿಶಾಲೆ ಟ್ಟುವ ಜಮೀನಿನ ಸುತ್ತಮುತ್ತ ವೀಡಿಯೋ ಮಾಡಿಸಿ ಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಅಲ್ಲದೆ ನ್ಯಾಯಾಲಯದ ಮೊರೆ ಹೋಗುವುದಕ್ಕೂ ಮುಂದಾಗಿದ್ದಾರೆ.

ಇತ್ತ ಇಂತಹ ಹೋರಾಟಗಳು ನಡೆಯುತ್ತಿದ್ದರೂ ಡೀಲ್ ಕಂಪನಿ ಕಿಂಚಿತ್ತೂ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. 2015ರ ನೇಮಕಾತಿ ಅವ್ಯವಹಾರ ಈ ಪರಿ ಭಾನ್ಗಡಿ ಸೃಷ್ಟಿಸಿದ್ದರೂ, ಮೂವರು ನೌಕರಿ ಕಳೆದುಕೊಂಡು ಮನೆ ಸೇರುವಂತಾಗಿದ್ದರೂ ಅದರ ರೂವಾರಿಗಳಾದ ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣ ಬೋರೇಗೌಡರ ಗ್ಯಾಂಗ್ 2016ರ ನೇಮಕಾತಿಯಲ್ಲೂ ಸಂತೃಪ್ತಿಯಾಗಿ ಹಣ ಬಾಚುತ್ತಿದೆ. ಈಗಾಗಲೇ ಒಂದು ರೌಂಡ್ ಭರ್ಜರಿಯಾಗಿ ಮಾಯಿಸಿರುವ ಡೀಲ್ ಕಂಪನಿ ಕೆಲವೇ ದಿನಗಳಲ್ಲಿ ನೇಮಕಾತಿ ಮುಗಿಸಲಿದೆ. 2015ರ ನೇಮಕಾತಿಯನ್ನೇ ರದ್ದುಗೊಳಿಸಬೇಕು ಎಂದು ನ್ಯಾಯಾಲಯದಲ್ಲಿ ದೂರು ದಾಖಲಾಗಿರುವ ಸಂದರ್ಭದಲ್ಲೇ ಎಗ್ಗಿಲ್ಲದಂತೆ ಮತ್ತೆ 75 ಹುದ್ದೆಗಳ ಭರ್ತಿ ನೆಪದಲ್ಲಿ ಮುಕ್ಕಲು ಕುಳಿತಿದ್ದಾರೆಂದರೆ ಇವರ ಭಂಡ ಧೈರ್ಯ ಮೆಚ್ಚಲೇಬೇಕು. ಪ್ರಜ್ಞಾವಂತ ಜನರೇ ಇವರಿಗೆ ಬುದ್ಧಿಕಲಿಸಬೇಕಿದೆ.


ಮನ್‌ಮುಲ್‌ನಲ್ಲಿ ಇಷ್ಟೆಲ್ಲಾ ರಾದ್ಧಾಂತಗಳು ಸದ್ದು ಮಾಡುತ್ತಿರೋದನ್ನು ಕಂಡ ಸರ್ಕಾರ, ನಿವೃತ್ತಿ ಅಂಚಿನಲ್ಲಿದ್ದ ಎಂಡಿ ಕೃಷ್ಣೇಗೌಡರನ್ನು ಬೆಂಗಳೂರು ಡೈರಿಯ ಮಾರ್ಕೆಟಿಂಗ್ ವಿಭಾಗಕ್ಕೆ ಎತ್ತಿ ಎಸೆದು ಆ ಜಾಗಕ್ಕೆ ಗುರುಲಿಂಗಯ್ಯ ಎನ್ನುವವರನ್ನು ತಂದು ಕೂರಿಸಿದೆ. 6 ತಿಂಗಳಿಗೆ ನಿವೃತ್ತಿಯಾಗಲಿರುವ ಕೃಷ್ಣೇಗೌಡನಿಗೆ ಅಕ್ರಮ ನೇಮಕಾತಿ ಎಲ್ಲಿ ತನ್ನ ಕುತ್ತಿಗೆಗೆ ಬಿಗಿದುಕೊಳ್ಳುತ್ತೋ ಅನ್ನೋ ಭೀತಿ ಶುರುವಾಗಿದೆ. ಹಾಗೆಯೇ ಮೈಸೂರು ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕಿಯಾಗಿದ್ದ ಆಶಾರನ್ನು ಸರ್ಕಾರ ಜಾಗ ಖಾಲಿ ಮಾಡಿಸಿದೆ. ಹೊಸ ಎಂಡಿಯ ಮುಂದೆ ಬಹುದೊಡ್ಡ ಸವಾಲಿದೆ. ನೇಮಕಾತಿ ಬಕಾಸುರರ ತೆಕ್ಕೆಯಿಂದ ಮನ್‌ಮುಲ್ ಅನ್ನು ಹೊರತೆಗೆಯುವುದು ಮಾತ್ರವಲ್ಲ, ಅವರ ಕೂಪಕ್ಕೆ ತಾನೂ ಬಲಿಯಾಗದಂತೆ ಎಚ್ಚರಿಕೆಯ ಹೆಜ್ಜೆಗಳನ್ನು ಅವರು ಇಡಬೇಕಾಗಿದೆ. ಜೊತೆಗೆ ಈಗಾಗಲೇ ಅಕ್ರಮವಾಗಿ ನೌಕರಿಗೆ ತೂರಿಕೊಂಡಿರುವ ಅನರ್ಹರನ್ನೆಲ್ಲ ಮನೆಗಟ್ಟುವ ಜವಾಬ್ದಾರಿಯೂ ಗುರುಲಿಂಗಯ್ಯನವರ ಮೇಲಿದೆ. ಬಿಂದುಶ್ರೀ ಎಂಬಾಕೆಗೆ ಆಕೆಯ ಅರ್ಹತೆಗಿಂತ ದೊಡ್ಡ ಹುದ್ದೆಯನ್ನು ದಯಪಾಲಿಸಲಾಗಿದೆ. ಇಂತವರ ಬಗ್ಗೆ ಎಂಡಿ ಗುರುಲಿಂಗಯ್ಯ ಪರಿಶೀಲಿಸಬೇಕಿದೆ. ಇನ್ನು ಮನ್‌ಮುಲ್ ಆವರಣದಲ್ಲಿ 2.75 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಹೊರಟಿರುವ ಆಡಳಿತ ಮಂಡಳಿ ಕಚೇರಿ ಸಂಕೀರ್ಣಕ್ಕೆ ಸಿಂಗಲ್ ಟೆಂಡರ್ ಆಗುವಂತೆ ಭ್ರಷ್ಟ ಡೀಲ್ ಕಂಪನಿ ಸೋದಿಕೊಂಡಿದೆ ಎಂಬ ಮಾತು ಕೇಳಿಬರುತ್ತಿದ್ದು ಅಂತಹ ಅನಾಹುತಕ್ಕೆ ಹೊಸ ಎಂಡಿ ಅವಕಾಶ ಕೊಡಬಾರದು. ಸರ್ಕಾರ ಕೂಡ ಇತ್ತ ಗಮನ ಹರಿಸಬೇಕಿದೆ. ಇಲ್ಲವಾದಲ್ಲಿ ಜಿಲ್ಲೆಯ ರೈತರ ಪಾಲಿನ ಕಾಮಧೇನು ಮನ್‌ಮುಲ್ ಶಾಶ್ವತವಾಗಿ ಕಣ್ಮುಚ್ಚುವ ದಿನಗಳು ದೂರವಿಲ್ಲ.

■ ವರದಿಗಾರ

ಕೊಪ್ಪಳ: ವಿದ್ಯಾರ್ಥಿಗಳ ಗೋಳು ಕೇಳೋರಿಲ್ಲ



ಬಸವರಾಜ ರಾಯರೆಡ್ಡಿ



ಶಿವರಾಜ್ ತಂಗಡಗಿ

ಹೈದರಾಬಾದ್ ಕರ್ನಾಟಕವೇ ಅತಿ ಹಿಂದುಳಿದ ಪ್ರದೇಶ. ಇಲ್ಲಿನ ಜನರ ಪಾಡು ಹೇಳತೀರದು. ಶಿಕ್ಷಣ ಬಿಡುಗಡೆಯ ಅಸ್ತ್ರವಾಗಿದ್ದು ಶಿಕ್ಷಣದ ಮೂಲಕವಾದರೂ ಏಳ್ಗೆ ಬಯಸುವುದು ಇಲ್ಲಿನ ಜನರ ಬಯಕೆ. ಆದರೆ ಜನರ ಈ ಹೆಬ್ಬಯಕೆಗೆ ಇಲ್ಲಿನ ರಾಜಕಾರಣಿಗಳು ಮತ್ತು ಸರ್ಕಾರ ದೊಡ್ಡ ಅಡ್ಡಗಾಲಾಗಿದೆ. ದಿನನಿತ್ಯ ಜನರು ಇಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತುಂಬಿಹೋಗಿರುವ ಸಮಸ್ಯೆಗಳ ವಿರುದ್ಧ ಹೋರಾಡಿದರೂ ಸಹ ಇಲ್ಲಿನ ಜನಪ್ರತಿನಿಧಿಗಳಿಗೆ ಮಬ್ಬು ಆವರಿಸಿದೆ.

ಕುಂಭಕರ್ಣ ಇಲಾಖೆ


ಜಿಲ್ಲೆಯ ಪ್ರಾಥಮಿಕ ಶಿಕ್ಷಣದಿಂದ ಆರಂಭಿಸುವುದಾದರೆ, ಇಲ್ಲಿನ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ತುಂಬಿ ತುಳುಕುತ್ತಿದ್ದಾರೆ. ಒಂದುಕಡೆ ಸಾಕಷ್ಟು ಮಕ್ಕಳ ದಾಖಲಾತಿಯಿಲ್ಲದೆ ಸರ್ಕಾರಿ ಶಾಲೆಗಳನ್ನು ಮುಚ್ತೇವಿ ಅಂತ ಸರ್ಕಾರ ಹೇಳಿಕೆ ಕೊಡುತ್ತಿದ್ದರೆ ಇತ್ತ ಕೊಪ್ಪಳದಲ್ಲಿ ಚಿತ್ರಣವೇ ಬೇರೆ. ಬರುವ ಮಕ್ಕಳಿಗೆ ಇಲ್ಲಿ ಕೂರಲೂ ಜಾಗವಿಲ್ಲ, ಮಕ್ಕಳ ಸಂಖ್ಯೆಗನುಗುಣವಾಗಿ ಕೊಠಡಿಗಳ ಸಂಖ್ಯೆಯಾಗಲಿ, ಶಿಕ್ಷಕರ ಸಂಖ್ಯೆಯಾಗಲಿ ಯಾವ ಶಾಲೆಗಳಲ್ಲೂ ಕಂಡುಬರುತ್ತಿಲ್ಲ. 350 ರಿಂದ 400 ಮಕ್ಕಳಿರುವ ಶಾಲೆಗಳಲ್ಲಿಯೂ ಕೇವಲ 3-4 ಜನ ಮಾತ್ರ ಶಿಕ್ಷಕರಿದ್ದಾರೆ. ತಮ್ಮೂರಿನ ಶಾಲೆಗೆ ಹೆಚ್ಚಿನ ಶಿಕ್ಷಕರು ಬೇಕು ಎಂದು ಪೋಷಕರು ಶಾಲೆಗೆ ಬೀಗ ಹಾಕಿ ಪ್ರತಿಭಟನೆ ನಡೆಸುವುದು ಕೊಪ್ಪಳದಲ್ಲಿ ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಆದರೆ ಯಾವೊಬ್ಬ ಜನಪ್ರತಿನಿಧಿಯೂ ಇದರತ್ತ ತಲೆಕೆಡಿಸಿಕೊಳ್ಳುತ್ತಿಲ್ಲ.

ಜನರ ಬಹುದಿನದ ಬೇಡಿಕೆಯಂತೆ ಜಿಲ್ಲೆಯ ಗಂಗಾವತಿಯಿಂದ ರಾಯಚೂರುವರೆಗೆ ರೈಲ್ವೆ ಸಂಪರ್ಕ ಕಲ್ಪಿಸುವ ಕಾಮಗಾರಿ ನಡೆಯುತ್ತಿದೆ. ಈ ರೈಲ್ವೆ ಹಾದಿಯ ಸಮೀಕ್ಷೆಯಂತೆ 2 ಸರ್ಕಾರಿ ಶಾಲೆಗಳು ಇದೇ ಜಾಗದಲ್ಲಿರುವುದರಿಂದ ಆವೆರಡು ಶಾಲೆಗಳನ್ನು ಬೇರೆಡೆಗೆ ವರ್ಗಾಯಿಸಬೇಕು. ಆದರೆ ಗಂಗಾವತಿ ತಾಲ್ಲೂಕಿನ ಬಸವಣ್ಣ ಕ್ಯಾಂಪ್ ಶಾಲೆಯ ಹತ್ತಿರ ರೈಲ್ವೆ ಕಾಮಗಾರಿ ಬಂದಿದ್ದರೂ ಬೇರೆಡೆ ಜಾಗ ಗುರುತಿಸಿ ಕಟ್ಟಡ ಕಟ್ಟಿ ವರ್ಗಾವಣೆ ಮಾಡಲು ಇಲಾಖೆ ಗಮನ ಹರಿಸಿಲ್ಲ. ಸಮೀಕ್ಷೆ ನಡೆದು ಬಹಳ ವರ್ಷಗಳೇ ಆಗಿವೆ. ಆದರೂ ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಲಿ, ಸ್ಥಳೀಯ ಶಾಸಕರಾಗಲಿ ತಮಗೂ ಇದಕ್ಕೂ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಈ ಕುರಿತು ಪೋಷಕರು ಹಲವು ಬಾರಿ ಮನವಿ ಮಾಡಿಕೊಂಡರೂ ಪ್ರಯೋಜನವಾಗಿಲ್ಲ. ಬೇಸತ್ತ ಜನ ಕೊನೆಗೆ ತಾವೇ ಮುಂದಾಗಿ ಶಾಲೆಗೆ ಬೇರೆ ಜಾಗವನ್ನು ಗುರುತಿಸಿ, ಅದು ಮಾಲೀಕರನ್ನು ಜಮೀನು ಕೊಡಲು ಒಪ್ಪಿಸಿದ್ದಾರೆ. ಅಷ್ಟಾದರೂ ಇಲಾಖೆ ತನ್ನ ಕುಂಭಕರ್ಣ ನಿದ್ದೆಯಿಂದ ಎಚ್ಚೆತ್ತಿಲ್ಲ. ಈ ಶಾಲೆಯಲ್ಲಿ ಕಲಿಯುತ್ತಿರುವ ನೂರಾರು ಮಕ್ಕಳ ಭವಿಷ್ಯ ತೂಗುಯ್ಯಾಲೆಯಲ್ಲಿದೆ.


ಮರವೇ ಕಾಲೇಜು, ಬಯಲೇ ಶೌಚಾಲಯ!

ಇನ್ನು ಪದವಿಪೂರ್ವ ಕಾಲೇಜುಗಳದ್ದೂ ಇದೇ ಕತೆ. ಯಾವ ಸರ್ಕಾರಿ ಕಾಲೇಜಿನಲ್ಲೂ 3-4ಕ್ಕಿಂತ ಹೆಚ್ಚಿನ ಉಪನ್ಯಾಸಕರಿಲ್ಲ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮೂರು ವಿಭಾಗಗಳಿದ್ದರೂ ಸಹ ಪ್ರಥಮ ಮತ್ತು ದ್ವಿತೀಯ ಎರಡೂ ತರಗತಿಗೆ ಸೇರಿ ಕೇವಲ 2 ಕೊಠಡಿಗಳಿರುತ್ತವೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ನವಲಿ ಎಂಬ ಊರಿನಲ್ಲಿ ಸರ್ಕಾರಿ ಪಿಯು ಕಾಲೇಜು 8 ವರ್ಷಗಳ ಹಿಂದೆ ಸ್ಥಾಪನೆಯಾಗಿದೆ. ಇಲ್ಲಿ ಹೆಸರಿಗೆ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮೂರೂ ವಿಭಾಗಗಳಿವೆ. ಸುಮಾರು 180 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಆದರೆ ಇರುವ ಕೊಠಡಿಗಳ ಸಂಖ್ಯೆ ಮಾತ್ರ ಕೇವಲ ಎರಡು! ಪ್ರಥಮ ಪಿಯುಸಿಯ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮೂರು ವಿಭಾಗದ ವಿದ್ಯಾರ್ಥಿಗಳು ಒಂದೇ ಕೊಠಡಿಯಲ್ಲಿ ಕೂತು ಕಲಿಯುವ ದೌರ್ಭಾಗ್ಯ ಈ ವಿದ್ಯಾರ್ಥಿಗಳದ್ದು. ಗ್ರಾಮೀಣ ಪ್ರದೇಶದಲ್ಲಿ ಇವತ್ತಿಗೂ ಹೆಣ್ಮಕ್ಕಳಿಗೆ ಶಿಕ್ಷಣವೆಂದರೆ ಎಸ್‌ಎಸ್‌ಎಲ್‌ಸಿವರೆಗೆ ಮಾತ್ರ. ಆದರೆ ಇಲ್ಲಿ ಸುಮಾರು 90 ವಿದ್ಯಾರ್ಥಿನಿಯರು ಈ ಕಾಲೇಜಿಗೆ ಬರುತ್ತಿದ್ದಾರೆ. ಆದರೆ ಈ ಹೆಣ್ಣುಮಕ್ಕಳಿಗೆ ಇಲ್ಲಿ ಒಂದೇ ಒಂದು ಶೌಚಾಲಯವೂ ಇಲ್ಲ. ಇನ್ನು ಕುಡಿಯುವ ನೀರು, ಕಾಂಪೌಂಡ್‌ಗಳಂತೂ ಕೇಳುವುದೇ ಬೇಡ. ಕಲಿಯಲು ಬಂದ ವಯಸ್ಸಿನ ಹೆಣ್ಮಕ್ಕಳಿಗೆ ಶೌಚಾಲಯವಿಲ್ಲವೆಂದರೆ ಹೇಗೆ ಅಂತ ಪ್ರಶ್ನಿಸಿದರೆ 'ನಾವೇನ್ ಮಾಡೋದು ಸ್ವಾಮಿ, ನಮಿಗೇ ಇಲ್ಲಿ ಶೌಚಾಲಯವಿಲ್ಲ' ಅನ್ನೋ ಅಸಹಾಯಕತೆಯನ್ನು ಪ್ರಾಂಶುಪಾಲರು ಹೊರಹಾಕುತ್ತಾರೆ. ಉತ್ತರಿಸಬೇಕಾದ ಶಿಕ್ಷಣ ಇಲಾಖೆ ಒನ್ಸ್ ಎಗೇನ್ ಕುಂಭಕರ್ಣ ನಿದ್ದೆಗೆ ಜಾರಿದೆ.

ಇದು ಕೇವಲ ಒಂದು ಕಾಲೇಜಿನ ಪರಿಸ್ಥಿತಿಯಲ್ಲ, ಹತ್ತಾರು ಕಾಲೇಜುಗಳು ಇದೇ ದುಸ್ಥಿತಿಯಲ್ಲಿವೆ. ಗಂಗಾವತಿಯ 2 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಕೊಠಡಿಗಳ ಕೊರತೆ ಮತ್ತು ಉಪನ್ಯಾಸಕರ ಕೊರತೆ ಎದ್ದು ಕಾಣುತ್ತದೆ. ತರಗತಿಯ ಹೊರಗೆ ಮರದ ನೆರಳಲ್ಲಿ ಪಾಠಪ್ರವಚನಗಳು ನಡೆಯುವುದು ಇಲ್ಲಿನ ಸಾಮಾನ್ಯ ದೃಶ್ಯ. ಇಂತಹ ಸಮಸ್ಯೆಗಳನ್ನು ಬಗೆಹರಿಸಲೆಂದು ಶಾಲಾಮಟ್ಟದಲ್ಲಿ ಎಸ್‌ಡಿಎಂಸಿ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ), ಕಾಲೇಜು ಮಟ್ಟದಲ್ಲಿ ಸಿಡಿಸಿ (ಕಾಲೇಜು ಅಭಿವೃದ್ಧಿ ಸಮಿತಿ) ಗಳೇನೋ ಇವೆ. ಆದರೆ ಹೊಲಸು ರಾಜಕೀಯ ಈ ಸಮಿತಿಗಳನ್ನೂ ಬಿಟ್ಟಿಲ್ಲ. ಈ ಕಾಲೇಜುಗಳ ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ಸ್ಥಳೀಯ ಶಾಸಕರಿರುತ್ತಾರೆ. ಉಳಿದ ಸದಸ್ಯರೆಲ್ಲಾ ಹೆಚ್ಚು ಕಡಿಮೆ ಆ ಶಾಸಕರ ಚೇಲಾಗಳೇ ಆಗಿರುತ್ತಾರೆ. ಅಂತವರಿಗೆ ಈ ಸಮಸ್ಯೆಗಳಿಂದ ಆಗಬೇಕಾದ್ದೇನಿದೆ ಹೇಳಿ.



ನವಲಿ ಸರ್ಕಾರಿ ಪದವಿ ಪೂರ್ವ ಕಾಲೇಜು



ಹಾಸ್ಟೆಲ್ ಸಮಸ್ಯೆ ಬಗೆಹರಿಸಲು ಒತ್ತಾಯಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಖಾಸಗಿ ಲಾಬಿ ಜೋರು

ಜಿಲ್ಲೆಯ ಬಹುತೇಕ ತಾಲ್ಲೂಕುಗಳಲ್ಲಿ ಖಾಸಗಿ ಪದವಿ ಮತ್ತು ಪದವಿಪೂರ್ವ ಕಾಲೇಜುಗಳು ನಗರದ ಕೇಂದ್ರ ಭಾಗದಲ್ಲಿದ್ದರೆ ಸರ್ಕಾರಿ ಕಾಲೇಜುಗಳು ನಗರದಿಂದ 3-4 ಕಿ.ಮೀ ದೂರದಲ್ಲಿವೆ. ಹಾಗಿದ್ದರೂ ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ಗಂಗಾವತಿ ಸರ್ಕಾರಿ ಪದವಿ ಕಾಲೇಜೊಂದರಲ್ಲೇ 4 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಆದರೆ ಪ್ರತಿದಿನ 2 ಸಾವಿರದಷ್ಟು ಮಾತ್ರ ವಿದ್ಯಾರ್ಥಿಗಳು ಕಾಲೇಜಿಗೆ ಬರುತ್ತಾರೆ. ಅನಾನುಕೂಲಗಳಿಂದಾಗಿ ಉಳಿದವರು ಕಾಲೇಜಿನತ್ತ ಮುಖಹಾಕುವುದೇ ಇಲ್ಲ. ಬರುವ ವಿದ್ಯಾರ್ಥಿಗಳಿಗೂ ಸರಿಯಾದ ಕೊಠಡಿಗಳಿಲ್ಲ. ಈ ಕೊರತೆ ನೀಗಿಸುವ ಸಲುವಾಗಿ ಜನಸಂಖ್ಯೆ ಹೆಚ್ಚು ಇರುವಲ್ಲಿ ಹೋಬಳಿಗೊಂದು ಪದವಿ ಕಾಲೇಜು ತೆರೆಯಲು ವಿದ್ಯಾರ್ಥಿಗಳು ಈ ಹಿಂದೆ ಉನ್ನತ ಶಿಕ್ಷಣ ಸಚಿವರಾಗಿದ್ದ ಆರ್.ವಿ ದೇಶಪಾಂಡೆಯವರ ಬಳಿ ಮನವಿ ಮಾಡಿಕೊಂಡಿದ್ದರು. ಸಚಿವರು ಪೂರಕವಾಗಿ ಸ್ಪಂದಿಸಿದ್ದರೂ ಖಾಸಗಿ ಕಾಲೇಜುಗಳ ಲಾಬಿಯಿಂದ ಅದು ನೆನೆಗುದಿಗೆ ಬಿದ್ದಿದೆ. ಪಕ್ಕದ ಜಿಲ್ಲೆಯ ಸಿಂಧನೂರು ತಾಲ್ಲೂಕು ಕೇಂದ್ರವೊಂದರಲ್ಲೇ ಕೇವಲ 2 ಸರ್ಕಾರಿ ಪದವಿಪೂರ್ವ ಮತ್ತು 2 ಸರ್ಕಾರಿ ಪದವಿ ಕಾಲೇಜುಗಳಿದ್ದರೆ ಅದಕ್ಕೆ ಪ್ರತಿಯಾಗಿ 35 ಖಾಸಗಿ ಪದವಿ ಪೂರ್ವ ಮತ್ತು 15 ಖಾಸಗಿ ಪದವಿ ಕಾಲೇಜುಗಳು ತಲೆಯೆತ್ತಿ ಶಿಕ್ಷಣ ವ್ಯಾಪಾರೀಕರಣವನ್ನು ಅಣಕಿಸುತ್ತಿವೆ.

ಇನ್ನು ಹೋಬಳಿ ಕೇಂದ್ರದಲ್ಲಿರುವ ಕೆಲವು ಸರ್ಕಾರಿ ಪದವಿ ಕಾಲೇಜುಗಳ ಸಹ ಊರಿನಿಂದ ದೂರದಲ್ಲಿವೆ. ಅಗತ್ಯ ಪ್ರಾಧ್ಯಾಪಕರಿಲ್ಲದ ಕಾರಣ ಆ ಕಾಲೇಜುಗಳಲ್ಲಿ ದಾಖಲಾತಿ ನಿರಂತರವಾಗಿ ಕುಸಿಯುತ್ತಿದೆ. ತಾಲ್ಲೂಕು ಕೇಂದ್ರದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ದಾಖಲಾತಿ ಮಿತಿಮೀರುವ ಪರಿಸ್ಥಿತಿ ಬಂದೊದಗಿದೆ. ಹಲವು ಸರ್ಕಾರಿ ಕಾಲೇಜುಗಳಲ್ಲಿ ಶೌಚಾಲಯಗಳಿಲ್ಲ, ಇದ್ದರೂ ಸಮರ್ಪಕ ನೀರಿನ ಸೌಲಭ್ಯವಿರುವುದಿಲ್ಲ, ಗ್ರಂಥಾಲಯ, ಸಭಾಂಗಣದ ಮಾತಂತೂ ದೂರ. ಅತ್ಯಗತ್ಯ ಲ್ಯಾಬ್‌ಗಳು ಸಹ ಇಲ್ಲ, ಈ ಕಾಲೇಜುಗಳಲ್ಲಿ ಕಾಯಂ ಉಪನ್ಯಾಸಕರಿಗಿಂತ ಗುತ್ತಿಗೆ ಉಪನ್ಯಾಸಕರೆ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಹಾಗಾಗಿ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷಿಸುವುದೇ ದುಬಾರಿ ಬಯಕೆ. ಜಿಲ್ಲೆಯ ಸರ್ಕಾರಿ ಹಾಸ್ಟೆಲ್‌ಗಳ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಸಮರ್ಪಕ ಶೌಚಾಲಯ ಮತ್ತು ಶುದ್ಧ ಕುಡಿಯುವ ನೀರಿಗಾಗಿ, ಗುಣಮಟ್ಟದ ಆಹಾರಕ್ಕಾಗಿ, ಗ್ರಂಥಾಲಯಕ್ಕಾಗಿ ವಿದ್ಯಾರ್ಥಿಗಳು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಮುಂದೆ ಪ್ರತಿಭಟನೆ ನಡೆಸುತ್ತಿದ್ದಾರೆ.

ಯಾರು ಕಾರಣ?

ಇದಕ್ಕೆಲ್ಲವೂ ಒಂದು ಕಡೆ ಸರ್ಕಾರದ ನೀತಿಗಳು ಕಾರಣವಾದರೆ ಮತ್ತೊಂದು ಕಡೆ ಸ್ಥಳೀಯ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನೇರ ಹೊಣೆ. ಸಮರ್ಪಕ ಉಪನ್ಯಾಸಕರಿಗಾಗಿ ನವಲಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಒಂದು ವಾರಗಳ ಕಾಲ ಕಾಲೇಜು ಬಹಿಷ್ಕರಿಸಿ ವಿದ್ಯಾರ್ಥಿಗಳು ಹೋರಾಟ ಮಾಡಿದ ಸಂದರ್ಭದಲ್ಲಿ ಸ್ಥಳಕ್ಕಾಗಮಿಸಿದ್ದ ಉಪನಿರ್ದೇಶಕ ಶಿವಮೂರ್ತಿರವರು ಜುಲೈ 20 ರೊಳಗೆ ಎಲ್ಲಾ ಸಮಸ್ಯೆ ಬಗೆಹರಿಸುವುದಾಗಿ ಮಾತುಕೊಟ್ಟಿದ್ದರು. ಈಗ ಮಾತೂ ಇಲ್ಲ, ಆಸಾಮಿಯೂ ಪತ್ತೆಯಿಲ್ಲ. ವಿದ್ಯಾರ್ಥಿಗಳೇ ಫೋನ್ ಮಾಡಿದರೆ ಪ್ರತಿಕ್ರಿಯಿಸುತ್ತಿಲ್ಲ. ಇನ್ನು ಕನಕಗಿರಿ ಕ್ಷೇತ್ರದ ಶಾಸಕ ಶಿವರಾಜ್ ತಂಗಡಗಿ ನವಲಿ ಕಾಲೇಜಿನ ವಿಷಯಕ್ಕಾಗಲಿ, ಬಸವಣ್ಣ ಕ್ಯಾಂಪ್ ಶಾಲೆ ಹೋಗುತ್ತಿರುವ ವಿಷಯಕ್ಕಾಗಲಿ ಒಂದೂ ಪ್ರತಿಕ್ರಿಯೆ ನೀಡುತ್ತಿಲ್ಲ. ಬದಲಿಗೆ ತಮ್ಮ ಚೇಲಾಗಳ ಮೂಲಕ ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲೆ ಬೆದರಿಕೆ ಹಾಕಿಸುತ್ತಿದ್ದಾರೆ. ಗಂಗಾವತಿ ಶಾಸಕ ಇಕ್ಬಾಲ್ ಅನ್ಸಾರಿಯಂತೂ ತಾನು ಯಾವ ಪಕ್ಷದಲ್ಲಿದ್ದರೆ ಲಾಭ ಎಂದು ಯೋಚಿಸುತ್ತಾ ಪಕ್ಷಾಂತರಿ ಪರ್ವದ ಉಮೇದಿನಲ್ಲಿದ್ದಾರೆ. ಇದೆಲ್ಲದರ ಪರಿಣಾಮ ಅನುಭವಿಸುತ್ತಿರುವುದು ವಿದ್ಯಾರ್ಥಿಗಳು. 2015-16 ನೇ ಸಾಲಿನ ಪಿ.ಯು.ಸಿ ಕ್ಷೀಣ ಫಲಿತಾಂಶವೇ ಇದಕ್ಕೆ ಸಾಕ್ಷಿ.

ಬಡತನ ಅತಿ ಹೆಚ್ಚಾಗಿರುವ ಮತ್ತು ಆ ಕಾರಣಗಳಿಗಾಗಿಯೇ ವಲಸೆಯೂ ಸಹ ಹೆಚ್ಚಾಗಿರುವ ಈ ಜಿಲ್ಲೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಅತಿ ತುರ್ತಾಗಿ ಸ್ಪಂದಿಸಬೇಕಿದೆ. ಹೈದರಾಬಾದ್ ಕರ್ನಾಟಕಕ್ಕೆ 371/ಜೆ ಅನ್ವಯ ಭರಪೂರ ಅನುದಾನ ಬಿಡುಗಡೆಯಾಗುತ್ತಿದೆ ಎಂದು ಸುದ್ದಿಗಳು ಪತ್ರಿಕೆಗಳ ಮೇಲೆ ರಾರಾಜಿಸುತ್ತಿದ್ದರೂ ಅಧಿಕಾರಿಗಳ ಸೋಗಲಾಡಿತನ ಮತ್ತು ಜನಪ್ರತಿನಿಧಿಗಳ ಭ್ರಷ್ಟತೆಯಿಂದಾಗಿ ಜನರಿಗೆ ಉಪಯೋಗಕ್ಕೆ ಬರುತ್ತಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಬಿಗೆ ಬಲಿಯಾದ ಇಲಾಖೆಯ ಅಧಿಕಾರಿಗಳಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ. ಬಹುಸಂಖ್ಯಾತ ಜನರನ್ನು ಶಿಕ್ಷಣದಿಂದ ವಂಚಿತರಾಗಿಸುವ ಅಧಿಕಾರಶಾಹಿಗಳ ಈ ಹುನ್ನಾರಕ್ಕೆ ಜನರೇ ಉತ್ತರ ಕೊಡಬೇಕಿದೆ. ಶಿಕ್ಷಣ ಸಮಸ್ಯೆಗಳನ್ನು ತುರ್ತಾಗಿ ಬಗೆಹರಿಸದಿದ್ದಲ್ಲಿ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತೇವೆಂದು ದೃಢವಾಗಿ ನಿಂತಲ್ಲಿ ಮಾತ್ರ ದಪ್ಪಚರ್ಮದ ರಾಜಕಾರಣಿಗಳು ಎಚ್ಚೆತ್ತುಕೊಳ್ಳುತ್ತಾರೆ.

ಇದೆಲ್ಲದರತ್ತ ನೂತನ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಗಮನ ಹರಿಸುವರೇ?

■ ಮುತ್ತುರಾಜು

ಸಾವನ್ನು ಸಂಭ್ರಮಿಸುವ ವಿಕೃತರು

ಒಬ್ಬ ತಂದೆಯ ಕಣ್ಣೀರು!





ಬೆಲ್ಜಿಯಂನ ಬ್ರಸೇಲ್ಸ್‌ನಿಂದ ಕಳೇಬರವನ್ನು ಹೊತ್ತು ತಂದಿದ್ದ ವಿಶೇಷ ವಿಮಾನದಲ್ಲಿ ಮತ್ತೆಂದೂ ಏಳಲಾರೆನೆಂಬ ಹಠಕ್ಕೆ ಬಿದ್ದಂತೆ ರಾಕೇಶ್ ನಿಶ್ಚಲನಾಗಿದ್ದ ತಂದೆ ಸಿದ್ದರಾಮಯ್ಯ ತಾಯಿ ಪಾರ್ವತಿ, ತಮ್ಮ ಯತೀಂದ್ರ ಮತ್ತು ರಾಕೇಶ್ ಧರ್ಮಪತ್ನಿ ಸ್ಮಿತಾ ಸೇರಿಕೊಂಡು ಬ್ರಸೇಲ್ಸ್‌ನಿಂದಲೇ ನೇರವಾಗಿ ದೇವನಹಳ್ಳಿ ಏರ್‌ಪೋರ್ಟ್‌ಗೆ ರಾಕೇಶ್‌ನ ಕಳೇಬರವನ್ನು ಹೊತ್ತು ತಂದಿದ್ದರು. ತಪಾಸಣಾ ವಿಧಿಗಳನ್ನೆಲ್ಲ ಮುಗಿಸಿದ್ದೇ ಮೈಸೂರಿಗೆ ಹೋಗುವ ಮತ್ತೊಂದು ವಿಮಾನಕ್ಕೆಂದು ಕಳೇಬರವನ್ನು ದೇವನಹಳ್ಳಿ ಏರ್‌ಪೋರ್ಟ್‌ನ ಪಡಸಾಲೆಗೆ ತರಲಾಯಿತು. ಅಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಆದ ಸಂಪುಟದ ಬಹುತೇಕ ಮಂತ್ರಿಗಳು, ಅನೇಕ ಶಾಸಕರೆಲ್ಲರ ಎದುರೇ ಸಿದ್ದು ಬಿಕ್ಕಿಬಿಕ್ಕಿ ಅಳಲಾರಂಭಿಸಿದರು!

ಬಹುಶಃ ಸಿದ್ದು ಈ ರೀತಿ ಅತ್ತಿದ್ದನ್ನು ಯಾರೊಬ್ಬರೂ ಹಿಂದೆಯಾವತ್ತಿಗೂ ನೋಡೇ ಇರಲಿಕ್ಕಿಲ್ಲ, ಕೇವಲ ಅತ್ತಿದ್ದಷ್ಟೇ ಅಲ್ಲ ಮಗನ ಕಳೇಬರವನ್ನು ಅಲ್ಲಿ ನೆರೆದವರೆಲ್ಲರಿಗೂ ಕೈಮಾಡಿ ತೋರಿಸುತ್ತಿದ್ದಂತೆ ಸಿದ್ದು ತೋರಿಸಿ ತೋರಿಸಿ ರೋದಿಸುತ್ತಲೇ ಇದ್ದರು.

ಮುಖ್ಯಮಂತ್ರಿಯಾದರೇನಂತೆ, ಜನನಾಯಕನಾದರೇನಂತೆ, ಅಧಿಕಾರಸ್ಥನಾಗಿದ್ದರೇನಂತೆ; ಮಗನ ಸಾವಿನ ಮುಂದೆ ಅಡಗಿದ್ದ ತಂದೆ ಎದ್ದು ನಿಲ್ಲಲೇಬೇಕಲ್ಲ!

ಯಾರೆಷ್ಟೇ ಸಂತೈಸಿದರೂ, ಸಮಾಧಾನ ಹೇಳಿದರೂ ಮುದ್ದಿನ ಮಗನನ್ನು ತಂದುಕೊಡುವುದುಂಟೆ?

ಬಿಕ್ಕಳಿಸುತ್ತಲೇ ಭಾರವಾದ ಹೆಜ್ಜೆಗಳನ್ನಿಡುತ್ತ ಮೈಸೂರಿಗೆ ಅಣಿಯಾಗಿದ್ದ ಮತ್ತೊಂದು ವಿಮಾನದತ್ತ ಸಿದ್ದು ಹತಾಶೆಯಿಂದ ಚಲಿಸುತ್ತಿದ್ದರೆ, ಇತ್ತ ಕಳೇಬರವನ್ನು ಮತ್ತೊಂದು ವಿಮಾನಕ್ಕೆ ಹಾಕಿಕೊಂಡು ಪತ್ನಿ ಪಾರ್ವತಿ, ಮಗ ಯತೀಂದ್ರ ಮತ್ತು ಸೊಸೆ ಕಣ್ಮರೆಯಾಗುವವರೆಗೂ ಸಿದ್ದು ಅಳು ನಿಂತಿರಲಿಲ್ಲ. ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಾಹನವೊಂದಕ್ಕೆ ಮಗನ ಕಳೇಬರವನ್ನು ಹಾಕಿಕೊಂಡು ತಾವೇ ಅದರ ಮುಂದೆ ನಿಂತರು. ದಸರಾ ವಸ್ತು ಪ್ರದರ್ಶನ ಮೈದಾನಕ್ಕೆ ತರುವ ಮಾರ್ಗದುದ್ದಕ್ಕೂ ಜನ ಹೂವುಗಳನ್ನು ತೂರುತ್ತಿದ್ದರೆ ದುಃಖ ಅದುಮಿಡಲಾಗದೆ ಸಿದ್ದು ಬಿಕ್ಕಳಿಸುತ್ತಲೇ ಇದ್ದರು.

ಶೋಕಸಾಗರದಲ್ಲಿ...

ದಸರಾ ಮೈದಾನದಲ್ಲಿ ಏನಿಲ್ಲವೆಂದರೂ ಐವತ್ತು ಸಾವಿರಕ್ಕೂ ಮೀರಿದ ಶೋಕಸಾಗರ. ಅದರ ಮಧ್ಯದ ವೇದಿಕೆಗೆ ಕಳೇಬರವನ್ನು ತಂದಿಟ್ಟು ಹಾಕಿದ್ದ ಶಾಮಿಯಾನದ ಪಕ್ಕ ಬಂದು ನಿಂತ ಸಿದ್ದು ಕಣ್ಣೀರಿನ್ನೂ ನಿಂತಿರಲಿಲ್ಲ. ರಾಜ್ಯಪಾಲ ವಜುಭಾಯಿ ವಾಲಾ, ಖರ್ಗೆ, ಕೇಂದ್ರ ಮಂತ್ರಿ ಸದಾನಂದ ಗೌಡ, ಜೆಡಿಎಸ್ ನಾಯಕ ಕುಮಾರಸ್ವಾಮಿ, ರಾಜ್ಯ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪ, ಈಶ್ವರಪ್ಪ, ಡೀಕೆ, ಹೀಗೆ ಅಂತಿಮ ನಮನ ಸಲ್ಲಿಸಿದ ಪ್ರತಿಯೊಬ್ಬರೂ ಬಂದು ಏನೇ ಸಮಾಧಾನಿಸಿ ಸಂತೈಸಿದರೂ ಕಣ್ಣೀರು ಇಂಗಲೇ ಇಲ್ಲ, ಮಧ್ಯಾಹ್ನದ ಹೊತ್ತಿಗೆ ದಸರಾ ಮೈದಾನದಿಂದ ಹೆಗ್ಗಡದೇವನಕೋಟೆ ರಸ್ತೆಯ ಟಿ. ಕಾಟೂರಿನ ಫಾರ್ಮ್‌ಹೌಸಿಗೆ ಕಳೇಬರವನ್ನೊಯ್ಯುವಾಗಲೂ ಅಷ್ಟೇ, ತಾವೇ ತೆರೆದ ವಾಹನದ ಮೇಲೇರಿ ನಿಂತಿದ್ದರು ಸಿದ್ದು. ಅಲ್ಲೂ ಅದೇ ಕಣ್ಣೀರು. ಫಾರ್ಮ್ ಹೌಸ್‌ನಲ್ಲಿ ನಡೆದ ಅಂತ್ಯಕ್ರಿಯೆಯಲ್ಲೂ ಕಣ್ಣೀರು ನಿಂತಿರಲಿಲ್ಲ. ಅದು ರಾಕೇಶ್ ಪ್ರೀತಿಯಿಟ್ಟು ರೂಪಿಸಿದ್ದ ಫಾರ್ಮ್‌ಹೌಸ್. ಅಲ್ಲೀಗ ಚಿರನಿದ್ರೆಯಲ್ಲಿ ಮಲಗಿದ್ದಾನೆ ಅಭಿಮಾನಿಗಳ ಪ್ರೀತಿಯ ರಾಕೀ ಅಣ್ಣಾ!

ಬಹುಶಃ ಬೇರೆ ಯಾರೇ ರಾಜಕಾರಣಿಯೊಬ್ಬರ ಮಗನ ಅಂತ್ಯಸಂಸ್ಕಾರಕ್ಕೆ ಈ ಪಾಟಿ ಜನಸಾಗರ ಸೇರಿರಲಿಕ್ಕಿಲ್ಲ, ಉತ್ತರ ಕರ್ನಾಟಕದ ಅನೇಕ ಊರುಗಳಿಂದ ವಿಶೇಷ ವಾಹನಗಳಲ್ಲಿ ಬುತ್ತಿ ಕಟ್ಟಿಕೊಂಡು ಬಂದಿದ್ದ ರೈತಾಪಿಗಳೇನು, ಬೆಂಗಳೂರಿನಿಂದ ಅಸಂಖ್ಯಾತ ಕಾರುಗಳಲ್ಲಿ ಧಾವಿಸಿದ್ದ ಗೆಳೆಯರೇನು, ರಾಜ್ಯದ ಮೂಲೆಮೂಲೆಗಳಿಂದಲೂ ಮೈಸೂರಿಗೆ ಬಂದಿದ್ದ ರಾಜಕಾರಣಿಗಳೇನು?

ಕೇವಲ ಮುಖ್ಯಮಂತ್ರಿಯ ಮಗನೆಂಬ ಒಂದೇ ಕಾರಣಕ್ಕೆ ಆತ ಬದುಕಿದ್ದಾಗ ಜೊತೆ ಸೇರುವುದುಂಟು. ಆದರೆ ಸಾವಿಗೆಂದು ಬಂದವರಲ್ಲಿ ಯಾವ ನಿರೀಕ್ಷೆಯಿದ್ದೀತು? ಅದು ರಾಕೇಶ್‌ನ ಅಸಲೀ ವ್ಯಕ್ತಿತ್ವ. ತಮ್ಮ ಯತೀಂದ್ರನಂತೆ ರಾಕೇಶ್ ಪುಸ್ತಕದ ಹುಳುವಲ್ಲ. ಕಷ್ಟಪಟ್ಟೇ ಎಸ್ಸೆಲ್ಸಿ ಮುಗಿಸಿದನಾದರೂ ಅನಂತರ ಬೆಂಗಳೂರು ರಾಜಾಜಿನಗರದ ಕೆಎಲ್‌ಇ ಕಾಲೇಜಿಗೆ ಸೇರಿಕೊಂಡಿದ್ದ. ಕೆಎಲ್‌ಇ ಕಾಲೇಜೆಂದರೆ ಸುಮ್ಮನೇನಾ? ರಾಜನ ಮಗನಾದರೂ ಅಷ್ಟೇ, ರಾಜಕಾರಣಿಯ ಮಗನಾದರೂ ಅಷ್ಟೇ. ಪಡ್ಡೆ ವಯಸ್ಸೆಂದರೆ ಏನೇನು ದುಸ್ಸಾಹಸದ ಮನಸ್ಥಿತಿಯೋ, ಆದರಿಂದ ರಾಕೇಶ್ ಮಾತ್ರವೇ ಹೇಗೆ ಹೊರತಾಗಲು ಸಾಧ್ಯ?

ಪಡ್ಡೆಗಳ ಹಿಂಡು

ಆ ಹೊತ್ತಿಗೆ ಕೆಎಲ್‌ಇ ಪಕ್ಕದ ಪ್ರಕಾಶ್‌ನಗರದಲ್ಲಿ ಹಾವಳಿಯಿಡುತ್ತಿದ್ದವನು ತಮಿಳು ರೌಡಿ ಟಿಪ್ಪು. ದಿನಬೆಳಗಾದರೆ ಸಾಕು ಹಿಂಡುಗಟ್ಟಲೆ ಹುಡುಗರನ್ನು ಕಟ್ಟಿಕೊಂಡು ಕೆಎಲ್‌ಇ ಕಾಲೇಜ್ ಕ್ಯಾಂಪಸ್ಸಿಗೆ ಲಗ್ಗೆಯಿಡುತ್ತಿದ್ದ ಟಿಪ್ಪು ಅಲ್ಲಿ ಸಂಧಿಸುತ್ತಿದ್ದದ್ದು ರಾಕೇಶ್‌ನನ್ನು. ಆತ ರೌಡಿಯೆಂಬುದು ಗೊತ್ತಿತ್ತೋ ಇಲ್ಲವೋ, ಟಿಪ್ಪು ಪಟಾಲಮ್ಮನ್ನು ಕಂಡಿದ್ದೇ ರಾಕೇಶ್ ಕ್ಯಾಂಟೀನಿಗೆ ಕರೆದೊಯ್ಯುತ್ತಿದ್ದ. ಅಣ್ಣಾ ನೀವೇ ನಮಗೆಲ್ಲಾ ನಾಯಕರು, ನಾವೆಲ್ಲ ನಿಮ್ಮ ಅಪ್ಪಾಜಿಯ ಫ್ಯಾನ್ಸು... ಎಂದು ಟಿಪ್ಪು ಗ್ಯಾಂಗ್ ಭೋಪರಾಕ್ ಹಾಕುತ್ತಿದ್ದರೆ ಅದನ್ನು ರಾಕೇಶ್ ನಂಬಿಬಿಟ್ಟ. ಬರುಬರುತ್ತ ಅದು ಪಾರ್ಟಿಯ ಮಟ್ಟಕ್ಕೇರಿತು. ಟಿಪ್ಪು ಮಾತ್ರವೇ ಅಲ್ಲ, ಪಕ್ಕದ ಆರ್‌ಜಿಐ ಕಾಲೋನಿಯ ಹುಡುಗರು, ಶಿವನಹಳ್ಳಿ, ಬಸವೇಶ್ವರನಗರದ ಕೆಲ ಪಡ್ಡೆಗಳು 'ರಾಕೀ ಅಣ್ಣ'ನ ಅಭಿಮಾನಿಗಳಾದರು.

ಆಗ ಸಿದ್ದು ಪಟೇಲ್ ಸಂಪುಟದಲ್ಲಿ ಹಣಕಾಸು ಮಂತ್ರಿ. ಶಂಕರಮಠದ ಪಕ್ಕದ ಬಸವೇಶ್ವರ ನಗರದ ಹಳೇ ಸಬ್ ರಿಜಿಸ್ಟ್ರಾರ್ ಕಚೇರಿ ಎದುರು ಬಂಗಲೆಯೊಂದನ್ನು ಬಾಡಿಗೆ ಪಡೆದು ವಾಸಿಸುತ್ತಿದ್ದ ಸಿದ್ದು ಪಾಲಿಗೆ ದೊಡ್ಡ ತಲೆನೋವೆಂದ[...] ಮಗನೇ. ಒಂದೆಡೆ ಅಧಿಕಾರ, ರಾಜಕಾರಣ ಮತ್ತು ಇಲಾಖ[...] ಸುಧಾರಣೆಯ ತಲೆಬಿಸಿಯಾದರೆ ಇತ್ತ ಮನೆಯಲ್ಲಿ ಎ[...] ಮಗ ದಾರಿ ತಪ್ಪುತ್ತಾನೆಂದು ಭಯ.

ಎಲ್ಲ ಮಕ್ಕಳೂ ಆ ವಯಸ್ಸಲ್ಲಿ ಮಾಡುವುದನ್ನೆ[...] ರಾಕೇಶ್ ಮಾಡುತ್ತಿದ್ದನಾದರೂ ಸಿದ್ದು ಮಾತ್ರ ಎಲ್ಲಿ ತನ[...] ಕೆಟ್ಟ ಹೆಸರು ತರುತ್ತಾನೋ, ಏನೆಲ್ಲ ಅನಾಹು[...] ಮಾಡಿಕೊಂಡಾನೋ ಎಂದು ಆತಂಕಕ್ಕೆ ಬೀಳುತ್ತಿದ್ದರು.

ಸಿನಿಮಾ ಕನಸು

ಆ ಹೊತ್ತಿಗೆ ರಾಕೇಶ್ ಬೆನ್ನಿಗೆ ಬಿದ್ದವನು ಜನತಾದಳ[...] ಲಂಬಾಣಿ ಬ್ರಾಂಡಿನಂತಿದ್ದ ಬಿ.ಟಿ. ಲಲಿತಾನಾಯಕ್[...] ಉಂಡಾಡಿ ಮಗ ಓಂಪ್ರಕಾಶ್. 'ಅಣ್ಣಾ... ನೀನೂ ಕೂ[...] ಒಂದು ಆ್ಯಂಗಲ್‌ನಿಂದ ರಜನಿಕಾಂತ್ ಥರಾನೇ ಕಾಣ್ತೀಯ[...] ನಿಂದೂ ರಜನಿಕಾಂತ್‌ದು ಒಂದೇ ಕಲರ್[...] ಎಂತೆಂಥವರೋ ಹೀರೋ ಆಗ್ತಾರಂತೆ. ನೀನ್ಯಾ[...] ಆಗಬಾರದು' ಎಂದಿದ್ದೇ ತಲೆ ತಿಕ್ಕಿಬಿಟ್ಟ. ಹೇಗೂ ಸಿದ್ದು ಮಂತ್ರಿಯಾಗಿದ್ದರಲ್ಲ ಅಷ್ಟಿಷ್ಟು ಕಾಸು ಗೆಬರಬಹುದೆಂಬುದು ಓಂಪ್ರಕಾಶ್‌ನ ಉದ್ದೇಶವಾಗಿತ್ತು. ಆತ ಅಂಟಿ ಹಾಕಿದ[...] ಸುಬ್ರಹ್ಮಣ್ಯ ಎಂಬ ಮತ್ತೊಬ್ಬ ತಿರುಪತಿ ಗಿರಾಕಿಯನ್ನು[...] ನಾವೇ ದುಡ್ಡು ಹಾಕಿ ಸಿನಿಮಾ ಮಾಡ್ತೀವಿ, ಸೂಪರ್[...] ಹಿಟ್ಟಾಗುತ್ತೆ ಎಂದು ಸುಬ್ರಹ್ಮಣ್ಯ ರಾಕೇಶ್‌ನನ್ನು ಅಟ್ಟಕ್ಕೇರಿಸಿದ. ಚಿತ್ರಕ್ಕೆ 'ನನಗೆ ನೀನು ನಿನಗೆ ನಾನು' ಎಂಬ ಹೆಸರನ್ನೂ ಕೊಟ್ಟ. ತನ್ನ ಪತ್ನಿ ಅನಿತಾಳನ್ನೇ ಡೈರೆಕ್ಟರ್ ಎಂದು ಘೋಷಿಸಿಬಿಟ್ಟ.

2003ರ ಆಗಸ್ಟ್ ತಿಂಗಳಲ್ಲಿ ಶ್ರೀರಾಂಪುರದ ಕರುಮಾರಿಯಮ್ಮ ದೇವಸ್ಥಾನದಲ್ಲಿ ಅದ್ದೂರಿಯ[...] ಮುಹೂರ್ತವಿತ್ತು; ಮಗ ಸಿನಿಮಾ ಹೀರೋ ಆಗುತ್ತಾನೆಂ[...] ಆಸೆಯಿಂದಲೇ ಸಿದ್ದು ಮುಹೂರ್ತಕ್ಕೆ ಬಂದಿದ್ದರು. ಸಿದ್ದು ಮುಹೂರ್ತಕ್ಕೆ ಬಂದದ್ದೇ ದೊಡ್ಡ ಸುದ್ದಿಯಾಯಿತು. ಮ[...] ನಟನಾದನಲ್ಲ ಎಂಬ ಸಿದ್ದು ಸಂತೋಷ ಕೇವಲ ನೀ[...] ಮೇಲಿನ ಗುಳ್ಳೆಯಾಗಿತ್ತೆಂಬುದು ಅವರಿಗೆಲ್ಲಿ ಗೊತ್ತಿತ್ತು!

ಇದಾಗಿ ತಿಂಗಳಿಗೇ 'ನಿನಗೆ ನಾನು ನನಗೆ ನೀನು' ಚಿತ್ರದ ಆಡಿಯೋ ರಿಲೀಸ್ ಕೂಡ ಅದ್ದೂರಿಯಾಗಿ ನಡೆಯಿತು. ಆದರೆ ಹಣಕಾಸಿನ ಕೊರತೆಯಿಂದ ಶೂಟಿಂಗ್ ಅರ್ಧಕ್ಕೆ ನಿಲ್ಲಿಸಿದ ಐನಾತಿ ಸುಬ್ರಹ್ಮಣ್ಯ, ಪತ್ನಿ ಕಂ ಡೈರೆಕ್ಟರ್ ಅನಿತಾಳ ಜೊತೆ ನೇರವಾಗಿ ಮಂತ್ರಿ ಛೇಂಬರಿಗೆ ದಾಳಿಯಿಟ್ಟು ಸಿನಿಮಾ ಮುಗಿಯಬೇಕು ಅಂದ್ರೆ ಕನಿಷ್ಠ ಒಂದು ಕೋಟಿಯಾದರೂ ಬೇಕೇಬೇಕು ಎಂದಿದ್ದ.

ಆಕ್ಸಿಡೆಂಟ್

ಸಿದ್ದು ಇಂಥಾದ್ದರಲ್ಲಿ ಹುಷಾರು. 'ಅಲ್ರೀ ಸಿನಿಮಾ ಮಾಡ್ತೀವಿ ಅಂತ ಬಂದೋರು ನೀವು. ನಾನೇನು ನಿಮ್ಮ ಸಿನಿಮಾ ಮಾಡಿ ಅಂದಿದ್ನಾ? ನಾನೆಲ್ಲಿಂದ ದುಡ್ಡು ತಂದುಕೊಡಲಿ? ನನ್ನ ದುಡ್ಡಲ್ಲಿ ನನ್ನ ಮಗನ್ನ ಹೀರೋ ಮಾಡಲು ನೀವೇ ಬೇಕಾ? ಅಂಥಾ ಯಾವ ಶೋಕಿಯೂ ನನಗಿಲ್ಲ...' ಎಂದಿದ್ದೇ ಡೈರೆಕ್ಟರ್ ಜೋಡಿಯನ್ನ ಉಗಿದಟ್ಟಿದ್ದರು. ಅಲ್ಲಿಗೆ 'ನನಗೆ ನೀನು ನಿನಗೆ ನಾನು' ಡಬ್ಬಾ ಸೇರಿದ್ದು ಮತ್ತೆಂದೂ ಹೊರಬರಲೇ ಇಲ್ಲ. ಇದ[...] ಹತಾಶೆಗೆ ಬಿದ್ದ ರಾಕೇಶ್ ಒಂದಷ್ಟು ದಿನ ಏನೇನೊ[...] ಹರಸಾಹಸ ಮಾಡಿದ್ದನಾದರೂ ಎಲ್ಲೂ ದುಡ್ಡು ಹುಟ್ಟಲಿ[...] ಅದು 2003 ನವೆಂಬರ್ ತಿಂಗಳು. ಗೆಳೆಯರ ಜೊ[...] ತಮಿಳುನಾಡಿನಿಂದ ಬೆಂಗಳೂರಿಗೆ ಬರುವಾಗ ಅದೇನ[...] ಯಡವಟ್ಟಾಯಿತೋ ಅಡ್ಡಬಂದ ಸ್ಕೂಟರ್ ಅನ್ನು ತಪ್ಪಿಸಹೋಗಿ ರಾಕೇಶ್ ಓಡಿಸುತ್ತಿದ್ದ ಕಾರೇ ಪಲ್ಟಿಯಾಗಿ[...] ಬಿದ್ದ ಏಟಿಗೆ ಪಕ್ಕೆಗೆ ಬಡಿದ ಕಾರಿನ ಸ್ಟೇರಿಂಗ್ ನೇರವಾ[...] ರಾಕೇಶ್‌ನ ಪಿತ್ಥಕೋಶವನ್ನೇ ಜಜ್ಜಿ ಹಾಕಿತ್ತು.

ಬದುಕಿನುದ್ದಕ್ಕೂ ಮುಖ್ಯಮಂತ್ರಿಗಾದಿ ವಂಚಿತರಾಗೊ[...] ಉಪಮುಖ್ಯಮಂತ್ರಿಗಿರಿಯಿಂದ ಪದಚ್ಯುತಿಗೊಂಡೊ[...] ಚಾಮುಂಡೇಶ್ವರಿಯಲ್ಲಿ ಸೋತೋ; ಒಂದಲ್ಲ ಒಂದು ಆಕಸ್ಮಿ[...] ಆಘಾತಗಳನ್ನು ಎದುರಿಸುತ್ತಲೇ ಬಂದ ಸಿದ್ದುವಿಗೆ ತ[...] ಮಗನಿಗಾದ ಆಘಾತ ಮುಂದೊಮ್ಮೆ ತನ್ನ ರಾಜಕೀಯ[...] ಬದುಕಿನ ಉತ್ತುಂಗವನ್ನೇ ಅಲ್ಲಾಡಿಸಿ ಹಾಕಲಿದೆಯೆಂ[...] ನಿರೀಕ್ಷೆಯಾದರೂ ಎಲ್ಲಿತ್ತು?

ಮೋದಿ ಭಕ್ತರ ಸಾವಿನ ಸಂಭ್ರಮಾಚರಣೆ!

ಎಂಥಾ ಶತ್ರುವೇ ಆದರೂ ಆತ ಸಾವಿಗೀಡಾದ ಕ್ಷಣದಲ್ಲೇ ಆತನ ಮೇಲಿನ ದ್ವೇಷವೆಲ್ಲವನ್ನೂ ಮರೆಯಬೇಕಂತೆ. ಇದು ನಾಗರಿಕ ಜಗತ್ತಿನ ಆದರ್ಶ. ಸಾಧುಸಂತರು, ಪ್ರವಾದಿಗಳು, ಧರ್ಮಗ್ರಂಥಗಳೆಲ್ಲವೂ ಇದನ್ನೇ ತಾನೇ ಬೋಧಿಸುತ್ತಾ ಬಂದಿರುವುದು?

ಆದರೆ ರಾಕೇಶ್ ತೀರಿಕೊಂಡ ಸುದ್ದಿ ಬಂದಿದ್ದೇ ಫೇಸ್‌ಬುಕ್ ಮತ್ತು ವಾಟ್ಸಪ್‌ಗಳಲ್ಲಿ ನಡೆದ ಚಾರಿತ್ರ್ಯವಧೆಯಿದೆಯಲ್ಲ; ಬಹುಶಃ ಸಂಘೀ ಸಂತತಿಗಲ್ಲದೆ ಮೃಗ ಪಿಶಾಚಿಗಳಿಗೂ ಸಾಧ್ಯವಿಲ್ಲವೇನೋ. ತಾವು ಕೂಡ ಮನುಷ್ಯರೆಂಬುದನ್ನೇ ಮರೆತು ಮೋದಿ ಭಕ್ತರ ಹಿಂಡೊಂದು ರಾಕೇಶ್ ಸಾವಿನ ಸಂಭ್ರಮಾಚರಣೆಗಿಳಿದ ರೀತಿಯೇ ಪೈಶಾಚಿಕವಾಗಿತ್ತು. "ಸೂ.... ಮಗ ಸಿದ್ದನಿಗೆ ದೇವರು ಸರಿಯಾದ ಶಿಕ್ಷೆಯನ್ನೇ ಕೊಟ್ಟ...." ಎಂದು ಓರ್ವ ಮೋದಿ ಭಕ್ತ ತನ್ನ ಫೇಸ್‌ಬುಕ್‌ನಲ್ಲಿ ವಿಷ ಕಕ್ಕುತ್ತಿದ್ದರೆ ಮತ್ತೊಬ್ಬ 'ಮಗ ಸತ್ತಿದ್ದೇ ಹಿಂದೂಗಳ ಶಾಪದಿಂದ' ಎಂದುಬಿಟ್ಟ!

ಬರುಬರುತ್ತ ಇದು ಯಾವ ಅಸಹ್ಯಕ್ಕೆ ಬಂತೆಂದರೆ; ಬ್ರಸೇಲ್ಸ್‌ನ ಟುಮಾರೋ ಲ್ಯಾಂಡ್ ಎಂಬಲ್ಲಿ ಡ್ರಗ್ ಮಾಫಿಯಾದವರು ಪ್ರತಿವರ್ಷ ಡ್ರಗ್ ಪಾರ್ಟಿ ನಡೆಸುತ್ತಾರೆಂದೂ ಅದಕ್ಕೆ ರಾಕೇಶ್ ಇಬ್ಬರು ನಟಿಯರು, ರೋಹನ್ ಗೌಡ ಎಂಬ ಮತ್ತೊಬ್ಬ ಮಾಡೆಲ್ ಹಾಗು ಮೂರ್‍ನಾಲ್ಕು ಮಂದಿ ಗೆಳೆಯರ ಜೊತೆ ಮೋಜುಮಸ್ತಿಗೆಂದೇ ಹೋಗಿದ್ದನೆಂದೂ, ಅಲ್ಲಿ ಬೌನ್ಸರ್‌ಗಳ ಕೈಯಲ್ಲಿ ಪೆಟ್ಟು ತಿಂದ ಪರಿಣಾಮವಾಗಿ ರಾಕೇಶ್ ಆಸ್ಪತ್ರೆಗೆ ಸೇರಿ ತೀರಿಕೊಂಡ ಎಂದೂ ವಿಕೃತನೊಬ್ಬ ಸ್ಟೇಟಸ್ ಹಾಕಿದ್ದ. ಅದಕ್ಕಾತ ಇನ್ನೆಂದೋ ರಾಕೇಶ್ ಪಾರ್ಟಿಯಲ್ಲಿ ತೆಗೆಸಿಕೊಂಡಿದ್ದ ಫೋಟೋ ಒಂದನ್ನು ಲಗತ್ತಿಸಿದ್ದ.

ಆದರದು ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನ ರೆಸ್ಟೋರೆಂಟ್ ಒಂದರಲ್ಲಿ ಅದರ ಮಾಲಿಕ ತನ್ನ ಪ್ರತಿಷ್ಠಿತ ಸ್ನೇಹಿತರಿಗೆಂದು ನೀಡಿದ್ದ ಪಾರ್ಟಿಯ ಚಿತ್ರವಾಗಿತ್ತು. ಪಾರ್ಟಿಗೆ ಬಂದಿದ್ದ ಜೋಡಿಗಳ ಜೊತೆ ಮಾಲಿಕನೂ ಸೇರಿದಂತೆ ರಾಕೇಶ್ ಇದ್ದ ಫೋಟೋ ಅದಾಗಿತ್ತು. ಅದೇ ಫೋಟೋ ಹಾಕಿ ಟುಮಾರೋ ಲ್ಯಾಂಡ್‌ನ ಡ್ರಗ್ ಪಾರ್ಟಿಗೆ ರಾಕೇಶ್ ಜೊತೆ ಹೋಗಿದ್ದ ಶೋಕಿಲಾಲರ ಫೋಟೋ ಇದೆಂದು ಜನರನ್ನು ಯಾಮಾರಿಸುವ ಚೆಡ್ಡಿ ಸಂತತಿಯ ವಿಕೃತಿ ಮರುಕ್ಷಣದಲ್ಲೇ ಬಟ್ಟಂಬಯಲಾಯಿತು. ಚರ್ಚ್‌ಸ್ಟ್ರೀಟ್‌ನ ರೆಸ್ಟೋರೆಂಟ್ ಮಾಲಿಕ ಅನಂತ್ ನಾರಾಯಣ್ ತನ್ನದೇ ಫೇಸ್‌ಬುಕ್‌ನಲ್ಲಿ ಇದು ಬೆಂಗಳೂರಿನ ತನ್ನ ರೆಸ್ಟೋರೆಂಟ್‌ನಲ್ಲಿ ತಾವೇ ತೆಗೆದಿದ್ದ ಫೋಟೋ ಎಂದೂ ತನ್ನ ಫೇಸ್‌ಬುಕ್‌ನಿಂದಲೇ ಫೋಟೋ ಕದ್ದು ಈ ರೀತಿ ಬಂಡಲ್ ಬಿಡುತ್ತಿರುವವರ ವಿರುದ್ಧ ಕಾನೂನುಕ್ರಮ ಜರುಗಿಸುತ್ತೇನೆಂದೂ ಎಚ್ಚರಿಸಿದ್ದ.



ಅಲ್ಲಿಗೆ ಚೆಡ್ಡಿಗಳ ಡ್ರಗ್ ಪಾರ್ಟಿಯ ಮಾಯಾಬಜಾರ್ ಕತೆಯೇ ಉಲ್ಟಾ ಹೊಡೆದಿತ್ತು. ಇದಾದನಂತರ ರಾಕೇಶ್ ರೆಸಾರ್ಟ್ ಒಂದರ ಸೆಕ್ಯೂರಿಟಿ ಗಾರ್ಡ್‌ನನ್ನು ನೆಲಕ್ಕೆ ಹಾಕಿ ತುಳಿಯುತ್ತಿದ್ದ ಮತ್ತೊಂದು ಫೋಟೋ ಹಾಕಿದ ಭಕ್ತರ ಗುಂಪು ರಾಕೇಶ್ ಎಂಥಾ ದುಷ್ಟ ಎಂಬಂತೆ ಬಿಂಬಿಸಲೆತ್ನಿಸಿತ್ತು. ಆದರದು ದೆಹಲಿ ನೀರಜ್ ವರ್ಮಾ ಎಂಬುವವರು ಜೂನ್ 1ರಂದು ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಹಾಕಿದ್ದ ಹಳೇಯ ಫೋಟೋ ಎಂಬುದನ್ನು ಸಾಕ್ಷಿಸಮೇತ ಇನ್ನಾರೋ ಬಯಲಿಗೆಳೆದರು. ಪಾನಮತ್ತನಾಗಿದ್ದ ಆಸಾಮಿಯೊಬ್ಬ ಸೆಕ್ಯೂರಿಟಿ ಗಾರ್ಡ್‌ನ ಮೇಲೆ ಕಾಲೆತ್ತಿದ್ದ ಆ ಫೋಟೋದ ಆಸಾಮಿಗೂ ರಾಕೇಶ್‌ಗೂ ಹೋಲಿಕೆಯೇ ಇರಲಿಲ್ಲ, ಆದಾಗ್ಯೂ ಕಾಲೆತ್ತಿದ್ದ ಆಸಾಮಿಯೇ ರಾಕೇಶ್ ಎಂದು ಬಿಂಬಿಸಲೆತ್ನಿಸಿ ಮತ್ತೆ ಜನರಿಂದ ಉಗಿಸಿಕೊಂಡಿತ್ತು ಚೆಡ್ಡಿ ಗ್ಯಾಂಗ್!



ಸತತ ಆರು ತಿಂಗಳ ಕಾಲ ಆಸ್ಪತ್ರೆಯಲ್ಲಿ ಮಲಗಿದ್ದ ...ಶ್ ನಿಧಾನಕ್ಕೆ ಚೇತರಿಸಿಕೊಂಡ. ಕೈಯೋ ಕಾಲೋ ...ರಿವಿದ್ದರೆ ಮೂಳೆ ಜೋಡಿಸಬಹುದಿತ್ತು, ಆದರೆ ...ಗಿದ್ದು ಪಿತ್ಥಕೋಶಕ್ಕೆ. ವೈದ್ಯಕೀಯ ಪರಿಭಾಷೆಯಲ್ಲಿ ...ಪ್ಯಾಂಕ್ರಿಯಾಟೈಟಿಸ್. ಹೆಚ್ಚು ಖಾರ ತಿನ್ನುವಂತಿಲ್ಲ, ...ದಾಗೆಲ್ಲಾ ಮಾಂಸ ಉಣ್ಣುವಂತಿಲ್ಲ, ಗೆಳೆಯರು, ಪಾರ್ಟಿ ...ದೆಲ್ಲಾ ಕುಡಿಯುವಂತಿಲ್ಲ, ಪಥ್ಯ ಕಟ್ಟುನಿಟ್ಟಾಗಿರಬೇಕು. ...ಂತ ರಾಕೇಶ್ ಕೇಳಬೇಕಲ್ಲ, ಶುರುವಿನಲ್ಲಿ ಹದ್ದುಬಸ್ತಿನಲ್ಲೇ ... ಆರೋಗ್ಯವೂ ತಹಬಂದಿಗೆ ಬಂದಿತ್ತು. ಗೆಳೆಯರು ...ರ್ಟಿ ಎಂದೆಲ್ಲ ಓಡಾಟವಿತ್ತಾದರೂ ಲಿಕ್ಕರ್ ...ಟ್ಟುತ್ತಿರಲಿಲ್ಲ. ಅದೇ ಜೋಷ್‌ನಲ್ಲಿ ಬೆಂಗಳೂರಿನ ...ವೆಂಟ್ಸ್, ಫ್ಯಾಷನ್ಸ್, ಪಾರ್ಟಿ ಎಂದೆಲ್ಲ ಓಡಾಡಿಕೊಂಡಿ ...ಲೇ ರಾಕೇಶ್ ಬದುಕಲ್ಲಿ ಹೆಣ್ಣೊಂದರ ಪ್ರವೇಶವಾಗಿತ್ತು.

ಬಳ್ಳಾರಿ ಪಾದಯಾತ್ರೆಯಲ್ಲಿ

ಆಕೆ ಸ್ಮಿತಾ ನಾಯ್ಡು. ಬೆಂಗಳೂರಿನ ಬಿಲ್ಡರ್ ಒಬ್ಬರ ...ಗಳು. ಫ್ಯಾಷನ್ ಡಿಸೈನಿಂಗ್ ಮುಗಿಸಿ ಈವೆಂಟ್ಸ್ ...ನೇಜ್‌ಮೆಂಟ್ ಮಾಡಿಕೊಂಡಿದ್ದ ಸ್ಮಿತಾ ಮತ್ತು ರಾಕೇಶ್ ...ಾವ ಗಳಿಗೆಯಲ್ಲಿ ಮನಸೋತರೋ ಗೊತ್ತಿಲ್ಲ. ಮಗನ ...ದುವೆಯ ಬಗ್ಗೆ ತನ್ನದೇ ಕನಸಿಟ್ಟುಕೊಂಡಿದ್ದ ಸಿದ್ದುಗದು ...ತ್ತೊಂದು ಅನಿರೀಕ್ಷಿತ. ಏನೇ ಮನವೊಲಿಸಿದರೂ ಅಪ್ಪನ ...ತಿಗೆ ಮಣೆ ಹಾಕದ ರಾಕೇಶ್ ಸದ್ದಿಲ್ಲದೆ ಸ್ಮಿತಾಳನ್ನು ...ದುವೆಯಾಗಿದ್ದ. ಇಷ್ಟಾಗ್ಯೂ ಮಗನ ಮದುವೆ ಬಗ್ಗೆ ...ದ್ದು ತಲೆ ಕೆಡಿಸಿಕೊಳ್ಳಲಿಲ್ಲ. ಏಕೆಂದರೆ ಯಾವತ್ತಿಗೂ ...ತಿಗೆ ಗಂಟುಬೀಳದ ಸಿದ್ದು ಮನಸ್ಥಿತಿಗೆ ಇದೇನು ಮಹಾ ... ಅನ್ನಿಸಲಿಲ್ಲ.

ವಾರಸುದಾರನ ಅಂತ್ಯ

ಏಕೆಂದರೆ ಸಿದ್ದು ನಂತರ ಆ ಸ್ಥಾನ ತುಂಬಬಲ್ಲ ಒಬ್ಬನೇ ಒಬ್ಬ ವರ್ಚಸ್ವೀ ನಾಯಕನಿರಲಿಲ್ಲ. ಬಿಜೆಪಿಯ ಈಶ್ವರಪ್ಪ ಹುಟ್ಟಾ ಬಾಯಿಬಡುಕನಂತೆ ಎಡಬಿಡಂಗಿಯಂತೆ ಕಂಡರೆ ಜೆಡಿಎಸ್ ನಾಯಕ ಬಂಡೆಪ್ಪ ಕಾಶಂಪೂರ್ ದೇವೇಗೌಡರ ನೆರಳಿನಿಂದಾಚೆಗೆ ಬೆಳೆಯಲೇ ಇಲ್ಲ. ಮಾಗಡಿಯ ಎಚ್.ಎಂ. ರೇವಣ್ಣ, ಮೈಸೂರಿನ ಅಡಗೂರು ವಿಶ್ವನಾಥ್, ಇತ್ತೀಚಿನ ಪೀಳಿಗೆಯ ಭೈರತಿ ಬಸವರಾಜ್, ಭೈರತಿ ಸುರೇಶ್, ಉತ್ತರ ಕರ್ನಾಟಕದ ಮೇಟಿ- ಹೀಗೆ ಕುರುಬ ಸಮೂಹದ ಯಾವೊಬ್ಬ ರಾಜಕಾರಣಿಯಲ್ಲೂ ಕಾಣದ ವಿಶೇಷ ಸಾಮರ್ಥ್ಯವೊಂದನ್ನು ಕುರುಬ ಸಮೂಹ ರಾಕೇಶ್‌ನಲ್ಲಿ ಗುರುತಿಸಿತ್ತು.

ಅದು ಯುವಕರನ್ನು ಆಕರ್ಷಿಸುವ ತಾಕತ್ತು ಮತ್ತು ಜನಸಾಮಾನ್ಯರೊಂದಿಗೆ ಬೆರೆಯುವ ಸರಳತೆ. ಈಗಿನ ಜಾಯಮಾನಕ್ಕೆ ಬೇಕಾದ ಎಲ್ಲಾ ಕೈಚಳಕವೂ ಆತನಲ್ಲಿತ್ತು. ಹಾಗಂತ ಸಿದ್ದು ವಂಶಪಾರಂಪರ್ಯವನ್ನು ಸಮರ್ಥಿಸಿದವರಲ್ಲ. ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗ, ಮಕ್ಕಳು ಅಳಿಯಂದಿರು ದರ್ಬಾರ್ ಮೆರೆದಂತೆ, ದೇವೇಗೌಡರ ಮಕ್ಕಳ ದೌರ್ಬಲ್ಯ ದಂತೆ, ಶೆಟ್ಟರ್, ಸದಾನಂದಗೌಡರ ಕಾಲದ ಕಿಚನ್ ಕ್ಯಾಬಿನೆಟ್ಟಿ ನಂತೆ ಸಿದ್ದು ಮಗನನ್ನು ಮುಂಚೂಣಿಗೆ ತರಲೇ ಇಲ್ಲ. ತೆರೆಮರೆಯಲ್ಲೇ ಕ್ಷೇತ್ರದ ಕೆಲಸಕ್ಕಿಳಿಸಿದರು. ಬೇರೆಲ್ಲ ಮಂತ್ರಿಗಳ ಮಕ್ಕಳು ತಂದೆಯ ಅಧಿಕಾರದ ನೆರಳಲ್ಲಿ ಒಂದಲ್ಲ ಒಂದು ಡೀಲು, ವಿವಾದವೆಂದು ಸುದ್ದಿಯಾದಾಗಲೂ ರಾಕೇಶ್ ಮಾತ್ರ ಸದ್ದುಗದ್ದಲವಿಲ್ಲದೆ ತಾನಾಯಿತು ತನ್ನ ಪಾಡಾಯಿತು ಎಂಬಂತೆ ಇದ್ದುಬಿಟ್ಟ.



ಮದುವೆಯ ನಂತರವಾದರೂ ಮಗ ಮತ್ತಷ್ಟು ಜವಾ...ದಿ ಹೊರಬಹುದೆಂಬ ಅವರ ನಿರೀಕ್ಷೆ ಸುಳ್ಳಾಗಲಿಲ್ಲ. ...ಕೇಶ್ ಗಂಭೀರವಾಗಿ ರಾಜಕೀಯದಲ್ಲಿ ತೊಡಗಿಸಿ...ಕೊಂಡಿದ್ದ. ಬೆಂಗಳೂರಿನಲ್ಲಿ ಪತ್ನಿಯ ಈವೆಂಟ್ಸ್ ಕಂಪೆನಿ ...ೂ ಲಾಭದಲ್ಲಿತ್ತು. ಸಿದ್ದು ಜೆಡಿಎಸ್‌ನಿಂದ ಹೊರಬಿದ್ದು ...ಮುಖ್ಯಮಂತ್ರಿ ಗಾದಿಯಿಂದ ಹೊರಬಿದ್ದಾಗಲೂ ಮಗ ...ವಿಚಲಿತನಾಗಲಿಲ್ಲ. ವಾರಕ್ಕೆ ಮೂರು ದಿನ ಮೈಸೂರಿನಲ್ಲೇ ...ಗುತ್ತಿದ್ದ. ಜನರ ಅದೂ ಇದೂ ಕೆಲಸವನ್ನೂ ...ಡಿಕೊಡುತ್ತಿದ್ದ. ಯಡ್ಡಿ ಮುಖ್ಯಮಂತ್ರಿಯಾಗಿ ಸಿದ್ದು ...ಪಕ್ಷ ನಾಯಕರಾಗಿ ಐತಿಹಾಸಿಕ ಬಳ್ಳಾರಿ ಪಾದಯಾತ್ರೆ ...ಕೊಂಡಾಗಲೂ ತಂದೆಯ ಜೊತೆಗೇ ಇದ್ದ. ಮತ್ತೊಬ್ಬ ...ನ ಯತೀಂದ್ರ ತಾಯಿಯ ಜೊತೆ ತಾನಾಯಿತು ತನ್ನ ...ಸ್ಪತ್ರೆಯ ವೃತ್ತಿಯಾಯಿತು ಅಂತಿದ್ದರೆ ರಾಕೇಶ್ ತಂದೆಯ ...ಜಕೀಯ ಉತ್ತರಾಧಿಕಾರಿ ಮಾರ್ಗದಲ್ಲಿ ಒಂದೊಂದೇ ...ಹೆಜ್ಜೆಗಳನ್ನಿಡುತ್ತಿದ್ದ.

...ಕಳೆದ ವಿಧಾನಸಭಾ ಚುನಾವಣೆಯಲ್ಲಿ ಇಡೀ ರಾಜ್ಯ... ಕಾಂಗ್ರೆಸ್ ಚುನಾವಣಾ ಪ್ರಚಾರದ ಹೊಣೆ ಸಿದ್ದು ...ಲೆಗೆ ಬಿದ್ದಾಗ ವರುಣಾದ ಸವಾಲನ್ನು ರಾಕೇಶ್ ...ವಹಿಸಿಕೊಂಡ. ಸಿದ್ದು ಅನುಪಸ್ಥಿತಿಯಲ್ಲಿ ತಂದೆಯ ಪರವಾಗಿ ...ನೇ ಮನೆ ಮನೆ ಸುತ್ತಿದ್ದ, ಗೆದ್ದಿದ್ದು ಸಣ್ಣ ...ಅಂತರದಲ್ಲಾದರೂ ಅದಕ್ಕೆ ರಾಕೇಶ್ ಹಾಕಿದ್ದ ಶ್ರಮವಿತ್ತಲ್ಲ; ...ಗಳಲ್ಲಿದ್ದರೂ ಸಿದ್ದುಗದು ಚೆನ್ನಾಗಿಯೇ ಅರ್ಥವಾಗಿತ್ತು. ...ದೆ ಮುಖ್ಯಮಂತ್ರಿಯಾದ ಮೇಲಂತೂ ರಾಕೇಶ್ ...ಘೋಷಿತ ಉತ್ತರಾಧಿಕಾರಿಯೆಂಬಂತೆ ಚಾಲ್ತಿಗೆ ಬಂದ. ...ಗರಲ್ಲೂ ಕುರುಬ ಜನಾಂಗ ಆತನ ಮೇಲೆ ...ಸಿದ್ದುಗಿಂತಲೂ ವಿಶೇಷವಾದ ಭರವಸೆಯಿಟ್ಟಿತ್ತು.

ಸಿದ್ದು ಮತ್ತು ರಾಕೇಶ್ ವಿಷಯದಲ್ಲಿ ಎಂಥ ವಿರೋಧಿಗಳು ಒಪ್ಪಲೇಬೇಕಾದ ಒಂದು ಸಂಗತಿಯೆಂದರೆ; ಯಾವತ್ತಿಗೂ ಸಿದ್ದು ತನ್ನ ಮಗನನ್ನು ಮುಂದು ಬಿಟ್ಟುಕೊಳ್ಳಲಿಲ್ಲ. ಮಗನೂ ಮೂಗು ತೂರಿಸಲಿಲ್ಲ. ಆದರೆ ರಾಕೇಶ್ ಜನಸಾಮಾನ್ಯರೊಂದಿಗಿನ ತನ್ನ ಒಡನಾಟ ನಿಲ್ಲಿಸಲಿಲ್ಲ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ತನ್ನದೇ ಗೆಳೆಯರು ಅಭಿಮಾನಿಗಳ ಹಿಂಡೊಂದನ್ನು ಚಾಲ್ತಿಯಲ್ಲಿಟ್ಟಿದ್ದ. ಕ್ಷೇತ್ರದ ಮಟ್ಟಿಗಂತೂ ಹೇಳಹೆಸರಿಲ್ಲದ ಯಾರೇ ಅಹವಾಲು ತಂದರೂ ಆಸಕ್ತಿ ವಹಿಸಿ ಪರಿಹರಿಸುತ್ತಿದ್ದ. ತನ್ನ ಪಾಲಿಗೆ ಇದೇ ಕಡೆಯ ಚುನಾವಣೆ, ಮತದಾರರೇ ಹಣ ಕೇಳುವ ಮಟ್ಟಕ್ಕೆ ವ್ಯವಸ್ಥೆ ಹದಗೆಟ್ಟ ಮೇಲೆ ನನಗಿನ್ನು ಚುನಾವಣೆ ಸಾಕು... ಎಂದು ರಾಜಕೀಯ ವೈರಾಗ್ಯ ಮೆರೆದ ಸಿದ್ದು ಮನಸಲ್ಲಿ ಮಗನ ಹೊಸ ಶೈಲಿಯ ರಾಜಕಾರಣದ ಬಗ್ಗೆ ಭರವಸೆಯಿತ್ತೋ ಏನೋ!

ಆದರೆ ಆಕಸ್ಮಿಕವಿದೆಯಲ್ಲ; ಇದು ಸಿದ್ದು ಬದುಕಿನ ಅತೀ ದೊಡ್ಡ ಅಪಘಾತವಾಗಿ ವಕ್ಕರಿಸಿದೆ. ಆಗಾಗ ಕಾಡುವ ಪಿತ್ಥಕೋಶದ ಸಮಸ್ಯೆ ಕಾಲಕ್ರಮೇಣ ಕಿಡ್ನಿಗೂ ಆವರಿಸಿತ್ತು. ಜುಲೈ ಕೊನೆಯ ವಾರ ತನ್ನ ಕಿಡ್ನಿಯ ಸಮಸ್ಯೆಗೊಂದು ಪರಿಹಾರ ನಿರೀಕ್ಷಿಸಿಯೇ ಬ್ರುಸೆಲ್ಸ್ ವಿಮಾನವನ್ನೇರಿದ್ದ ರಾಕೇಶ್ ಮತ್ತೆ ಮರಳಲೇ ಇಲ್ಲ. ತಂದೆತಾಯಿ ಬದುಕಿದ್ದಾಗಲೇ ಮಕ್ಕಳನ್ನು ಕಳೆದುಕೊಳ್ಳುವ ಪುತ್ರಶೋಕವಿದೆಯಲ್ಲ ಬಹುಶಃ ಯಾವೊಬ್ಬ ತಂದೆಗೂ ಅದು ಬರಬಾರದು. ಅಂಥಾದ್ದರಲ್ಲಿ ಮುಖ್ಯಮಂತ್ರಿ ಯಾಗಿದ್ದಾಗಲೇ ಮುದ್ದಿನ ಮಗನನ್ನು ಕಳಕೊಂಡ ಸಿದ್ದು ಆರ್ತನಾದಕ್ಕೆ ಯಾರು ಉತ್ತರ ತಾನೇ ನೀಡಲು ಸಾಧ್ಯ?

■ ರಾ. ಸೋಮನಾಥ್

ಆಂಜನೇಯನ ಸಾಮ್ರಾಜ್ಯ ಅಮೇರಿಕದಲ್ಲೂ ಇತ್ತಂತೆ

ಥೂತ್ತೇರಿ

ಮಹದಾಯಿ ತೀರ್ಪಿನ ಅನ್ಯಾಯ ಪ್ರತಿಭಟಿಸುತ್ತಿದ್ದ ಜನರ ಮೇಲೆ ನಮ್ಮವರೇ ಆದ ಪೊಲೀಸರು ನಡೆಸುತ್ತಿದ್ದ ಲಾಠಿ ಪ್ರಹಾರ ನೋಡಿದ ಕನ್ನಡಿಗರು ಬೆಚ್ಚಿ ಹೋಗಿದ್ದಾರಲ್ಲಾ, ಕೆಲವರಿಗಂತೂ ಭಾರತೀಯರನ್ನು ಚಚ್ಚಿ ಸುಮ್ಮನಿರಿಸಲು ಬ್ರಿಟಿಷರು ನಮ್ಮ ಪೊಲೀಸರಿಗೆ ಕೊಟ್ಟ ತರಬೇತಿ ನೆನಪಿಗೆ ಬಂತಂತಲ್ಲಾ, ಅದಂತೂ ನಿಜ. ಭಾರತಕ್ಕೆ ಸ್ವಾತಂತ್ರ್ಯ ಬಂತು, ಹಾಗೆಯೇ ಬ್ರಿಟಿಷರ ಗುಲಾಮ ಗಿರಿಯಲ್ಲೇ ತರಬೇತಿ ಪಡೆದ ಪೊಲೀಸರಿಗೂ ಸ್ವಾತಂತ್ರ್ಯ ಬಂತು. ಆದರೇನು, ಅವುಗಳ ಮನಸ್ಸು ಬದಲಾಗಲಿಲ್ಲ, ಬುದ್ಧಿ ಬೆಳವಣಿಗೆಯೂ ಆಗಲಿಲ್ಲ. ಪರಿಣಾಮ ಅಮಾನುಷ ಪ್ರಹಾರಗಳು. ಈ ಮಹದಾಯಿ ಎಂದರೇನು? ಅದರ ತೀರ್ಪು ಎಂದರೇನು? ಯಾಕೆ ಕನ್ನಡಿಗರು ರೋದಿಸುತ್ತ ಪ್ರತಿಭಟಿಸುತ್ತಿದ್ದಾರೆ? ಇದಾವುದನ್ನು ನಮ್ಮ ಲಾಠಿ ಹಿಡಿದ ಜನ ಪರಿಶೀಲಿಸಲಾರರು. ಏಕೆಂದರೆ ಅವುಗಳ ತಲೆ ಮೇಲಧಿಕಾರಿಗಳ ಕೈಯ್ಯಲ್ಲಿರುತ್ತವೆ. ಒಮ್ಮೊಮ್ಮೆ ಹಿಡಿದ ಲಾಠಿಯಲ್ಲಿರುತ್ತದೆ. ಆ ಕಾರಣಕ್ಕೆ ಪ್ರತಿಭಟನಾನಿರತರನ್ನು ಚಚ್ಚು ಎನ್ನುತ್ತದೆ. ಇದೇನು ಸಾಮಾನ್ಯ ಘಟನೆಯಲ್ಲ, ಗುಂಡೂರಾಯರ ಸರ್ಕಾರವನ್ನು ಬಲಿ



ತೆಗೆದುಕೊಂಡ ಘಟನೆಯ ಕಿಡಿ ಹೊತ್ತಿದ್ದು ನರಗುಂದ ಪ್ರಾಂತ್ಯದಲ್ಲಿ ಎಂಬುದು ಮೂರ್ಖ ಕಾಂಗೈಗಳಿಗೆ ಇನ್ನು ಹೊಳೆದಿಲ್ಲವಂತಲ್ಲಾ, ಥೂತ್ತೇರಿ!!

* * *

ಸದರಿ ಘಟನೆ ಸಮಯದಲ್ಲಿ ನೆನಪಿಸಬೇಕಾದ ಘಟನೆ ಯಾವುದೆಂದರೆ, ಮೊದಲ ಬಾರಿಗೆ ಪೊಲೀಸರನ್ನು ಸಿದ್ದು ಸರ್ಕಾರದ ವಿರುದ್ಧ ಎತ್ತಿಕಟ್ಟಿದ ದನಿಗಳು ಈಗ ಉಲ್ಟಾ ಹೊಡೆದು ಮಹದಾಯಿ ನೀರಿನ ವಿಷಯದಲ್ಲಿ ಹೊಡೆತ ತಿಂದ ಜನಗಳ ಬಳಿಗೆ ಹೋಗಿ "ನಾವಿದ್ದೇವೆ, ಹೆದರಬೇಡಿ" ಎನ್ನುತ್ತಿವೆಯಲ್ಲಾ, ಈ ಹೈಕಿ ಇಂತವೇ ಸನ್ನಿವೇಶಗಳ ಸೃಷ್ಟಿಕರ್ತ ಕುಮಾರಸ್ವಾಮಿ ಏಕಕಾಲದಲ್ಲಿ ಕಾಂಗೈ, ಬಿಜೆಪಿಗಳ ವಿರುದ್ಧ ದಾಳಿ ಮಾಡುವುದರ ಬದಲು ಭಾರತದ ಪ್ರಧಾನಿಯಾಗಿದ್ದ ಅಪ್ಪನನ್ನು ಮೋದಿ ಬಳಿಗೆ ಕಳುಹಿಸಿ, ಮೂರು ರಾಜ್ಯದ ಮುಖ್ಯಮಂತ್ರಿಗಳನ್ನು ಕರೆಸಿ, ಸರ್ವಸಮ್ಮತವಾದ ತೀರ್ಪು ಕೊಡಿಸಿ ಎಂಬ ಬಾಯಾರಿಕೆ ಪರಿಹಾರದ ದಾರಿ ತೋರಿಸುವಂತೆ ಮಾಡಬಹುದಿತ್ತಲ್ಲಾ. ಆದರೆ ಅದಾಗದ ಮಾತು. ಅವರ ರಾಜಕಾರಣದ ಇತಿಹಾಸವೇ ಸಮಸ್ಯೆಗಳ ಉಲ್ಬಣದಲ್ಲಿ ಪಾರ್ಟಿ ಕಟ್ಟುವುದಂತಲ್ಲಾ, ಥೂತ್ತೇರಿ!!

* * *

ಕೆಳಕ್ಕೆ ಬಿದ್ದ ವ್ಯಕ್ತಿಯನ್ನು ನಾಲ್ಕೈದು ಜನ ಪೊಲೀಸರು ಸೇರಿಕೊಂಡು ಹುಚ್ಚು ನಾಯಿಗೆ ಹೊಡೆದಂತೆ ಚಚ್ಚುವುದನ್ನು ನೋಡಿದಾಗ, ನಮ್ಮ ಸಿನಿಮಾ ಮಂದಿ ಈ ಪೊಲೀಸರನ್ನು ಮಹಾಮೂರ್ಖರಂತೆ ತೋರಿಸಿ ಆಡಿಕೊಳ್ಳುವುದು ಸರಿ ಎನ್ನಿಸಿತು. ಕನಿಷ್ಟ ವಿವೇಕವಿಲ್ಲದ ಈ ಲಾಠಿಗಳು ಠಳಾಯಿಸುತ್ತಿರುವ ಜಾಗಕ್ಕೆ ಹೋಗಿ ಅಲ್ಲಿ ನಡೆಯುವ ಸಮಾರಂಭ, ಬರುವ ವ್ಯಕ್ತಿಗಳು, ಉದ್ದೇಶ ಕುರಿತು ಪ್ರಶ್ನಿಸಿದರೆ ಯಾವ ನಿಖರ ಮಾಹಿತಿಯೂ ಸಿಗುವುದಿಲ್ಲ. ಉದಾಹರಣೆಯೊಂದನ್ನು ಕೊಡುವುದಾದರೆ, ತೇಜಸ್ವಿಯವರು ತೀರಿಕೊಂಡಾಗ ಹಡಗಲಿಯಲ್ಲಿ ಎಂ.ಪಿ. ಪ್ರಕಾಶರು ಒಂದು ಬೃಹತ್ ಸಂತಾಪ ಸಭೆ ಏರ್ಪಡಿಸಿದ್ದರು. ಆಗ ಬಾಗಿಲಲ್ಲಿ ನಿಂತಿದ್ದ ಪೊಲೀಸ್ ಪೇದೆಯೊಬ್ಬ ಮತ್ತೊಬ್ಬನನ್ನು ಕೇಳಿದ:

"ತೇಜಸ್ವಿ ಸಂತಾಪ ಸಭೆಗೆ ತೇಜಸ್ವಿ ಬತ್ತಾರೇನ್ಲ?"

"ಅವ್ರುರ ಸಭೆಗೆ ಅವ್ರು ಬರದಿಲ್ವೆ? ಫೋಟೋನು ಹಾಕ್ಯವ್ರೆ."

"ಎಟೊತ್ತಿಗೆ ಬತ್ತರಪ್ಪ?"

"ಇನ್ನೇನು ಬಂದುಬುಡ್ತರೆ."

ಈ ಬುದ್ಧಿ ಮಟ್ಟದ ಪೊಲೀಸ್‌ರಿಗೆ ಕುಡಿವ ನೀರಿನ ಮಹದಾಯಿ ಕತೆ ಗೊತ್ತಿರಲು ಸಾಧ್ಯವೇ, ಥೂತ್ತೇರಿ!!!

* * *

ಸಿದ್ದರಾಮಯ್ಯನವರು ಹಠಾತ್ತನೆ ಮಗನನ್ನು ಕಳೆದುಕೊಂಡಿದ್ದಾರೆ. ಮಗನ ಸಾವೆಂದರೆ ಜನ್ಮ ಕೊಟ್ಟವನ ಜೀವ ಹಿಂಡುವಂತಹ ಘಟನೆ. ಅದಕ್ಕೆ ಕರ್ನಾಟಕದ ರಾಜಕಾರಣ ಪಕ್ಷಭೇದ ಮರೆತು ಸಿದ್ದು ದುಃಖದಲ್ಲಿ ಭಾಗಿಯಾಗಿದೆ. ಈ ಹಿಂದೆ ಮಗನನ್ನು ಕಳೆದುಕೊಂಡು ಪರಿತಪಿಸಿದ್ದ ಸದಾನಂದಗೌಡರು ಸಿದ್ದರಾಮಯ್ಯನನ್ನು ದುಃಖತಪ್ತ ಭಂಗಿಯಲ್ಲಿ ಆಲಂಗಿಸಿದ್ದಾರೆ. ಅದೇ ಸಮಯಕ್ಕೆ ಸಾವನ್ನು ಸಂಭ್ರಮಿಸುವ ವಿಕೃತ ಮನಸ್ಸುಗಳು ಸ್ಪಂದಿಸಿವೆ. ಈ ಮನಸ್ಸುಗಳು ಗಾಂಧಿ ತೀರಿಕೊಂಡಾಗ ಪಟಾಕಿ ಹೊಡೆದವರ ಸಂತತಿಯವರು. ಅವೆಂದೂ ನಾಶವಾಗು ವುದಿಲ್ಲ, ಬದಲಿಗೆ ಹೊಸ ಆವಿಷ್ಕಾರಗಳಲ್ಲಿ ಹೊಸತನದಲ್ಲಿ ವಿಜೃಂಭಿಸುತ್ತವೆ. ರಾಕೇಶ್ ಸಾವಿಗೆ ಸಿದ್ದು ವಿರೋಧಿ ರಾಜಕಾರಣಿಗಳೆಲ್ಲಾ ಬಂದು ಕಣ್ಣೀರು ಹಾಕಿದ್ದನ್ನು ನೋಡಿದ ಚಿಂತಕರೊಬ್ಬರು, "ಅಲ್ಲಿ ನೋಡ್ರಿ, ಮಾನವೀಯ ಗುಣಗಳು ಪಕ್ಷಭೇದದ ಗಡಿದಾಟಿ ಬಂದು ಹೇಗೆ ಸ್ಪಂದಿಸುತ್ತಿವೆ. ಇದೇ ನಡವಳಿಕೆಯನ್ನು ನಿಮ್ಮ ಸಾಹಿತ್ಯಲೋಕದಲ್ಲಿ ನೋಡಲು ಸಾಧ್ಯವೇ? ತೀರಿಕೊಂಡವರ ವಿಷಯದಲ್ಲಿ ಇನ್ನೂ ಕೆಟ್ಟದಾಗಿ ಕೆರೆಯುತ್ತಿವೆ. ಇವು ಖಂಡಿತ ಸಾಯಿತಿಗಳಲ್ಲ" ಎಂದರಲ್ಲಾ, ಥೂತ್ತೇರಿ!!

* * *

ಇತ್ತ ಕರ್ನಾಟಕ ಹಲವು ಸಮಸ್ಯೆಗಳ ದುಃಖದಲ್ಲಿ ಆದ್ರಗೊಂಡಿರುವಾಗ ಅತ್ತ ಚೆಡ್ಡಿಗಳ ಗುಹೆಯಿಂದ ತಮಾಷೆಯೊಂದು ಹೊರಬಿದ್ದಿದೆಯಲ್ಲಾ, ಅದೇನೆಂದರೆ ಅಮೆರಿಕದ ದಟ್ಟಾರಣ್ಯದ ನಡುವೆ ಶ್ರೀರಾಮಭಕ್ತ ಆಂಜನೇಯನ ನಗರವೊಂದು ಪತ್ತೆಯಾಗಿದೆಯಂತೆ. ಇದಕ್ಕೆ ಬರೋಬ್ಬರಿ ಐದು ಸಾವಿರ ವರ್ಷಗಳಾಗಿವೆಯಂತೆ. ಎತ್ತಮುಂದಾಗಿ ನೋಡಿದರೂ ಅಮೆರಿಕದ ಉಜ್ವಲ ಇತಿಹಾಸಕ್ಕೆ ಇನ್ನೂರು ವರ್ಷಗಳು. ಅದರಾಚೆಗೆ ಇನ್ನೂ ಇನ್ನೂರು ಸೇರಿಸಿಕೊಂಡರೆ ನಾನೂರು ವರ್ಷದ ಇತಿಹಾಸವಿರುವ ದೇಶ ಅದು. ಇದನ್ನು ಕೂಡ ಕನ್ನಡದ ಅಮೆರಿಕ ವಾಸಿ ವಿದ್ವಾಂಸರು ದಾಖಲಿಸಿದ್ದಾರೆ. ಇಂತಿರುವಾಗ, ಆಂಜನೇಯನ ಕಿಷ್ಕಿಂಧಾ ರೂಪದ ನಗರವೊಂದು ಅಮೆರಿಕದಲ್ಲಿತ್ತು, ಅದೂ ಕೂಡ ರಾಮಾಯಣದಲ್ಲಿ ಉಲ್ಲೇಖಗೊಂಡಿದೆ ಎಂದು ಹೇಳುತ್ತಿರುವ ಚೆಡ್ಡಿ ಚಾನಲ್ಲುಗಳ ಕುತಂತ್ರದ ಇತಿಹಾಸ ಕೆದಕಿದರೆ, ಇದ್ದಕ್ಕಿದ್ದಂತೆ ಗಣಪತಿ ಒಂದು ಲೀಟರ್ ಹಾಲುಕುಡಿದ ಎಂಬ ಸುದ್ದಿ ಹಬ್ಬಿಸಿದಂತೆ ಆಂಜನೇಯನ ಪುರಾಣವನ್ನು ಹರಿಯಬಿಟ್ಟಿವೆಯಂತಲ್ಲಾ, ಥೂತ್ತೇರಿ!!!

* * *

ಆಂಜನೇಯ ಅಮೆರಿಕದಲ್ಲಿ ಸಾಮ್ರಾಜ್ಯ ಕಟ್ಟಿದ ವಿವರವನ್ನು ಹೇಳುತ್ತಿದ್ದ ವ್ಯಕ್ತಿಯ ಬಗ್ಗೆ ಕುತೂಹಲಗೊಂಡ ವ್ಯಕ್ತಿ "ತಮ್ಮದು ಯಾವ ಊರು ಸಾರ್?" ಎಂದ.

"ಸಾಗರ."

"ಸಾಗರ ಅಂದಮೇಲೆ ಹವ್ಯಕರು ಇರಬೇಕಲ್ಲ?"

"ಹೌದು, ನಾವು ಹವ್ಯಕರು."

"ಅದ್ಯಾಕೆ ಸಂಸಾರ ಮಾಡಿದ ಸ್ವಾಮಿಯನ್ನ ಇನ್ನೂ ಇಟ್ಟುಗೊಂಡಿದ್ದಿರಿ?"

"ಏನು ಮಾಡೋದು ಸಾರ್? ಕೆಟ್ಟ ಜನಗಳ ಸಂಖ್ಯೆ ಜಾಸ್ತಿಯಾಗಿದೆ. ಅವರೆಲ್ಲಾ ಕೆಟ್ಟವರನ್ನೇ ಬೆಂಬಲಿಸುತ್ತಾಯಿದಾರೆ."

"ಹವ್ಯಕರು ಒಳ್ಳೆ ಜನಾಂಗ ಅಂತ ಕೇಳಿದ್ದೆ."

"ಒಳ್ಳೆಯವರೆ, ಕೆಟ್ಟ ಸ್ವಾಮಿಯಿಂದ ಕೆಟ್ಟವರಾಗಿ ಕಾಣ್ತಾಯಿದಾರೆ. ನಾವು ಎಲ್ಲೇ ಹೋದರು ನಮ್ಮ ಊರು, ಜಾತಿ ಹೇಳಿಕೊಳ್ಳದೆ ಬರುವಂತಹ ಸ್ಥಿತಿಯೊಂದು ನಿರ್ಮಾಣ ಆಗಿದೆ. ಇದರಿಂದ ಮುಕ್ತಿಯನ್ನು ಆ ರಾಘವೇಶ್ವರನೇ ಕರುಣಿಸಬೇಕು" ಎಂದು ನಿಟ್ಟುಸಿರು ಬಿಟ್ಟರಂತಲ್ಲಾ, ಥೂತ್ತೇರಿ!!! ■

ಬುಡಕಟ್ಟು ಬೆಳಕು ಮಹಾಶ್ವೇತಾದೇವಿ


ಇತ್ತೀಚೆಗಷ್ಟೆ ನಿಧನರಾದ ಖ್ಯಾತ ಬರಹಗಾರ್ತಿ, ಮಾನವಹಕ್ಕುಗಳ ಹೋರಾಟಗಾರ್ತಿ, ಬುಡಕಟ್ಟು ಸಮುದಾಯಗಳ ಧ್ವನಿಯಾಗಿ ದುಡಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಬಂಗಾಳಿ ಲೇಖಕಿ ಮಹಾಶ್ವೇತಾ ದೇವಿಯವರು 2002ರ ಮಾರ್ಚ್‌ನಲ್ಲಿ 'ಬುಧಾನ್' ಎಂಬ ತಮ್ಮದೇ ಪತ್ರಿಕೆಯಲ್ಲಿ ಪ್ರಕಟಗೊಂಡ 'ಇಂಡಿಯಾ ಟುಗೆದರ್' ಲೇಖನ ಮಾಲಿಕೆಗಾಗಿ ಬರೆದ ಬರಹದ ಅನುವಾದವನ್ನು ಇಲ್ಲಿ ನೀಡಲಾಗಿದೆ.

ಮಹಾಶ್ವೇತಾದೇವಿ ಹುಟ್ಟಿದ್ದು 14 ಜನವರಿ 1926ರಲ್ಲಿ, ಮಧ್ಯಮ ವರ್ಗದ ಬೆಂಗಾಲಿ ಕುಟುಂಬದಲ್ಲಿ ಬೆಳೆದ ಅವರ ಮೇಲೆ ತಂದೆ ಮನೀಶ್‌ಚಂದ್ರ ಘಟಕ್ ಮತ್ತು ತಾಯಿ ಧರಿತ್ರಿ ದೇವಿಯವರ ಪ್ರಭಾವ ಅಪಾರವಾದುದು. ಏಕೆಂದರೆ ಅವರಿಬ್ಬರೂ ಸಾಹಿತ್ಯಾಭಿರುಚಿ ಹೊಂದಿದ್ದವರಲ್ಲದೆ ಬಡಮಕ್ಕಳ ಶಿಕ್ಷಣಕ್ಕಾಗಿ ತಮ್ಮನ್ನು ತೊಡಗಿಸಿಕೊಂಡ ಸಾರ್ಥಕಜೀವಿಗಳಾಗಿದ್ದರು. ಇನ್ನು ಮಹಾಶ್ವೇತಾ ದೇವಿಯವರ ತಾತ 'ನನ್ನ ಮೊಮ್ಮಕ್ಕಳು ಬಡವರ ಮಕ್ಕಳಿಗಿಂತ ಉತ್ತಮವಾದ ದುಬಾರಿ ಬಟ್ಟೆಗಳನ್ನು ತೊಡಕೂಡದು' ಎಂಬ ನಿಯಮವನ್ನೇ ಮಾಡಿಟ್ಟಿದ್ದರು. ತಕ್ಕಮಟ್ಟಿನ ಆರ್ಥಿಕ ಸುಸ್ಥಿತಿಯ ವಾತಾವರಣದಲ್ಲಿ ಬೆಳೆದರೂ ಪೋಷಕರ ಇಂತಹ ಒತ್ತಾಸೆಯಿಂದ ಮಹಾಶ್ವೇತಾ ದೇವಿಯವರಲ್ಲಿ ಮಾನವೀಯ ಮೌಲ್ಯಗಳು ಬಾಲ್ಯದಿಂದಲೇ ಮಡುಗಟ್ಟಿದ್ದವು.

1946ರಲ್ಲಿ ಪದವಿ ಪಡೆದ ಮಹಾಶ್ವೇತಾ ದೇವಿಯವರು ಅದೇ ವರ್ಷ ಬಿಜೋನ್ ಭಟ್ಟಾಚಾರ್ಯರನ್ನು ಮದುವೆಯಾದರು. ಆತನೂ ಸಹ ರಂಗಕರ್ಮಿ ಮತ್ತು ನಾಟಕಕಾರರಾಗಿದ್ದರು, ಜೊತೆಗೆ ಕಮ್ಯುನಿಸ್ಟ್ ಪಾರ್ಟಿಯ ಸಕ್ರಿಯ ಕಾರ್ಯಕರ್ತರೂ ಹೌದು. ಕೆಲಕಾಲ ಶಾಲಾಶಿಕ್ಷಕಿಯಾಗಿ, ಮತ್ತೆ ಕೆಲದಿನ ಗುಮಾಸ್ತೆಯಾಗಿ ದುಡಿದರೂ ಅತ್ಯಲ್ಪ ಅವಧಿಯಲ್ಲೆ ಆ ವೃತ್ತಿಗಳೂ ಅವರ ಕೈಬಿಟ್ಟುಹೋದವು. ಆಗಲೇ ಅವರು ಬರವಣಿಗೆಯತ್ತ ತನ್ನನ್ನು ತಿರುಗಿಸಿಕೊಂಡಿದ್ದು. ಮೊದಮೊದಲು 'ಸಚಿತ್ರ ಭಾರತ್' ಎಂಬ ಬಂಗಾಳಿ ವಾರಪತ್ರಿಕೆಗೆ ಸುಮಿತ್ರಾ ದೇವಿ ಎನ್ನುವ ಕಾವ್ಯನಾಮದಲ್ಲಿ ಲೇಖನಗಳನ್ನು, ಕಥೆಗಳನ್ನು ಬರೆದರಾದರು ಅವ್ಯಾವುವು ಸೂಕ್ಷ್ಮ ಒಳನೋಟಗಳನ್ನು ಕಟ್ಟಿಕೊಡುವಂತಹ ಬರಹಗಳಾಗಿ ಅವರಿಗೆ ಹೆಸರು ತಂದುಕೊಡಲಿಲ್ಲ. ಆದರೆ 1956ರಲ್ಲಿ ಪ್ರಕಟಗೊಂಡ ಅವರ ಮೊದಲ ಕಾದಂಬರಿ 'ಝೂನ್ಸಿ ರಾಣಿ' ಬರವಣಿಗೆಯ ನೈಜ ಭಾಷ್ಯವನ್ನು ಅವರಿಗೆ ಕಲಿಸಿಕೊಟ್ಟಿತು. ಅಲ್ಲಿಂದಾಚೆಗೆ ತಾನು ಬರೆಯುವ ಪ್ರತಿಯೊಂದು ಕಥೆ, ಲೇಖನಕ್ಕೂ ಮುನ್ನ ಸಮಗ್ರ ಅಧ್ಯಯನ ಕೈಗೊಂಡೇ ಲೇಖನಿ ಹಿಡಿಯತೊಡಗಿದರು. ತಮ್ಮ ಈ ಅಧ್ಯಯನಕ್ಕಾಗಿ ಗುಡ್ಡಗಾಡು ಪ್ರದೇಶಗಳಲ್ಲಿ ಅಲೆದಾಡಿ, ಅಲ್ಲಿಯ ಜನರನ್ನು ಮಾತಾಡಿಸಿ, ಸಿಗುವ ಜಾನಪ ಕಥೆಗಳನ್ನು, ಲಾವಣಿಗಳನ್ನು ದಾಖಲಿಸಿಕೊಂಡು ಬಂದು ಅದನ್ನೇ ತನ್ನ ಕಥಾವಸ್ತುವಾಗಿಸಿಕೊಳ್ಳುತ್ತಿದ್ದ

ಇಂತಹ ಅಲೆದಾಟದಲ್ಲಿ ಒಮ್ಮೆ ಅವರು ಬಿಹಾರ ಅತ್ಯಂತ ಹಿಂದುಳಿದ ಜಿಲ್ಲೆ ಪಲಮ್ ಭೇಟಿ ನೀಡಿದ್ದು ಅವರ ಬದುಕಿನ ದಿಕ್ಕನ್ನೇ ಬದಲಿಸಿತು. ಶಿಕ್ಷಣ, ಆರೋಗ್ಯ, ರಸ್ತೆ, ಕುಡಿಯು ನೀರು ಮೊದಲಾದ ಮೂಲಸೌಕರ್ಯಗಳ ಸುಳಿವೇ ಇಲ್ಲದ ಅಲ್ಲಿನ ಬುಡಕಟ್ಟು ಜನರ ದು- ಮಹಾಶ್ವೇತಾದೇವಿಯವರಿಗೆ ಭಾರತದ ಮತ್ತೊಂದು ಮಗ್ಗುಲನ್ನು ಮುಖತಃ ಭೇಟಿ ಮಾಡಿಸಿ ಅಲ್ಲಿಂದಲೇ ಅವರು ತನ್ನ ಬರವಣಿಗೆ, ಹೋರಾಟ, ಬದುಕು ಸಮರ್ಥವನ್ನೂ ಈ ಜನರ ಅಭ್ಯುದಯ ಮೀಸಲಿಡಬೇಕೆಂದು ನಿರ್ಧರಿಸಿದರು. ಅಷ್ಟರಲ್ಲಾಗಲೆ ಅವರು ಗಂಡ ಬಿಜೋನ್ ಭಟ್ಟಾಚಾರ್ಯರಿ ಬೇರ್ಪಟ್ಟು ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಬುಡಕಟ್ಟು ಸಮುದಾಯಗಳ ಮೇಲೆ 'ನಾಗರಿ ಸಮಾಜ ನಡೆಸುತ್ತಿರುವ ದೌರ್ಜನ್ಯವೇ ಅವರ ಕಥಾವಸ್ತುವಾದವು. ಹಾಗಾಗಿ ಅರಣ್ಯೇ ಅಧಿಕಾರ್ (1977), ಚೋಟಿ ಮುಂಡಾ ಓ ತರಾ ತಿರ್ (1979), ಅಗ್ನಿಗರ್ಭ (197 ದ್ರೌಪದಿಯಂತಹ ಅತ್ಯದ್ಭುತ ಕತೆಗಳು ಅವರ ಲೇಖನಿಯಿಂದ ಹೊರಹೊಮ್ಮಿದವು. ಅ ಬರಹಗಳ್ಯಾವುವು ಕೇವಲ ಕತೆ, ಕಾದಂಬರಿಯ ಕಾಲ್ಪನಿಕ ನೆಲೆಗಟ್ಟಿಗೆ ಸೀಮಿತವಾದು ಅಲ್ಲ, ಸತ್ಯಾಂಶ ಘಟನೆಗಳನ್ನೇ ಕಥೆಯಾಗಿಸಿ, ಬದುಕಿದ್ದ ಬುಡಕಟ್ಟು ಜನರನ್ನೇ ಪಾತ್ರವಾಗಿ ಅವರ ಹೋರಾಟ, ಅವರ ಮೇಲೆ ನಡೆದ ದೌರ್ಜನ್ಯಗಳನ್ನೇ ಕಥಾವಸ್ತುವಾ ಓದುಗರಿಗೆ ದಾಟಿಸುತ್ತಾ ಬಂದರು. ಹಾಗಾಗಿ ಅವರ ಬರಹಗಳೆಂದರೆ ಅವೊಂಥ ಅಧಿಕೃತ ಇತಿಹಾಸ ದಾಖಲೆಗಳೇ ಇದ್ದಂತೆ. ಒಮ್ಮೆ ಅವರೇ ಹಿ ಹೇಳಿಕೊಂಡಿದ್ದರು: 'ಸತ್ಯಾಂಶವನ್ನು ದಾಖಲಿಸುವುದರಲ್ಲೇ ನನಗೆ ನಂಬ ಜಾಸ್ತಿ, ನನ್ನ ಕತೆ, ಕಾದಂಬರಿ, ಬರಹಗಳನ್ನು ಓದಿದ ತರುವಾ ಓದುಗರು ಸತ್ಯದ ಸಮ್ಮುಖದಲ್ಲಿ ನಿಂತಿರುತ್ತಾರೆ; ಭಾರತದ ನೈ ಮುಖವನ್ನು ಕಂಡು ನಾಚಿಕೆ ಪಟ್ಟುಕೊಳ್ಳುತ್ತಿರುತ್ತಾರೆ.'

ಅವರ ಕೃತಿಗಳನ್ನು ಓದಿದ ಪ್ರತಿಯೊಬ್ಬರೂ ಈ ಮಾತ ಅನುಮೋದಿಸುತ್ತಾರೆ. ಇಲ್ಲಿ ನೀಡಿರುವ ಲೇಖನ ಕೂ ಈ ಅಭಿಪ್ರಾಯಕ್ಕೆ ಹೊರತಾದುದಲ್ಲ.....



"ನನ್ನ ಬರಹ ಓದಿದ ತರುವಾಯ ಭಾರತದ ನೈಜ ಮುಖ ಕಂಡು ಓದುಗರು ನಾಚಿಕೆ ಪಟ್ಟುಕೊಳ್ಳುತ್ತಾರೆ"

ಇತ್ತೀಚೆಗಷ್ಟೆ ನಾನು 'ಮಾನವ ಹಕ್ಕುಗಳ ಜಾಗತಿಕ ಘೋಷಣೆ'ಯನ್ನು ಓದಿದೆ. ಅದರಲ್ಲಿರುವ ಮೂವತ್ತೂ ಕಾಯ್ದೆಗಳ ಮೇಲೆ ಕಣ್ಣಾಡಿಸಿದ ನಂತರ ನನ್ನಲ್ಲಿ ಮೂಡಿದ ಪ್ರಶ್ನೆ 'ಈ 1ರಿಂದ 30ರವರೆಗಿನ ಮಾನವಹಕ್ಕು ಕಾಯ್ದೆಗಳಲ್ಲಿ ಭಾರತಕ್ಕೆ ಹೊಂದುವಂತದ್ದು ಯಾವುದು?' ನನಗಂತು ಅವುಗಳಲ್ಲಿ ಯಾವುದೂ ಇಲ್ಲ ಅಂತನ್ನಿಸಿತು. ಭಾರತದ ಸಮಾಜ ಜಾತಿ ಮತ್ತು ವರ್ಗಗಳಿಂದ ವಿಘಟಿತಗೊಂಡಂತ ಹುದು. ಕೇವಲ ಜಾತಿ ಮಾತ್ರವೇ ಇಲ್ಲಿಗೆ ಶಾಪವಲ್ಲ, ಸಮಗ್ರವಾಗಿ ಭಾರತ ಸಮಾಜವು 'ಬುಡಕಟ್ಟು' ಎನ್ನುವ ಶಬ್ದಾರ್ಥಕ್ಕಿಂತ ಭಿನ್ನವಾದುದೇನಲ್ಲ, ಇದನ್ನು ಅರ್ಥಮಾಡಿಕೊಂಡಾಗ ಮಾತ್ರ ನಮಗೆ ಅಂತಿಮ ಸತ್ಯದ ಅರಿವಾಗುತ್ತದೆ. ಬಡತನರೇಖೆಗಿಂತ ಕೆಳಮಟ್ಟದಲ್ಲಿ ಅಥವಾ ಅದರ ಆಸುಪಾಸಿನಲ್ಲಿ ಬದುಕುತ್ತಿರುವ ಕೋಟ್ಯಂತರ ಭಾರತೀಯರ ಪಾಲಿಗೆ 'ಮಾನವಹಕ್ಕು' ಎಂಬ ಪದವೇ ಅಪರಿಚಿತವಾದುದು. ಬದುಕುವ ಹಕ್ಕು, ಸ್ವಂತದ್ದೊಂದು ಸೂರು ಕಲ್ಪಿಸಿಕೊಳ್ಳುವ ಹಕ್ಕು, ಕುಡಿಯುವ ನೀರು, ಶಿಕ್ಷಣ, ವಿದ್ಯುತ್, ಆರೋಗ್ಯ ಸೌಲಭ್ಯಗಳು, ಸಂವಹನ ಮಾಧ್ಯಮಗಳು, ಸ್ವಂತ ಜಮೀನು ಹೊಂದುವುದು... ಹೀಗೆ ಪ್ರತಿಯೊಂದು ಹಕ್ಕುಗಳನ್ನು ಅವರಿಗೆ ನಿರಾಕರಿಸುತ್ತಲೇ ಬರಲಾಗುತ್ತಿದೆ. ದೇಶದ ಅಧಿಕಾರದ ಚುಕ್ಕಾಣಿ ಹಿಡಿದ 'ಶಕ್ತಿ'ಗಳಿಗೆ ಈ ಜನರ ಬಡತನವೇ ಬಂಡವಾಳ. ಅವರ ಬಡತನ, ಅವರ ಶೋಷಿತ ಬದುಕು, ಅಭಿವೃದ್ಧಿ ಕಾಣದ ಅವರ ಪ್ರದೇಶಗಳೇ ಅಧಿಕಾರಶಾಹಿಗಳಿಗೆ ಮೂಲಧನ ಒದಗಿಸುತ್ತಾ ಬಂದಿವೆ. ಇವುಗಳನ್ನು ತೋರಿಸಿಯೇ ಅಧಿಕಾರಸ್ಥ ಶಕ್ತಿಗಳು ದೊಡ್ಡ ದೊಡ್ಡ ಯೋಜನೆಗಳನ್ನು ಮಂಜೂರು ಮಾಡಿಸಿಕೊಳ್ಳುತ್ತಾರೆ, ಸರ್ಕಾರಿ ಖಜಾನೆಯ ಹಣ ಹೊರ ಹರಿಯುವುದಕ್ಕೆ ದಾರಿ ಮಾಡಿಕೊಳ್ಳುತ್ತಾರೆ. ವಾಸ್ತವದಲ್ಲಿ ಈ ಜನರಿಗೋಸ್ಕರ ಏನನ್ನೂ ಮಾಡಲಾಗಿಲ್ಲ, ಒಂದೊಮ್ಮೆ ಅವರನ್ನೆಲ್ಲ ಬಡತನದ ಬೇಗೆಯಿಂದ ಮೇಲಕ್ಕೆತ್ತಿದರೆ ಅವರ್‍ಯಾರು ತಾವು ಚುನಾಯಿಸಿದ ಪ್ರತಿನಿಧಿಗಳ ಮೇಲೆ ಅವಲಂಬಿತರಾಗುಳಿಯುವುದಿಲ್ಲ. ಚುನಾವಣೆಗೂ ಮೊದಲು ಮೊಳಗುವ ಘೋಷಣೆಗಳೆಲ್ಲ ಪರಿಶುದ್ಧ 'ಟೊಳ್ಳು' ಎಂಬುದು ಈ ಜನಕ್ಕೆ ಚೆನ್ನಾಗಿಯೇ ಗೊತ್ತು; ಆದರೂ ತಮ್ಮ ಮತಗಳನ್ನು ಬಲಿಕೊಡುತ್ತಾರೆ. ಮತ ಹಾಕದಿರುವುದು ತೀವ್ರಗಾಮಿ ವರ್ತನೆ ಎಂಬ ಭ್ರಮೆಯನ್ನು ಇಂಡಿಯಾದಲ್ಲಿ ಬಿತ್ತಲಾಗಿದೆ.


ಇಲ್ಲಿ ನಾನೇಳುತ್ತಿರುವ ಮಾತುಗಳೆಲ್ಲ, ಮೂರು ದಶಕಗಳಿಂದ ಬಡವರ ನಡುವಿನಲ್ಲಿ ಸುರಿದಾಡಿದ ನನ್ನ ದಿನನಿತ್ಯದ ಅನುಭವದಿಂದ ಹುಟ್ಟಿದಂತವು. ಇಂತಹ ನತದೃಷ್ಟರಲ್ಲಿ ಭಾರತದ ಬುಡಕಟ್ಟು ಜನರ ಸ್ಥಿತಿ ಇನ್ನೂ ಚಿಂತಾಜನಕವಾದುದು. ಅವರದು ಅಸ್ತಿತ್ವವೇ ಇಲ್ಲದ ಬದುಕು. ಅವರು ಭಾರತದಲ್ಲಿ ಸಾವಿರಾರು ವರ್ಷಗಳಷ್ಟು ಪುರಾತನಕಾಲದಿಂದಲೂ ಬದುಕಿದ್ದಾರೆ, ಆದರೆ ಭಾರತದ ಮುಖ್ಯವಾಹಿನಿ ಅವರನ್ನು ಗುರುತಿಸಲು ನಿರಂತರವಾಗಿ ತಿರಸ್ಕರಿಸುತ್ತಲೇ ಬಂದಿದೆ. ಬುಡಕಟ್ಟು ಸಮಾಜಗಳಲ್ಲಿ ಜಾತಿಪದ್ಧತಿಯಿಲ್ಲ, ವರದಕ್ಷಿಣೆ ವ್ಯವಸ್ಥೆಯಿಲ್ಲ, ಗಂಡನಿಂದ ಪರಿತ್ಯಕ್ತ ಮತ್ತು ವಿಧವೆಯರ ಮರುವಿವಾಹಕ್ಕೆ ಸಾಮಾಜಿಕ ಸಮ್ಮತಿಯಿದೆ. ಶತಶತಮಾನಗಳ ನಿರಂತರ ದಬ್ಬಾಳಿಕೆ ಮತ್ತು ನಿರ್ಲಕ್ಷ್ಯದ ಹೊರತಾಗಿಯೂ ಅವರು ನಮಗಿಂತ ನಾಗರಿಕರು! ಅವರ ಮೌಲ್ಯಗಳನ್ನು ಅಲಕ್ಷಿಸಿದ್ದೇವೆ, ಅಸಂಘಟಿತ ವಲಯಗಳಡಿ ಅವರನ್ನು ಜೀತದಾರರನ್ನಾಗಿ ಮಾಡಿಕೊಂಡಿದ್ದೇವೆ, ಎಲ್ಲೆಲ್ಲಿ ನಾವು ಅಭಿವೃದ್ಧಿಯ ಉಮೇದಿನಲ್ಲಿ ಕೈಗಾರಿಕೆ ಮತ್ತು ಡ್ಯಾಂಗಳನ್ನು ಸ್ಥಾಪಿಸಿದ್ದೇವೆಯೋ ಅಲ್ಲಿಂದ ಅವರನ್ನೆಲ್ಲ ಒಕ್ಕಲೆಬ್ಬಿಸುತ್ತಾ ಬಂದಿದ್ದೇವೆ!


ಮಾನವಹಕ್ಕುಗಳಿಂದ ವಂಚಿಸಲ್ಪಟ್ಟ ಅವರು ಬಡವರಂತೆ ಹಿಡಿ ಕೂಳಿಗಾಗಿ ಗುತ್ತಿಗೆದಾರರ ಹಿ ಎಲ್ಲಿಗೆ ಬೇಕಾದರು ಅಲೆದಾಡುವ ಅಲೆಮಾರಿ ಜನಾ ಭಾಗವಾಗಿ ಹೋಗಿದ್ದಾರೆ. ಅವರ ಸಮೃದ್ಧ ಬುಡಕ ಸಂಸ್ಕೃತಿ, ಅವರ ಅತ್ಯದ್ಭುತ ನೃತ್ಯಗಳು, ಚಿತ್ರಕಲೆ, ಮ ಕೆತ್ತನೆಗಳು ಮಧ್ಯವರ್ತಿಗಳ ಬಿಡಿಗಾಸಿಗೆ ಬಿಕರಿಗೊ ಸೊರಗುತ್ತಿವೆ. ಆದರೆ ಅವು ಬೇರೆಕಡೆ ಮತ್ತು ವಿದೇಶ ದುಬಾರಿ ಕಲಾಕೃತಿಗಳಾಗಿ ವ್ಯವಹರಿಸಲ್ಪಡುತ್ತಿರುವುದು ಜನಕ್ಕೆ ತಿಳಿದೇ ಇಲ್ಲ, ನಿಜವಾದ ಈ ಕುಶಲಕರ್ಮಿಗ ಶೂನ್ಯಕ್ಕಿಂತ ಹೆಚ್ಚೇನೂ ಸಿಗುತ್ತಿಲ್ಲ.


ಭಾರತದ ಇತಿಹಾಸದಲ್ಲಿ ಅವರು ಸ್ಮರಿಸಲ್ಪಟ್ಟದ್ದು ತೀ ವಿರಳ. 18 ಮತ್ತು 19ನೇ ಶತಮಾನದಲ್ಲಿ ಬ್ರಿ ಅಧಿಪತ್ಯಕ್ಕೆ ಪ್ರತಿರೋಧ ಒಡ್ಡಿದ್ದ ಪ್ರಬಲ ರೈತಾಪಿ ಬುಡ ಬಂಡಾಯಗಾರರು ಇದ್ದರಾದರು ಭಾರತ ಸ್ವಾತ ಚಳವಳಿಯ ಇತಿಹಾಸ ಅವರನ್ನು ಮೆಲುಕು ಹಾಕುವ ಇಲ್ಲ, ಮುಖ್ಯವಾಹಿನಿಯ ಹೋರಾಟಕ್ಕೆ ಪೂರಕ ತಮ್ಮ ಅಸ್ತಿತ್ವಗಳ ಮೂಲಕ ಆಂಗ್ಲ ಆಡಳಿತಗಾರ ತಲೆನೋವಾಗಿದ್ದ ಬುಡಕಟ್ಟು ಸಮುದಾಯಗಳನ್ನು ಗಾ ಪುಲೆ ಅಥವಾ ಅಂಬೇಡ್ಕರ್‌ರಂತಹ ರಾಷ್ಟ್ರನಾಯ ...ಲೇಖಿಸಿದ್ದೂ ಅಪರೂಪ.

...ನ್ನು ಜಾತಿಪದ್ಧತಿಯ ಕಣ್ಣಿನಿಂದ ನೋಡುವುದಾ ...ಡಕಟ್ಟು ಸಮುದಾಯಗಳು ಅಸ್ಪೃಶ್ಯರಾಗಿದ್ದ ಅಸ್ಪೃಶ್ಯರಾಗಿಯೇ ಇದ್ದಾರೆ. ಅವರ ಅಭಿವೃದ್ಧಿಗೆಂದು ಕೇ ಮತ್ತು ರಾಜ್ಯ ಸರ್ಕಾರಗಳು ವಿಶೇಷ ಅನುದಾನಗ ಘೋಷಿಸುತ್ತಾ ಬಂದಿವೆ. ದುರಂತವೆಂದರೆ, ಇಂ ಯೋಜನೆಗಳನ್ನು ರೂಪಿಸುವವರು ಈ ಜನರ ಇವರ ವೈವಿಧ್ಯಮಯ ಬದುಕಿನ ಬಗ್ಗೆ ಕಿಂಚಿತ್ತೂ ಜ್ಞಾನ ಮೇಲ್ಪಂಕ್ತಿಯವರಾಗಿರುತ್ತಾರೆ. ಹಾಗಾಗಿ ಅವ್ಯಾವುವು ಇವ ಒಳಗೊಳ್ಳುವುದೇ ಇಲ್ಲ. ಉದಾಹರಣೆಗೆ, ಒರಿಸ ಕಲಹಂಡಿ ಪ್ರಾಂತ್ಯದ ಬುಡಕಟ್ಟು ಸಮುದಾಯ ತೆಗೆದುಕೊಳ್ಳಿ. ಈ ಪ್ರಾಂತ್ಯದ ನೆಲ ಬಹಳ ಫಲವತ್ತಾದ ಮತ್ತು ನಿರಂತರವಾಗಿ ವಾರ್ಷಿಕ ಫಸಲುಗಳನ್ನು ನೀ ಬರುತ್ತಿದ್ದರೂ ಕಲಹಂಡಿ ಬುಡಕಟ್ಟುಗಳಲ್ಲಿ ಬರಗಾಲ ಹಸಿವಿನ ಸಾವುಗಳು ತೀರಾ ಸಾಮಾನ್ಯದಂತಾಗಿದೆ.










ಜನರ ಜಾಗಗಳನ್ನು ಇವತ್ತು 'ನಾಗರಿಕ' ಸಮಾಜ ಆಕ್ರಮಿಸಿಕೊಂಡು ಕೂತಿದೆ. ಬರಗಾಲದ ಸಂದರ್ಭದಲ್ಲಿ ಈ ಬುಡಕಟ್ಟು ಜನರಿಗೆ ಅಕ್ಕಿ ಮತ್ತು ಗೋಧಿಯನ್ನು ನೀಡುತ್ತಿದ್ದೇವೆ ಅಂತ ಸರ್ಕಾರ ಹೇಳುತ್ತವೆ. ಆದರೆ, 'ವಾರ್ಷಿಕ ಉತ್ತಮ ಇಳುವರಿ' ಮತ್ತು 'ಹಸಿವಿನಿಂದ ಉಂಟಾಗುವ ಸಾವು' ಎಂಬ ವೈಪರೀತ್ಯಗಳ ನಡುವಿನ ಸತ್ಯವನ್ನು ಅರಿಯಲು ಯಾರೂ ಮುಂದಾಗಿಲ್ಲ. ಇತರೆ ಬುಡಕಟ್ಟು ಸಮುದಾಯಗಳಂತೆ ಕಲಹಂಡಿ ಬುಡಕಟ್ಟು ಜನರಿಗೂ ಅಕ್ಕಿ ಮತ್ತು ಗೋಧಿಗಳು ಪ್ರಧಾನ ಆಹಾರ ಪದಾರ್ಥಗಳಲ್ಲ; ಸರ್ಕಾರದ ಪರಿಭಾಷೆಯಲ್ಲಿ 'ವಿರಳ ಧಾನ್ಯಗಳು' ಅಂತ ಕರೆಸಿಕೊಳ್ಳುವ (ಮರುವಾ, ಕೋಡೊ, ಕುರ್ತಿ ಇತ್ಯಾದಿ) ಅರಣ್ಯ ಧಾನ್ಯಗಳು. ಅವರ ಜಮೀನುಗಳನ್ನು ಬೇರೆಯವರು ಅತಿಕ್ರಮಿಸಿಯಾಗಿದೆ, ತಾವು ತಿನ್ನಬಯಸಿದ್ದನ್ನು ಬೆಳೆದುಕೊಳ್ಳಲು ಅವರಿಗೆ ಅವಕಾಶವಿಲ್ಲ. ಹಾಗಾಗಿ ಅವರು ಸರ್ಕಾರಗಳು ಕೊಡುವ ಅಕ್ಕಿ ಮತ್ತು ಗೋಧಿ'ಯ ಹೊರತಾಗಿಯೂ ಹಸಿವಿಗೆ ಸಿಲುಕಿ ಅವಸಾನವಾಗುತ್ತಿದ್ದಾರೆ. 'ಕೊರ್ಕು' ಎಂಬುದು ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಅರಣ್ಯವಾಸಿ ಬುಡಕಟ್ಟು ಸಮುದಾಯದ ಹೆಸರು. ಅವರದು ಆಹಾರ ಸಂಗ್ರಹಣೆಯೇ ಮೂಲಕಸುಬು. ಸಮೃದ್ಧ ಅರಣ್ಯ ನಾಶವಾದಂತೆ ಅವರ ಆವಾಸಗಳೂ ಕ್ಷೀಣಿಸುತ್ತಿವೆ. ಈ ಬುಡಕಟ್ಟು ಸಮುದಾಯದ ಅಳಿವಿನ ಕುರಿತು ಸಾಕಷ್ಟು ಜನ ಬರೆದ ನಂತರ, ಹಲವಾರು ಸಂಘಟನೆಗಳು ಹಾಗೂ ವ್ಯಕ್ತಿಗಳು ಅವರಿಗೆಂದು ಕಚ್ಚಾ ಮತ್ತು ಸಿದ್ಧ ಆಹಾರ ಪದಾರ್ಥಗಳನ್ನು ಕಾಡಿಗೆ ಕಳುಹಿಸಿಕೊಡುತ್ತಿದ್ದಾರೆ. ಆದರೆ ಈ ಬುಡಕಟ್ಟಿನವರು ಅಂತಹ ಆಹಾರಗಳನ್ನು ಮುಟ್ಟುವುದೂ ಇಲ್ಲ. ನಶಿಸುತ್ತಿರುವ ಕಾಡುಗಳಲ್ಲಿ ಅಲೆದಾಡಿ ಸಂಗ್ರಹಿಸಿದ ಆಹಾರಗಳಷ್ಟೇ ಅವರಿಗೆ ಸೇರುತ್ತಿರುವುದು. ಹಾಗಾಗಿ ಅವರ ಗಾತ್ರ, ತೂಕ, ಬೆಳವಣಿಗೆ ಕುಂಠಿತವಾಗುತ್ತಿದೆ. ಈಗ್ಗೆ ಎರಡ್ಮೂರು ವರ್ಷಗಳ ಹಿಂದೆ ಅಧಿಕಾರಿಯೊಬ್ಬ ಇಡೀ ಕೊರ್ಕು ಸಮುದಾಯವನ್ನು ಒಂದೇ ಮಾತಿನಲ್ಲಿ ತೂಗಿ ಹೀಗೆ ಹೇಳಿದ್ದ, 'ಅವರು ಬದುಕುಳಿಯುವುದಕ್ಕೇ ನಾಲಾಯಕ್ಕು!'

ಕೊರ್ಕು ಬುಡಕಟ್ಟು ಸಮುದಾಯವನ್ನು ಭಾರತೀಯ ಬುಡಕಟ್ಟು ಸಮುದಾಯಗಳ ಪ್ರತಿನಿಧಿ ಎಂದುಕೊಂಡು, ಈ ಮಾತನ್ನೇಳಿದ ಅಧಿಕಾರಿಯನ್ನು ಭಾರತ ಮುಖ್ಯವಾಹಿನಿಯ ಪ್ರತಿನಿಧಿ ಎಂದುಕೊಂಡರೆ, ಇವೆರಡರ ನಡುವಿರುವ ಸೇತು ಅಸಾಧ್ಯ ಕಂದಕದ ಅಂದಾಜು ನಿಮಗೆ ಸಿಗುತ್ತದೆ. ಇನ್ನು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಕೈಗಾರಿಕೆಗಳ ಬಗ್ಗೆ ಯೋಚನೆ ಮಾಡಿ. ಇವೆರಡೂ ಸಂದರ್ಭಗಳಲ್ಲಿ ದೊಡ್ಡಮಟ್ಟದಲ್ಲಿ ಬುಡಕಟ್ಟು ಸಮುದಾಯಗಳನ್ನು ಅವರ ಜಾಗಗಳಿಂದ ಒಕ್ಕಲೆಬ್ಬಿಸಲಾಗಿದೆ. ಅದಕ್ಕೆ ಬದಲಿಗೆ ಅವರಿಗೆ ಹಣವೂ ಸಿಕ್ಕಿಲ್ಲ, ಪರ್ಯಾಯ ಭೂಮಿಯೂ ಲಭಿಸಿಲ್ಲ. ಬ್ರಿಟಿಷ್ ಇಂಡಿಯಾದ ಟಾಟಾ ಉಕ್ಕು ಕೈಗಾರಿಕೆಯಿಂದ ಹಿಡಿದು ಇತ್ತೀಚೆಗಿನ ನರ್ಮದಾ ಡ್ಯಾಂವರೆಗೆ ಬುಡಕಟ್ಟು ಸಮುದಾಯಗಳು ದೂರನಿಂತು ನೋಡುವ ಪ್ರೇಕ್ಷಕರಷ್ಟೆ. ತಮ್ಮ ನೆಲ ಭಾರತದ ಸಂಪತ್ತನ್ನು ಹೇಗೆಲ್ಲ ಹೆಚ್ಚಿಸುತ್ತಿದೆ ಅಂತ ತೆಪ್ಪಗೆ ನೋಡುತ್ತಾ ನಿಲ್ಲುವುದಷ್ಟೇ ಅವರ ಕಾಯಕ.

1991ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆಯಲ್ಲಿ ಶೇ. 8ರಷ್ಟು ಬುಡಕಟ್ಟು ಜನರಿದ್ದಾರೆ. ಈ ಅಂಕಿಅಂಶವೂ ಸತ್ಯವಾದುದಲ್ಲ, ಯಾಕೆಂದರೆ ಭಾರತದಲ್ಲಿ ಬುಡಕಟ್ಟು ಸಮುದಾಯಗಳ ಗಣತಿ ಕೊನೆಯದಾಗಿ ನಡೆದದ್ದು 1986ರಲ್ಲಿ. ಮಾನವಚರಿತ್ರಾ ಸಮೀಕ್ಷೆ ಹೇಳುವಂತೆ ಭಾರತದಲ್ಲಿ ಒಟ್ಟು 635 ಬುಡಕಟ್ಟು ಸಮುದಾಯಗಳಿವೆ. ಆದರೆ ಭಾರತ ಸರ್ಕಾರ ಕೇವಲ 426 ಬುಡಕಟ್ಟು ಸಮುದಾಯಗಳನ್ನಷ್ಟೇ ಗುರುತಿಸಿದೆ. ಉಳಿದ 209




ಬುಡಕಟ್ಟುಗಳು ಇವತ್ತಿಗೂ ಸರ್ಕಾರದ ಕಣ್ಣಳತೆಯಿಂದ ಹೊರಗಡೆಯೇ ಉಳಿದಿದ್ದಾರೆ. ಈ 635 ಬುಡಕಟ್ಟುಗಳನ್ನೂ ಗಣತಿ ಮಾಡಿದರೆ, ಬುಡಕಟ್ಟು ಜನರ ಜನಸಂಖ್ಯಾ ಪ್ರತಿಶತ ಮತ್ತಷ್ಟು ಹೆಚ್ಚಾಗಲಿದೆ.

ಪ್ರಪಂಚದ ಬೃಹತ್ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಇಂತವೆಲ್ಲಾ ನಡೆಯುತ್ತಿರುತ್ತವೆ.

ನಾನು ಬುಡಕಟ್ಟು ಜನರ ಬಗ್ಗೆ ಮಾತನಾಡುವಾಗ, ಭಾರತವು ಕೋಟ್ಯಂತರ ಜನರ ಮೇಲೆ ನಡೆಸಿದ ಅತಿಘೋರ ಅಪರಾಧದ ಬಗ್ಗೆಯೂ ಮಾತನಾಡದೆ ಇರಲಾಗುವುದಿಲ್ಲ. ಭಾರತ ಜಾತಿ ವಿಂಗಡಿತ ದೇಶ. ಇಲ್ಲಿ ಮೇಲ್ಜಾತಿ, ಕೀಳ್ಜಾತಿ ವ್ಯವಸ್ಥೆಗಳಿವೆ. ಬುಡಕಟ್ಟು ಸಮುದಾಯಗಳಿಗೆ ಇಲ್ಲಿ ಹಿಂದೂ ಧರ್ಮದ ಅತಿಕೀಳು ವರ್ಗಕ್ಕಿಂತಲೂ ಕೀಳು ಸ್ಥಾನವನ್ನು ನೀಡಲಾಗಿದೆ. ನಾನು ಸೌಲತ್ತು ಪಡೆದ ಬುಡಕಟ್ಟು ಸಮುದಾಯಗಳು ಅಥವಾ ವ್ಯಕ್ತಿಗಳ ಬಗ್ಗೆ ಮಾತನಾಡುತ್ತಿಲ್ಲ. ಭಾರತ ಸರ್ಕಾರದ ಏಕಮಾತ್ರ ಉದ್ದೇಶವೆಂದರೆ, ಮುಖ್ಯವಾಹಿನಿಗೆ ಸಮವಾಗುವಂತೆ ಬುಡಕಟ್ಟುಗಳನ್ನು 'ಅಭಿವೃದ್ಧಿ' ಪಡಿಸುವುದು. ಸಮಾನ ಸ್ವೀಕಾರಕ್ಕೆ ಸಿದ್ಧವೇ ಇಲ್ಲದ ಮನಸ್ಥಿತಿಯ ಮುಖ್ಯವಾಹಿನಿಯಲ್ಲಿ ಸರ್ಕಾರದ ಯೋಜನೆಗಳಿಂದ ಇಂತಹ ಬುಡಕಟ್ಟುಗಳು ತಮ್ಮತನ ಕಳೆದುಕೊಂಡ ಬುಡಕಟ್ಟುಗಳಾಗುತ್ತವೆಯೇ ವಿನಾಃ ಮುಖ್ಯವಾಹಿನಿಗೆ ಸಮವಾಗುವುದು ದುಸ್ತರ.

ಬುಡಕಟ್ಟುಗಳಲ್ಲದ ಸಮುದಾಯಗಳೊಟ್ಟಿಗೆ ಬುಡಕಟ್ಟು ಸಮುದಾಯಗಳೂ 'ಅನುಸೂಚಿತ' ಬುಡಕಟ್ಟುಗಳನ್ನು ಬಲಿಪಶು ಮಾಡಿದ್ದಾರೆ. ಈ ಅನುಸೂಚಿತ ಬುಡಕಟ್ಟುಗಳಿಗೆ ಇರುವುದು ಒಂದೇ ಜನ್ಮವರ್ಷ; ಅದು 1871. 1998ರ ಅಂಕಿಸಂಖ್ಯೆಯಂತೆ 1871ರಲ್ಲಿ ಹುಟ್ಟಿದ ಕೋಟ್ಯಂತರ ಜನರನ್ನು ಹೊಂದಿರುವ ದೇಶ ಯಾವುದು? ಭಾರತ. ಹೇಗೆಂದು ವಿವರಿಸುತ್ತೇನೆ ಕೇಳಿ.

1871 ರಲ್ಲಿ ಭಾರತದ ಬ್ರಿಟಿಷ್ ಸರ್ಕಾರವು ಕೆಲವೊಂದಷ್ಟು ಬುಡಕಟ್ಟುಗಳನ್ನು 'ಕ್ರಿಮಿನಲ್'ಗಳು ಎಂದು ಗುರುತಿಸಿ ಕುಖ್ಯಾತ 'ಕ್ರಿಮಿನಲ್ ಟ್ರೈಬಲ್ ಆಕ್ಟ್ 1871' ಅನ್ನು ಅನುಶಾಸನಕ್ಕೆ ತಂದಿತು. ಬ್ರಿಟಿಷ್ ಸರ್ಕಾರದಿಂದ ಹೀಗೆ ವರ್ಗೀಕರಿಸಲ್ಪಟ್ಟವರೆಂದರೆ, ಅಲೆಮಾರಿ ದನಗಾಹಿಗಳು, ಅಲೆಮಾರಿ ಹಾಡುಗಾರರು, ದೊಂಬರಾಟದವರು ಇತ್ಯಾದಿ. ಇವರು ಕಾಲಕಾಲಕ್ಕೆ ಬ್ರಿಟಿಷ್ ಅಧಿಪತ್ಯವನ್ನು ವಿರೋಧಿಸುತ್ತಲೇ ಬಂದವರೆನ್ನುವುದು ತುಂಬಾ ಮುಖ್ಯ. ಇಲ್ಲಿರುವ ತರ್ಕ ತುಂಬಾ ಸರಳ. ಇವರು ವಾಸಿಸುವುದು



ಕಾಡುಗಳಲ್ಲಿ ಅಥವಾ ನಿರ್ದಿಷ್ಟ ಸ್ಥಳವೇ ಇರದ ಅಲೆಮಾರಿಗಳು. ಬ್ರಿಟಿಷರ ಪ್ರಕಾರ, ಕೇವಲ ಕ್ರಿಮಿನಲ್‌ಗಳು ಮಾತ್ರ ಹೀಗೆ ಕಾಡುಗಳಲ್ಲಿ ತಲೆಮರೆಸಿಕೊಂಡಿರುತ್ತಾರೆ ಮತ್ತು ಒಂದುಕಡೆ ನೆಲೆನಿಲ್ಲದೆ ಅಲೆದಾಡುತ್ತಿರುತ್ತಾರೆ. ಭಾರತೀಯರು ಜಾತಿಪದ್ಧತಿಯನ್ನು ಆಳವಾಗಿ ನಂಬುವುದರಿಂದ, ಈ ನಿಗೂಢ (ಬ್ರಿಟಿಷರ ಪಾಲಿಗೆ) ಜನರು ಸಹ ಜನ್ಮಜಾತ ಅಪರಾಧಿಗಳೇ ಆಗಿದ್ದರು. ಹಾಗಾಗಿ ಈ ಕಾಯ್ದೆಯ ಮೂಲಕ ಇತಿಹಾಸದ ಅತಿಘೋರ ಅಪರಾಧವನ್ನು ಆನುವಂಶಿಕ ಚಿರಸ್ಥಾಯಿಗೊಳಿಸಲಾಗಿತ್ತು.

1871ರಿಂದ 1944ರವರೆಗೆ ಈ ಕಾಯ್ದೆಯನ್ನು ಹಲವು ಬಾರಿ ತಿದ್ದುಪಡಿ ಮಾಡಿ ಹೊಸಹೊಸ ಸಮುದಾಯಗಳನ್ನು ಈ ಪಟ್ಟಿಗೆ ಸೇರಿಸುತ್ತಾ ಬರಲಾಯ್ತು. ರೈಲ್ವೆ, ರಸ್ತೆಗಳ ನಿರ್ಮಾಣದ ನಂತರ ಸಂಚಾರೀ ವ್ಯಾಪಾರಿಗಳು ತಮ್ಮ ಜೀವನಾಧಾರವನ್ನು ಕಳೆದುಕೊಂಡರು. 1952ರಲ್ಲಿ ಭಾರತ ಸರ್ಕಾರ ಅಧಿಕೃತವಾಗಿ ಕಳಂಕಿತ ಸಮುದಾಯಗಳಿಗೆ ಆ ಕಾಯ್ದೆಯಿಂದ ಮುಕ್ತಿನೀಡಿ 'ಅನುಸೂಚಿತ' (ಡೀನೋಟಿಫೈಡ್) ಬುಡಕಟ್ಟುಗಳನ್ನಾಗಿ ಗುರುತಿಸಿತಾದರು ಆ ಕರಾಳ ಕಾಯ್ದೆಯಿಂದ ಅವರು ಕಳೆದುಕೊಂಡಿದ್ದ ಬದುಕುಗಳಿಗೆ ಪರ್ಯಾಯ ವ್ಯವಸ್ಥೆಗೆ ಮುಂದಾಗಲೇ ಇಲ್ಲ.

1959ರಲ್ಲಿ ಭಾರತ ಸರ್ಕಾರ 'Habitual Offender's Act' ಎಂಬ ಕಾಯ್ದೆಯನ್ನು ಜಾರಿಗೆ ತಂದಿತು. ಅದು ಈ ಹಿಂದೆ ಬ್ರಿಟಿಷರು 1871ರಲ್ಲಿ ಜಾರಿಗೆ ತಂದಿದ್ದ ಕ್ರಿಮಿನಲ್ ಟ್ರೈಬ್ ಕಾಯ್ದೆಗಿಂತ ಭಿನ್ನವಾಗೇನೂ ಇರಲಿಲ್ಲ. 1961ರಿಂದ ಭಾರತ ಸರ್ಕಾರವು ರಾಜ್ಯ ಸರ್ಕಾರಗಳ ಮೂಲಕ ರಾಜ್ಯವಾರು 'ಅನುಸೂಚಿತ ಮತ್ತು ಅಲೆಮಾರಿ ಬುಡಕಟ್ಟು'ಗಳನ್ನು ಪಟ್ಟಿಮಾಡುತ್ತಾ ಬರುತ್ತಿದೆ. ಯಾವುದೇ ರಾಜ್ಯದಲ್ಲಿ ನಿಯುಕ್ತಿಗೊಳ್ಳುವ ಪೊಲೀಸ್ ಅಧಿಕಾರಿಗೆ 'ಅನುಸೂಚಿತ' ಯಾರು ಎನ್ನುವುದು ಚೆನ್ನಾಗಿ ತಿಳಿದಿರುತ್ತೆ. 1871ರಲ್ಲೇ ಜನಿಸಿದವರು ಯಾಕೆ ಅನುಸೂಚಿತ ಸಮುದಾಯಗಳು? ಯಾಕೆಂದರೆ, 1871ರಿಂದ 1952ರ ನಡುವೆ ಕೆಲವೊಂದು ಸಮುದಾಯಗಳನ್ನು ಕ್ರಿಮಿನಲ್‌ಗಳು ಎಂದು ಗುರುತಿಸಲಾಗಿತ್ತು. ಸ್ಥಳೀಯ ಜನ ಮತ್ತು ಪೊಲೀಸರು ಈ ಸಮುದಾಯದವರನ್ನು ಬೇಟೆಯ ಮೃಗಗಳಂತೆ ಹಿಡಿದು, ಚಿತ್ರಹಿಂಸೆ ನೀಡಿ ಕೊಂದುಹಾಕುತ್ತಿದ್ದರು. ಸ್ವಾತಂತ್ರ್ಯದ ನಂತರ ಪೊಲೀಸರು ಮತ್ತು ರಾಜಕೀಯ ಹಾಗೂ ರಾಜಕೀಯೇತರ ಶಕ್ತಿಗಳು ಇವರನ್ನು ಅಪರಾಧ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಾ ಬಂದರು. ದರೋಡೆ ಮಾಡುವಂತೆ, ಕಳ್ಳತನ ಮಾಡುವಂತೆ ಅವರ ಮೇಲೆ ಒತ್ತಡದ ಪರಿಸ್ಥಿತಿಗಳನ್ನು ಸೃಷ್ಟಿಸಲಾಯ್ತು. ಪೊಲೀಸರು ಮತ್ತು ಕದ್ದ ಸರಕುಗಳನ್ನು ಕೊಳ್ಳುವವರಿಗೆ ಅವರ ಶ್ರಮ ಸಂದಾಯವಾಗುತ್ತಾ ಬಂತು. ಅವರಿಗೆ ಅಂಟಿದ ಕಳಂಕ ಅವರ ಬದುಕುಗಳಿಗೆ ಶಾಪದಂತೆ ಬಾಧಿಸುತ್ತಾ ಬಂತು. ಭಾರತದಾದ್ಯಂತ ಈ ಅನುಸೂಚಿತ ಸಮುದಾಯಗಳನ್ನು ಜೈಲಿಗಟ್ಟಲಾಯ್ತು, ಸಾರ್ವಜನಿಕವಾಗಿ ಗಲ್ಲಿಗೇರಿಸಲಾಯ್ತು, ಚಿತ್ರಹಿಂಸೆ ನೀಡಿ ಪೊಲೀಸ್ ಲಾಕಪ್‌ಗಳಲ್ಲೇ ಕೊಲೆ ಮಾಡಲಾಯ್ತು. ದೊಡ್ಡ ದುರಂತವೆಂದರೆ ಭಾರತದ ಇತರ ಬುಡಕಟ್ಟುಗಳು ಸಹ ಈ ಅನುಸೂಚಿತ ಬುಡಕಟ್ಟುಗಳನ್ನು ತಮ್ಮ ಬಲಿಪಶು ಮಾಡಿಕೊಳ್ಳುತ್ತಾ ಬಂದರು.

ನನ್ನದು ಪಶ್ಚಿಮ ಬಂಗಾಳ ರಾಜ್ಯ. ಇಲ್ಲಿ ಅಂತಹ ಮೂರು ಬುಡಕಟ್ಟುಗಳಿವೆ. ಅವುಗಳೆಂದರೆ, ಲೋಧಾ, ಕೆರಿಯಾ ಸಾಬರ್ ಮತ್ತು ಧಿಕಾರು. 1977ರಲ್ಲಿ ಎಡಪಕ್ಷಗಳು ಇಲ್ಲಿ ಅಧಿಕಾರಕ್ಕೆ ಬಂದವು. ಅಲ್ಲಿಂದ ಇಲ್ಲಿಯವರೆಗೆ ಎಡಪಕ್ಷವೇ ಇಲ್ಲಿ ಅಧಿಕಾರದಲ್ಲಿದೆ. ಬೇರೆ ರಾಜ್ಯಗಳಲ್ಲಿ ಈ ಅನುಸೂಚಿತ ಬುಡಕಟ್ಟಿಗೆ ಸೇರಿದವರನ್ನು ಸಾಯಿಸುವುದು ಸಾಮಾನ್ಯ. 1979 ರಿಂದ 1982ರ ನಡುವೆ ಅನುಸೂಚಿತ ಲೋಧಾ ಬುಡಕಟ್ಟಿಗೆ ಸೇರಿದ 42 ಜನರನ್ನು ಬಹಿರಂಗವಾಗಿ ಗಲ್ಲಿಗೇರಿಸಲಾಯ್ತು, ಅವರು ಮಾಡಿದ ಅಪರಾಧಕ್ಕಲ್ಲ, ಲೋಧಾ ಬುಡಕಟ್ಟಿನಲ್ಲಿ ಹುಟ್ಟಿದ್ದಕ್ಕಾಗಿ. 1960ರಿಂದ 1998ರ ನಡುವೆ 50 ಖೆರಿಯಾ ಸಾಬರ್ ಬುಡಕಟ್ಟಿಗೆ ಸೇರಿದವರನ್ನು ಪೊಲೀಸರು ಕೊಂದರು ಅಥವಾ ಸಾರ್ವಜನಿಕವಾಗಿ ನೇಣಿಗೆ ಹಾಕಿದರು. ಲೋಧಾಗಳ ಪ್ರಕರಣದಲ್ಲಿ ಪೊಲೀಸರು ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಆದರೆ ಪಶ್ಚಿಮ ಬಂಗಾಳದಲ್ಲಿ ಪರಿಸ್ಥಿತಿ ಕೊಂಚ ಉತ್ತಮ ಎನ್ನಬಹುದು.

ಭಾರತ ಸರ್ಕಾರ 1871ರ ಆ ಕರಾಳ ಕಾಯ್ದೆಯನ್ನು ಈಗಲೂ ಜೀವಂತವಾಗಿಟ್ಟುಕೊಂಡಿರುವುದಕ್ಕೆ ನೂರಾರು ನಿದರ್ಶನಗಳನ್ನು ನೀಡಬಹುದು. ಮಹಾರಾಷ್ಟ್ರದಲ್ಲಿರುವ ಗಿಡಮೂಲಿಕೆ ಔಷಧಗಳನ್ನು ಊರಿಂದ ಊರಿಗೆ ಅಲೆದಾಡಿ ಮಾರಾಟ ಮಾಡುವ ಬುಡಕಟ್ಟು ಸಮುದಾಯವೊಂದು ಒಂದು ಊರಿನಲ್ಲಿ ಉಳಿಯಬೇಕೆಂದರೆ ಪೊಲೀಸರಿಂದ ಅನುಮತಿ ಪತ್ರ ಪಡೆಯಬೇಕಾದ ಪರಿಸ್ಥಿತಿಯನ್ನು ನಾನು ಕಂಡಿದ್ದೇನೆ. ಅದೂ ಅವರು ಆ ಊರಿನಲ್ಲಿ ಗರಿಷ್ಠ ನಾಲ್ಕು ದಿನ ಉಳಿಯಬಹುದಷ್ಟೆ. ಅದಕ್ಕಿಂತ ಹೆಚ್ಚು ಅವಕಾಶವನ್ನು ಪೊಲೀಸರು ನೀಡುವುದೇ ಇಲ್ಲ. ಆರು ವರ್ಷಗಳ ಹಿಂದೆ 'ಅನುಸೂಚಿತ' ಬುಡಕಟ್ಟು ಪಂಗಡವಾದ ಸಾಂಸಿ ಸಮುದಾಯದ ಒಂದಷ್ಟು ಮಹಿಳೆಯರನ್ನು ಪೊಲೀಸರು ಬಂಧಿಸಿ, ಅವರ ಹಣೆಯ ಮೇಲೆ ಕಾದ ಸಲಾಕೆಯಿಂದ 'ಕಳ್ಳರು' ಎಂದು ಬರೆಸಿದ್ದರು. ತೀರಾ ಹಿಂದಲ್ಲ, 1998ರ ಅಕ್ಟೋಬರ್‌ನಲ್ಲಷ್ಟೇ ಟಿವಿ ಚಾನೆಲ್‌ವೊಂದು ಮುಂಬೈ ನಗರಿಯ ಬೀದಿಯ ಮೇಲೆ ಅಲೆದಾಡುತ್ತಿದ್ದ ಅನುಸೂಚಿತ ಬುಡಕಟ್ಟು ಸಮುದಾಯಕ್ಕೆ ಸೇರಿದ ಪರ್ದಿ ಸಮುದಾಯದ ಹುಡುಗರ ಕುರಿತು ಒಂದು ಕಾರ್ಯಕ್ರಮ ಮಾಡಿತ್ತು. ಆ ಕಾರ್ಯಕ್ರಮದಲ್ಲಿ ನಿರೂಪಕ 'ಅವರನ್ನು ನೋಡಿ, ಅಮಾಯಕರಂತೆ ಕಾಣುತ್ತಾರೆ. ಆದರೆ ಅವರು ಪರ್ದಿಗಳು. ಹುಟ್ಟು ಕ್ರಿಮಿನಲ್'ಗಳು ಅಂತ ಉಲ್ಲೇಖಿಸಿದ್ದು ಪ್ರಸ್ತುತ ಪರಿಸ್ಥಿತಿಗೆ ಹಿಡಿದ ಕೈಗನ್ನಡಿ.

ಪಶ್ಚಿಮ ಬಂಗಾಳದ ಇಂತಹ ಅನುಸೂಚಿತ ಬುಡಕಟ್ಟುಗಳ ಪರವಾಗಿ ಕಳೆದ 15 ವರ್ಷಗಳಿಂದ ನಾನು ಹೋರಾಟ ಮಾಡಿಕೊಂಡು ಬಂದಿದ್ದೇನೆ. ನಾನು ಸಾಕಷ್ಟು ಬರೆದಿದ್ದೇನೆ, ಅಧಿಕಾರಿಗಳ ಜೊತೆ ಸಂಘರ್ಷ ನಡೆಸಿದ್ದೇನೆ. ಭಾರತ ಜನಸಮೂಹದ ಒಂದು ಭಾಗವನ್ನು ಹುಟ್ಟು ಅಪರಾಧಿಗಳು ಅಂತ ವರ್ಗೀಕರಿಸುವ ಕ್ಷಮಾರಹಿತ ಪಾಪವನ್ನು ನಾವು ಪಾಲಿಸಿಕೊಂಡು ಬಂದಿದ್ದೇವೆ ಎಂಬ ಅರಿವು ಜನರಲ್ಲಿ ಮೂಡಲಿ ಎನ್ನುವುದಷ್ಟೇ ನನ್ನ ಉದ್ದೇಶ. ಆದರೆ ಕೆಲವರು ಮಾತ್ರ ಬುಡಕಟ್ಟುಗಳನ್ನು ಅರ್ಥಮಾಡಿಕೊಂಡಿದ್ದಾರೆ, 'ಅನುಸೂಚಿತ ಬುಡಕಟ್ಟು' ಎಂಬ ಪದವನ್ನು ಅರ್ಥಮಾಡಿಕೊಂಡವರ ಸಂಖ್ಯೆ ಇನ್ನೂ ವಿರಳ. ಇವತ್ತಿಗೂ ದೆಹಲಿಯಲ್ಲಿರುವ ಯಾರನ್ನೇ ಆಗಲಿ 'ಇಲ್ಲಿರುವ ಅತಿಕೆಟ್ಟ ಅಪರಾಧಿಗಳು ಯಾರು?' ಅನ್ನೋ ಪ್ರಶ್ನೆ ಕೇಳಿದರೆ, ಅವರು 'ಖಂಡಿತವಾಗಿಯೂ ಸಾಂಸಿಗಳು ಮತ್ತು ಬಾಓರಿಗಳು' ಅಂತಲೇ ಉತ್ತರಿಸುತ್ತಾರೆ. ಪ್ರತಿ ರಾಜ್ಯವೂ ಇಂತಹ ಒಂದಷ್ಟು ಸಮುದಾಯಗಳನ್ನು ತನ್ನ ಉತ್ತರವಾಗಿ ಸಿದ್ಧವಾಗಿಟ್ಟುಕೊಂಡಿದೆ.

ನೂರಾರು ಬುಡಕಟ್ಟುಗಳನ್ನು ಹುಟ್ಟು ಅಪರಾಧಿಗಳು ಎಂದು ಪರಿಗಣಿಸುವ ಮೂಲಕ ಭಾರತ ಈಗಲೂ ತನ್ನ ವಸಾಹತು ಅಸ್ತಿತ್ವವನ್ನು ಉಳಿಸಿಕೊಂಡೇ ಬಂದಿದೆ. ಸ್ವಾತಂತ್ರ್ಯ ಬಂದಾಗ, ಪಶ್ಚಿಮ ಬಂಗಾಳ ಮತ್ತು ಕೇರಳ ಎರಡು ರಾಜ್ಯಗಳಲ್ಲಿ ಮಾತ್ರ ಭೂಸುಧಾರಣೆಗಳು ಅನುಷ್ಠಾನಕ್ಕೆ ಬಂದಿದ್ದವು. ಭಾರತದ ಇನ್ನುಳಿದ ಭಾಗದಲ್ಲಿ ಉಳಿಗಮಾನ್ಯ ಪದ್ಧತಿಯೇ ಉಳಿದುಕೊಂಡಿತ್ತು. ಉಳಿಗಮಾನ್ಯ ಪದ್ಧತಿಯು ಪಾಳೇಗಾರಿಕೆ ಮೌಲ್ಯಗಳ ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತದೆ. ಭಾರತದ ಉಳಿಗಮಾನ್ಯರು ಬ್ರಿಟಿಷ್ ಅಧಿಪತ್ಯಕ್ಕೆ ತುಂಬಾ ನಿಷ್ಠರಾಗಿದ್ದಂತವರು. ವಸಾಹತು ಅಸ್ತಿತ್ವಕ್ಕೆ ನಿಷ್ಠೆ ಈಗಲೂ ಉಳಿದುಕೊಂಡಿದೆ.

ಆ ಕಾರಣಕ್ಕೇ ಇಂತಹ ಅನುಸೂಚಿತ ಬುಡಕಟ್ಟುಗಳು ಇವತ್ತಿಗೂ ಮರಣದಂಡನೆ ಭೀತಿಯಲ್ಲೇ ದಿನದೂಡುತ್ತಿವೆ. ಅನಾದಿ ಭಾರತದಲ್ಲಿ ಕೇವಲ ಮೇಲ್ಜಾತಿಯವರು ಮಾತ್ರ ಶಿಕ್ಷಣ ಪಡೆಯಲು ಅರ್ಹರಾಗಿದ್ದರು. ಕೆಳಜಾತಿಯವರು ಊರಿನಿಂದ ಹೊರಗೆ ಬದುಕಬೇಕಾಗಿತ್ತು. ಆದರೆ ಈ ಅನುಸೂಚಿ ಬುಡಕಟ್ಟುಗಳು ಕೇವಲ ಊರಿನಿಂದ ಹೊರಗಲ್ಲ, ಸಮಾಜದಿಂದಲೇ ಹೊರಗೆ ಬದುಕಬೇಕಾಗಿತ್ತು. ಅವರಿಗೆ ಯಾವ ಹಕ್ಕುಗಳೂ ಇರಲಿಲ್ಲ. ನನ್ನ ಬರವಣಿಗೆಯ ಉದ್ದೇಶವೇ ಭಾರತದಲ್ಲಿ ಇವತ್ತಿಗೂ ಕೋಟ್ಯಂತರ ಜನರನ್ನು ಜನ್ಮಜಾತ ಅಪರಾಧಿಗಳನ್ನಾಗಿ ನೋಡುವ ಕೆಟ್ಟ ಆಚರಣೆ ಉಳಿದುಕೊಂಡಿದೆ ಅನ್ನೋದನ್ನು ಜಗತ್ತಿಗೆ ಸಾರಿ ಹೇಳುವುದೇ ಆಗಿದೆ. ಕಳೆದ ಶತಮಾನದ ಅಂತ್ಯದವರೆಗೂ ಅವರಿಗೆ ಎಲ್ಲಾ ಮಾನವಹಕ್ಕುಗಳನ್ನು ಸಂಪೂರ್ಣವಾಗಿ ನಿರಾಕರಿಸಲಾಗಿದೆ.

■ ಕನ್ನಡಕ್ಕೆ: ಗಿರೀಶ್ ತಾಳಿಕಟ್ಟೆ

ಬೆಜವಾಡ ವಿಲ್ಸನ್: ಸಫಾಯಿ ಕರ್ಮಚಾರಿಗಳ ಹೋರಾಟಗಾ


ಕೋಲಾರದ ಚಿನ್ನದನಾಡಿನ ಸಫಾಯಿ ಕರ್ಮಚಾರಿಗಳ ಹೋರಾಟಗಾರ ಬೆಜವಾಡ ವಿಲ್ಸನ್ ಅವರಿಗೆ ಪ್ರತಿಷ್ಠಿತ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ ದೊರೆತಿದೆ. ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಮಾನವರ ಮಲವನ್ನು ಕೈಗಳಿಂದ ಎತ್ತಿ ಶುಚಿಗೊಳಿಸುವ ಸಫಾಯಿ ಕರ್ಮಚಾರಿಗಳ ಕುರಿತು ಯಾವುದೇ ಅಧ್ಯಯನ ಬೆಜವಾಡ ವಿಲ್ಸನ್‌ರವರ ಹೋರಾಟವನ್ನು ಹೊರತುಪಡಿಸಿ ಪೂರ್ಣವಾಗಲಾರದು. ಐವತ್ತರ ಪ್ರಾಯದ ವಿಲ್ಸನ್ ಸಫಾಯಿ ಕರ್ಮಚಾರಿಗಳ ಆಂದೋಲನದ ಅಗ್ರನಾಯಕ. ಪ್ರಕಾಶಂ ಜಿಲ್ಲೆಯ ಬಡ ದಲಿತ ಕುಟುಂಬದಲ್ಲಿ 1966ರಲ್ಲಿ ಹುಟ್ಟಿದ ಬೆಜವಾಡ ವಿಲ್ಸನ್‌ರ ತಂದೆ-ತಾಯಿ ಸುಮಾರು 50-60 ವರ್ಷಗಳ ಹಿಂದೆ ಕೆಲಸ ಹುಡುಕಿಕೊಂಡು 'ಕೋಲಾರ್ ಗೋಲ್ಡ್ ಫೀಲ್ಡ್'(ಕೆಜಿಎಫ್)ಗೆ ಬಂದರು. ಇವರ ತಂದೆ ಜೇಕಬ್ 1935ರಲ್ಲಿ ಕೆಜಿಎಫ್‌ನಲ್ಲಿ ಕಸಗುಡಿಸುವ ಜವಾನನ ಕೆಲಸಕ್ಕೆ ಸೇರಿದರು. ಕಸಗುಡಿಸುವ ಕೆಲಸವೆಂದರೆ ಕೆಜಿಎಫ್‌ನ ಪಾಯಿಖಾನೆ-ಶೌಚಾಲಯಗಳಲ್ಲಿ ತಲೆ ಮೇಲೆ ಮಲ ಹೊತ್ತು ಶುಚಿಗೊಳಿಸುವ ಕೆಲಸ ಅದು. ಆಗ ಒಳಚರಂಡಿ ವ್ಯವಸ್ಥೆ ಇರಲಿಲ್ಲ, 1975ರಲ್ಲಿ ಸ್ಕಾವೆಂಜರ್ ಹುದ್ದೆಯಿಂದ ತಂದೆ ನಿವೃತ್ತರಾದರು. ವಿಲ್ಸನ್ನನ ಒಬ್ಬ ಹಿರಿಯ ಅಣ್ಣ ಭಾರತೀಯ ರೈಲ್ವೆಯಲ್ಲಿ ಇದೇ ಮಲ ಶುಚಿಗೊಳಿಸುವ ಕೆಲಸಕ್ಕೆ ಸೇರಿದ. ಇನ್ನೊಬ್ಬ ಅಣ್ಣ ಈ ಕೆಲಸ ಮಾಡೆನೆಂದು ಹಟವಿಡಿದು ಗಣಿ ಕಾರ್ಮಿಕನಾಗಿ ಸೇರಿಕೊಂಡನು.

ಶಾಲೆಗೆ ಹೋಗಿ ಅ, ಆ, ಇ, ಈ ಅಕ್ಷರ ಕಲಿಯುವ ಮೊದಲೇ ತಂದೆಯ ಪಕ್ಕದಲ್ಲಿ ಕುಳಿತು ಬೈಬಲ್ ಓದಿಸಿಕೊಳ್ಳುತ್ತಾ ಅದರೊಳಗಿನ ಅಕ್ಷರಗಳನ್ನು ಗುರುತಿಸಲು ಪ್ರಾರಂಭಿಸಿ ಮನೆಯಲ್ಲಿಯೇ ಅಕ್ಷರಾಭ್ಯಾಸ ಮಾಡಿದವರು ವಿಲ್ಸನ್. ಕೆಜಿಎಫ್, ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ ರಾಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ವಿಲ್ಸನ್ ಬೆಂಗಳೂರಿನ 'ಯುನೈಟೆಡ್ ಥಿಯಾಲಾಜಿಕಲ್ ಕಾಲೇಜ್'ನಲ್ಲಿ 'ಬ್ಯಾಚ್‌ಲರ್ ಆಫ್ ಡಿವಿನಿಟಿ' ಪದವಿ ಪಡೆದರು. ಆನಂತರ ತಮ್ಮ ವಿದ್ವತ್ ಪ್ರತಿಭೆಯನ್ನು ಸಫಾಯಿ ಕರ್ಮಚಾರಿಗಳ ಆಂದೋಲನದಲ್ಲಿ ವಿನಿಯೋಗಿಸತೊಡಗಿದರು.

ಕೆಜಿಎಫ್‌ನಲ್ಲಿರುವ ತಮಿಳು ದಲಿತರು ಮಲ ಹೊರುವ ಕೆಲಸ ಮಾಡುತ್ತಿರಲಿಲ್ಲ, ಅವರೆಲ್ಲರೂ ಬಹುಪಾಲು ಗಣಿಕಾರ್ಮಿಕರಾಗಿದ್ದರು. ಆದರೆ ಆಂಧ್ರದಿಂದ ವಲಸೆ ಬಂದ ತೆಲುಗು ದಲಿತ ಕುಟುಂಬಗಳ ಮಾದಿಗ ಜಾತಿಯವರು ಮಾತ್ರ ಈ ಮಲಿನ ಕೆಲಸ ಮಾಡುತ್ತಿದ್ದರು. ಆದ್ದರಿಂದ ವಿಲ್ಸನ್ ಶಾಲೆಯಲ್ಲಿ, ಬೀದಿಯಲ್ಲಿ, ಕುಳಿತಲ್ಲಿ, ನಿಂತಲ್ಲಿ ಆಟವಾಡುವಲ್ಲಿ ಎಲ್ಲೆಂದರಲ್ಲಿ 'ತೊಟ್ಟಿವಾಳ್ಳು, ಪಿಟ್ಟುವಾರ್ಳು ಪಿಯ್ಯಾರ್ಳು' ಎಂಬ ಅವಹೇಳನಕಾರಿ ಮಾತುಗಳಿಂದ ಅವಮಾನಕ್ಕೊಳಗಾಗುತ್ತಿದ್ದರು.

1870ರಲ್ಲಿ ಬ್ರಿಟಿಷ್ ಸರ್ಕಾರವು ಕರ್ನಾಟಕದ ಕೋಲಾರದಲ್ಲಿ ಬಂಗಾರದ ಗಣಿಗಾರಿಕೆಯನ್ನು ಪ್ರಾರಂಭಿಸಿದ ಬಳಿಕ ಎಪ್ಪತ್ತಾರು ಸಾವಿರ ಜನ ನೌಕರಿ ಹಿಡಿದು ಕೋಲಾರವು ಅತಿದೊಡ್ಡ ಉದ್ಯಮವಲಯವಾಯಿತು. ಇಂತಹ ಕೆಜಿಎಫ್‌ನಲ್ಲಿ 1990ರವರೆಗೂ 'ಡ್ರೈ ಲೆಟ್ರೀನ್' ಶೌಚಾಲಯ ವ್ಯವಸ್ಥೆ ಇತ್ತು, ಡ್ರೈ ಲೆಟ್ರೀನ್ (ಒಣಶೌಚಾಲಯ) ಎಂದರೆ ಮನುಷ್ಯನು ಸ್ವಯಂ ತನ್ನ ಕೈಗಳಿಂದ ಮಲವನ್ನು ಬಳಿದು ಹಾಕುವ ತೆರೆದ ಶೌಚಾಲಯ. 1870ರಲ್ಲಿ ಎಪ್ಪತ್ತಾರು ಸಾವಿರವಿದ್ದ ಗಣಿಕಾರ್ಮಿಕ ಕುಟುಂಬದ ಜನಸಂಖ್ಯೆ ವಿಲ್ಸನ್ ಹುಟ್ಟಿದ ಕಾಲದಲ್ಲಿ ಎರಡು ಲಕ್ಷ ಮೀರಿತ್ತು, ಅಲ್ಲಿ ಬ್ರಿಟಿಷರು ಗಣಿಕಾರ್ಮಿಕರ ಕುಟುಂಬಗಳಿಗಾಗಿ ಇನ್ನೂರ ಎಪ್ಪತ್ತು ಸಾಮೂಹಿಕ ಡ್ರೈ ಲೆಟ್ರಿನ್‌ಗಳನ್ನು ನಿರ್ಮಿಸಿದ್ದರು. ಅವುಗಳನ್ನು ಆಂಧ್ರದ ತೆಲುಗು ಮಾದಿಗರು ಶುಚಿಗೊಳಿಸುತ್ತಿದ್ದರು. ಏಷ್ಯಾ ಖಂಡದಲ್ಲಿಯೇ ಮೊಟ್ಟ ಮೊದಲಿಗೆ ವಿದ್ಯುತ್ ಸರಬರಾಜು ಅನುಕೂಲ ಪಡೆದ ಈ ಪ್ರಾಂತ್ಯದಲ್ಲಿ ಪಾಯಿಖಾನೆಗಳು ಮಾತ್ರ ತೀರಾ ನಿನ್ನೆಮೊನ್ನೆಯವರೆಗೂ ಡ್ರೈ ಲೆಟ್ರಿನ್‌ಗಳೇ ಆಗಿದ್ದವು. ಹೀಗಿರಲು ಪ್ರಜ್ಞಾವಂತ ವಿದ್ಯಾರ್ಥಿಯಾಗಿ ಅಂಬೇಡ್ಕರ್ ಅವರ ಚಿಂತನೆಗಳನ್ನು ಓದಿಕೊಂಡಿದ್ದ ವಿಲ್ಸನ್, ಕೆಜಿಎಫ್‌ನ ದಲಿತರು ತಲೆ ಮೇಲೆ ಮಲ ಹೊರುತ್ತಿದ್ದ ಅನಿಷ್ಟ ಪದ್ಧತಿಯನ್ನು ನಿಷೇಧಿಸಬೇಕೆಂದು ಆಗ್ರಹಿಸಿ 1986ರಲ್ಲಿ ಭಾರತದ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಹೋರಾಟದ ಬದುಕನ್ನು ಪ್ರಾರಂಭಿಸಿದರು.

ಆಗ ಕೆಜಿಎಫ್ ಮಾತ್ರವಲ್ಲದೆ ಇಡೀ ದೇಶಾದ್ಯಂತ ಎರಡು ಕೈಗಳಲ್ಲಿ ಕಬ್ಬಿಣದ ಎರಡು ರೇಕುಗಳನ್ನು ಹಿಡಿದು ಮಲವನ್ನು ಗೋರಿಕೊಂಡು ಬುಟ್ಟಿಯೊಳಕ್ಕೆ ಹಾಕಿ, ತಲೆ ಮೇಲೆ ಟ್ರಾಕ್ಟರ್‌ಗಳಿಗೆ ಹೊತ್ತೊಯ್ಯುವ ವ್ಯವಸ್ಥೆ ಇತ್ತು. ಪೌರಕಾರ್ಮಿಕರು ಕನಿಷ್ಠ ಮಾನವ ಘನತೆಯ ಬದುಕಿನಿಂದಲೂ ವಂಚಿತರಾಗಿ ಅತ್ಯಂತ ಹೀನ ಮತ್ತು ಅಮಾನವೀಯ ಪದ್ಧತಿಯಲ್ಲಿ ಸಿಲುಕಿದ್ದರು. ಕರ್ನಾಟಕದಲ್ಲಿ ದೇವರಾಜ ಅರಸು ನೇತೃತ್ವದ ಕಾಂಗ್ರೆಸ್ ಸರ್ಕಾರದ ಮಂತ್ರಿಮಂಡಲದಲ್ಲಿ ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪನವರು ಪೌರಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳನ್ನು ಅಭ್ಯಾಸಮಾಡಿ, ತಲೆಯ ಮೇಲೆ



ಮಲಹೊರುವ ಅತ್ಯಂತ ಅಮಾನವೀಯ ಪದ್ಧತಿಯನ್ನು ಕಾನೂನಾತ್ಮಕವಾಗಿಯೇ ನಿಷೇಧಿಸಬೇಕೆಂದು ಸದನದ ಕಲಾಪಗಳಲ್ಲಿ ಪ್ರಸ್ತಾಪಿಸುತ್ತಾ ಈ ಪ್ರಶ್ನೆಯನ್ನು ಚರ್ಚೆಗೊಳಪಡಿಸುತ್ತಿದ್ದರು. ಕೇಂದ್ರ ಸರ್ಕಾರದ ಮೇಲೆ ತೀವ್ರ ಒತ್ತಾಯವನ್ನೂ ತಂದರು. ಅವರು ತೋರಿದ ರಾಜಕೀಯ ಇಚ್ಛಾಶಕ್ತಿಯಿಂದಾಗಿ ರಾಷ್ಟ್ರಮಟ್ಟದಲ್ಲಿ ಮಲ ಹೊರುವ ನೀಚ ಪದ್ಧತಿಯನ್ನು ತೊಲಗಿಸಲು ಸಂಸತ್ತಿನಲ್ಲಿ ವಿಧೇಯಕವೊಂದನ್ನು ಅಂಗೀಕರಿಸಲಾಯಿತು. 1993ರಲ್ಲಿ ಕೇಂದ್ರ ಸರ್ಕಾರ ಕಾಯ್ದೆ ರೂಪಿಸಿ ಮಲವನ್ನು ಕೈಗಳಿಂದ ಬಳಿದು ಶುಚಿಮಾಡುವ ಹೀನ ಪದ್ಧತಿಯನ್ನು ನಿಷೇಧಿಸಿತು. ಇದು ಕಾನೂನು ಪುಸ್ತಕದ ಪುಟಗಳಲ್ಲಿ ದಾಖಲಾಯಿತೇ ಹೊರತು ಕಾನೂನಿನ ಸಾಮಾಜಿಕ ಅನ್ವಯತೆ ಸಾಧ್ಯವಾಗಲೇ ಇಲ್ಲ. ಇಂತಹ ವಿಷಮ ಕಾಲದಲ್ಲಿ ಸಫಾಯಿ ಕರ್ಮಚಾರಿಗಳ ವಿಮೋಚನಾ ಆಂದೋಲನವನ್ನು ಪ್ರಾರಂಭಿಸಿದವರು ವಿಲ್ಸನ್.

ಮೊದಲಿಗೆ ಕೋಲಾರದ ಕೆಜಿಎಫ್‌ನಿಂದ ಆರಂಭಿಸಲಾದ ಹೋರಾಟವನ್ನು ಕರ್ನಾಟಕ ರಾಜ್ಯಾದ್ಯಂತ ವಿಸ್ತರಿಸಲು ಬಯಸಿದರು. 'ಸಫಾಯಿ ಕರ್ಮಚಾರಿ ಆಂದೋಲನ್'ವನ್ನು ತೀವ್ರಗೊಳಿಸಿದರು. 1994-95ರಲ್ಲಿ ಬೆಂಗಳೂರಿನ ವೈಎಂಸಿಎನಲ್ಲಿ ಕೆಲಸ ನಿರ್ವಹಿಸಿದ ವಿಲ್ಸನ್, ಕರ್ನಾಟಕದ ದಲಿತರ ನಡುವೆ ಜನಪರ ಚಳವಳಿಗಳಲ್ಲಿ ಪಾಲ್ಗೊಳ್ಳುತ್ತಲೇ ಮಲಹೊರುವ ಭಂಗಿಗಳು ಎಲ್ಲೆಲ್ಲಿ ಇರುವರೆಂದು ಗುರುತಿಸತೊಡಗಿದರು. ಕರ್ನಾಟಕದ ಎಲ್ಲಾ ಜಿಲ್ಲೆಗಳನ್ನು ಹಗಲಿರುಳು ಸುತ್ತಾಡಿ ರಾಜ್ಯವ್ಯಾಪಿ ಪೌರಕಾರ್ಮಿಕರನ್ನು ಸಂಘಟಿಸಿದ್ದರು. ತೆರೆದ ಒಣ ಪಾಯಿಖಾನೆ-ಶೌಚಾಲಯಗಳ ಬದಲಿಗೆ ಒಳಚರಂಡಿ ವ್ಯವಸ್ಥೆಯುಳ್ಳ ಹೊಸ ಶೌಚಾಲಯ ಗಳನ್ನು ಸ್ಥಾಪಿಸುವ ಹಾಗೂ ಸಫಾಯಿ ಕರ್ಮಚಾರಿಗಳ ಶಿಕ್ಷಣ ಮತ್ತು ಪುನರ್ವಸತಿಗಾಗಿ ಆಗ್ರಹಿಸಿ ತಮ್ಮ ಹೋರಾಟವನ್ನು ಮುನ್ನಡೆಸುವ ದಾರಿಯಲ್ಲಿ ಆಂಧ್ರಪ್ರದೇಶದ ಪಾಲ್ ದಿವಾಕರ್, ನಿವೃತ್ತ ಐಎಎಸ್ ಅಧಿಕಾರಿ ಎಸ್.ಆರ್.ಶಂಕರನ್ ಮುಂತಾದವರೊಂದಿಗೆ ಸಮಾಲೋಚಿಸಿದ ವಿಲ್ಸನ್ 1996ರಲ್ಲಿ 'ಸಫಾಯಿ ಕರ್ಮಚಾರಿ ಆಂದೋಲನ್' ಸಂಸ್ಥೆಯನ್ನು ಪ್ರಾರಂಭಿಸಿದರು. ಆ ಬಳಿಕ ಜಾಗೃತಗೊಂಡ ಪೌರಕಾರ್ಮಿಕರ ಸಾವಿರಾರು ಯುವಕ- ಯುವತಿಯರು ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬಂತೆ ಹರಿದುಬಂದರು. ಕರ್ನಾಟಕದ ಗಡಿಯನ್ನು ದಾಟಿ ಹೊರ ರಾಜ್ಯಗಳಿಗೂ ಹಬ್ಬಿ ದೇಶವ್ಯಾಪಿಯಾಗಿ ಈ ವಿಮೋಚನಾ ಹೋರಾಟ ವಿಸ್ತರಿಸಲ್ಪಟ್ಟಿತು. ಇಂದು ಸಫಾಯಿ ಕರ್ಮಚಾರಿಗಳ ಪಾಲಿನ ರಾಷ್ಟ್ರೀಯ ಮಟ್ಟದ ಅಗ್ರ ಸಾಮಾಜಿಕ ಹೋರಾಟಗಾರನಾಗಿ ವಿಲ್ಸನ್ ಗುರುತಿಸಿಕೊಂಡಿದ್ದಾರೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳನ್ನು ಅರಿಯಲು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಸ್ವತಂತ್ರ ಸಮಿತಿ ಮತ್ತು ಆಯೋಗಗಳನ್ನು ನೇಮಿಸಿದವು. 1949ರಲ್ಲಿ ಬೊಂಬಾಯಿ ಸರ್ಕಾರವು ಬಾರ್ವೆ ನೇತೃತ್ವದಲ್ಲಿ 'ಸಫಾಯಿ ಕರ್ಮಚಾರಿಗಳ ಜೀವನ ಪರಿಸ್ಥಿತಿ ನಿವಾರಣಾ ಸಮಿತಿ'ಯನ್ನು ನೇಮಿಸಿತು. 1952ರಲ್ಲಿ ಈ ಸಮಿತಿ ತನ್ನ ವರದಿಯನ್ನು ಸಲ್ಲಿಸಿತು. ಬಾರ್ವೆ ಸಮಿತಿಯು ಡ್ರೈ ಲೆಟ್ರಿನ್‌ಗಳ ನಿರ್ವಹಣೆಯ ಕರಾಳಸ್ವರೂಪವನ್ನು ಕುರಿತು ವಿವರಿಸಿತು. ಮಾತ್ರವಲ್ಲದೆ ಸಫಾಯಿ ಕರ್ಮಚಾರಿಗಳ ಬದುಕಿನ ಸ್ವರೂಪವನ್ನೂ ತೆರೆದಿಟ್ಟಿತು. ಕೇಂದ್ರ ಸರ್ಕಾರದ ಗೃಹ ಸಚಿವಾಲಯ ಶಾಖೆಯು 1956ರಲ್ಲಿ ರೂಪಿಸಿದ ಹರಿಜನ ಸಂಕ್ಷೇಮ ಕೇಂದ್ರ ಸಲಹಾ ಮಂಡಲಿಯು 1957ರಲ್ಲಿ ಪ್ರೊ.ಎನ್.ಆರ್. ಮಲ್ಕಾನಿ ಸಮಿತಿಯನ್ನು ನೇಮಿಸಿತು. Scavengers' Conditions Enquiry Committee ಎಂದು ಕರೆಯಲಾದ ಈ ಸಮಿತಿ 1960ರಲ್ಲಿ ತನ್ನ ವರದಿಯನ್ನು ಮಂಡಿಸಿತು. ಕೇಂದ್ರ ಸಾಂಘಿಕ ಸಂಕ್ಷೇಮ ಶಾಖೆಯು ಮತ್ತೊಮ್ಮೆ ಪ್ರೊ. ಎನ್.ಆರ್. ಮಲ್ಕಾನಿಯವರ ಅಧ್ಯಕ್ಷತೆಯಲ್ಲಿ 1965ರಲ್ಲಿ ಎರಡನೇ ಸಮಿತಿಯನ್ನು ನೇಮಿಸಿ ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ಸಮಸ್ಯೆಗಳ ಅಧ್ಯಯನಕ್ಕೆ ಹಚ್ಚಿತು. ಬಿ.ಪಿ.ವಿ. ಸಾಲಪ್ಪನವರ ಅಧ್ಯಕ್ಷ... ಕರ್ನಾಟಕದಲ್ಲಿ "ಜಾಡಮಾಲಿಗಳು-. ಅವರ ... ಪರಿಸ್ಥಿತಿ"ಗೆ ಸಂಬಂಧಿಸಿ ಅಧ್ಯಯನ ಕೈಗೊ... ಸಮಿತಿಯೊಂದನ್ನು ರಚಿಸಿ, ಈ ಸಮಿತಿಯು 19... ತನ್ನ ವರದಿಯನ್ನು ಬಿಡುಗಡೆ ಮಾಡಿತು. ಈ ... ಸಮಿತಿಗಳು ಭಾರತದಲ್ಲಿ ಸಫಾಯಿ ಕರ್ಮಚಾ... ದಯನೀಯ ಪರಿಸ್ಥಿತಿಗಳನ್ನು ಕುರಿತು ವಿವರಿಸುತ್ತ...

'ಭಂಗಿಬಂಧು' ಪತ್ರಿಕೆಯನ್ನು ತಮ್ಮದೇ ಸಂಪಾದ... ಪ್ರಾರಂಭಿಸುವ ಮೂಲಕ ಜಾಡಮಾಲಿಗಳ ಸಾ... ಘನತೆಯನ್ನು ಎತ್ತರಿಸಲು ದುಡಿದ ಸಾಲಪ್ಪನವರು, ... ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸು ... 'ಸ್ವೀಪರ್ಸ್ ಅಂಡ್ ಸ್ಕಾವೆಂಜರ್ಸ್ ಇಂಪ್ರೂವ್‌... ಕಮಿಟಿ'ಯ ಅಧ್ಯಕ್ಷರಾಗಿ ಕರ್ನಾಟಕ ಮಾತ್ರವಲ್ಲದೆ ... ರಾಜ್ಯಗಳಲ್ಲೆಲ್ಲಾ ಸಂಚಾರಮಾಡಿ ಜಾಡಮಾ... ಸಮಾಜೋ-ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾ... 1972 ರಿಂದ 1976ರವರೆಗೆ ನಾಲ್ಕು ವರ್ಷಗಳ... ಪೌರಕಾರ್ಮಿಕರ ಬದುಕನ್ನು ಕುರಿತು ಅಧ್ಯಯನ ... ಸರ್ಕಾರಕ್ಕೆ ವರದಿ ಸಲ್ಲಿಸಿ ವರದಿಯ ಶಿಫಾರಸ್ಸು... ಅನುಷ್ಠಾನಕ್ಕೆ ತರಲು ಒತ್ತಾಯಿಸಿದರು. ಪೌರಕಾ... ಹಕ್ಕು ಮತ್ತು ಸವಲತ್ತುಗಳಿಗಾಗಿ, ಮಕ್ಕಳ ಶಿಕ್ಷ... ಕಾರ್ಮಿಕರ ವೇತನ ಹೆಚ್ಚಳಕ್ಕಾಗಿ ಸಾಲಪ್ಪನವರು ... ಹೋರಾಟ ಅವಿಸ್ಮರಣೀಯ. ಇಷ್ಟೆಲ್ಲಾ ಹೋರಾ... ನಡೆದಿದ್ದರೂ ಸಹ ಇಂದಿಗೂ ಲಕ್ಷಾಂತರ ಪೌರಕಾ... ಗುತ್ತಿಗೆ ಆಧಾರದ ಮೇಲೆ ಕನಿಷ್ಠ ವೇತನಕ್ಕೆ ... ಮಾಡುತ್ತಿದ್ದಾರೆ. ಉದ್ಯೋಗ ಭದ್ರತೆಯಿರದೆ ... ಅಭದ್ರತೆ, ಅನಾರೋಗ್ಯ ಮತ್ತು ಅಸುರಕ್ಷಿತ ... ನಡೆಸುತ್ತಿದ್ದಾರೆ. ಅವರಿಗೆ ಇಂದಿಗೂ ಕನಿಷ್ಠ ... ಘನತೆಯ ಬದುಕನ್ನು, ಮೂಲಸೌಕರ್ಯಗಳುಳ್ಳ ... ನೆಲೆಗಳನ್ನು ಯಾವುದೇ ಸರ್ಕಾರಕ್ಕೆ, ಈ... ಕಟ್ಟಿಕೊಡಲಾಗಿಲ್ಲ.


ಇದಕ್ಕೊಂದು ಜ್ವಲಂತ ನಿದರ್ಶನವೆಂದರೆ ... ಜುಲೈ 20ರಂದು ಹಾವೇರಿ ಜಿಲ್ಲೆ ಸವಣ... ಮುನಿಸಿಪಾಲಿಟಿ ಎದುರು ಮೂವರು ಭಂಗಿಗಳು ಮೈ... ಮಲ ಸುರಿದುಕೊಂಡು ಪ್ರತಿಭಟಿಸಿದ್ದು. ಪ್ರತಿಭಟನೆಯ ಉದ್ದೇಶ ಕಳೆದ 80 ವರ್ಷಗಳಿಂದ ... ತಲೆ ಮೇಲಿದ್ದ ಸೂರನ್ನು ಉಳಿಸಿಕೊಳ್ಳುವುದಾಗಿತ್ತು. ಸ್ವಾತಂತ್ರ್ಯಕ್ಕೆ ಮುನ್ನ ಸವಣೂರಿನ ನವಾಬ ಅ... ಮಜೀದ್ ಖಾನ್ ಭಂಗಿಗಳಿಗೆ ನೀಡಿದ್ದ ಮೂರು ... ಇನಾಮು ಜಮೀನನ್ನು ಇಲ್ಲಿವರೆಗಿನ ಸರ್ಕಾರಗಳು ಭ... ಹೆಸರಿಗೆ ಖಾತೆ ಮಾಡಿಕೊಡದೆ ವಂಚಿಸಿದ್ದವು.

ಕರ್ನಾಟಕ ಸರ್ಕಾರವು ಸುಪ್ರೀಂಕೋರ್ಟ್ ... 'ಕರ್ನಾಟಕದಲ್ಲಿ ಮಲದ ಗುಂಡಿಗಳನ್ನು ಮನುಷ್ಯರು ... ಮಾಡುವ ಪದ್ಧತಿಯನ್ನು ನಿಲ್ಲಿಸಲಾಗಿದೆ' ಎಂದು ಪ್ರ... ಮಾಡಿದ್ದರೂ ಇದು ಅಪ್ಪಟ ಸುಳ್ಳು. ಇವತ್ತಿಗೂ ... ವಿವಿಧ ಕಡೆ ಈ ಅಮಾನುಷ ಪದ್ಧತಿ ಜಾರಿ... ಅಕ್ಟೋಬರ್ 24, 2011ರಂದು ಇದೇ ನಮ್ಮ ... ಕೆಜಿಎಫ್‌ನಲ್ಲಿ ಕಕ್ಕಸ್ಸು ಗುಂಡಿ ಸ್ವಚ್ಛ ಮಾಡುವಾಗ ಮ... ಭಂಗಿಗಳು ಮಲದ ಗುಂಡಿಯಲ್ಲೇ ಸತ್ತರು. ಕರ್ನಾ... ಇಂಥ ನೂರಾರು ಪ್ರಕರಣಗಳು ನಡೆದಿವೆ. ಮ... ಮೇಲೆ ಸಫಾಯಿ ಕರ್ಮಚಾರಿಗಳು ಮ್ಯಾನ್‌ಹೋಲ್... ಶುಚಿಗೊಳಿಸುವಾಗ ಜೀವ ಕಳೆದುಕೊಂಡ ಪ್ರಕರ... ವರದಿಯಾಗುತ್ತಲಿವೆ.

ಸವಣೂರಿನಲ್ಲಿ ಭಂಗಿಗಳು ಮೈಮೇಲೆ ಮಲ ... ಕೊಂಡು ಪ್ರತಿಭಟಿಸಿದ ಮಾದರಿಯ ಹೋರಾ... ಮನುಷ್ಯತ್ವಕ್ಕಾಗಿ, ಮಾನವೀಯತೆಗಾಗಿ ಹಂಬ... ಯಾರೊಬ್ಬರೂ ಒಪ್ಪಲಾರರು. ಯಾಕೆಂದರೆ ಸಾ... ನ್ಯಾಯದ ಹೋರಾಟದ ಪರ್ಯಾಯ ಮಾನ... ಮಾದರಿಗಳನ್ನು ರೂಪಿಸಿರುವ ದಲಿತ ಚಳವಳಿಯ ... ಇದೊಂದು ಅಮಾನವೀಯ ಪ್ರತಿಭಟನಾ ಮ... ಪ್ರತಿಭಟನೆಗಳು ಮಾನವೀಯ ಆರ್ದ್ರ ಭಾವನೆ... ಸ್ಫುರಿಸಬೇಕೇ ಹೊರತು ವಿಕ್ಷಿಪ್ತ ಭಾವನೆಯನ್ನಲ್ಲ. ... ಒಡೆದು ಚೂರಾಗಿ ಲೆಟರ್‌ಹೆಡ್ ಚಳವಳಿಯಾಗಿ ... ತಳೆದ ಬಳಿಕ ಮಾನವೀಯತೆಯ ಮಹಾತಾಯಿಯ... ದಲಿತ ಚಳವಳಿಯಿಂದ ಕಲಿತ ಪೂರ್ವಪಾ... ಮಸಿಬಳಿಯುವಂತಹ ಹೋರಾಟದ ಮಾದರಿಗಳು ... ಸೃಷ್ಟಿಯಾಗುತ್ತಿವೆ. ದಲಿತ ಚಳವಳಿ ಮಾತ್ರವಲ್ಲದೆ ಯ... ಸಾಮಾಜಿಕ ನ್ಯಾಯದ ಚಳವಳಿಗಳು ಪೌರಕಾ... ಬದುಕಿನ ಸುಧಾರಣೆಗಾಗಿ 'ಭಂಗಿಬಂಧು' ಸಾಲಪ್ಪ... ಮತ್ತು ವಿಲ್ಸನ್ ಅವರಂತೆ ದೊಡ್ಡ ಪ್ರವ... ಹೋರಾಟಗಳನ್ನು ರೂಪಿಸಲು ಮುಂದಾಗುತ್ತಿಲ್ಲ. ಸಾ... ಚಳವಳಿಗಳು ಜೋಭದ್ರ ಸ್ಥಿತಿಯಲ್ಲಿ ಜೋಮು ... ಕುಳಿತಿರುವಾಗ ಬೆಜವಾಡ ವಿಲ್ಸನ್‌ರವರಿಗೆ ರೆ... ಮ್ಯಾಗ್ಸೆಸೆ ಪ್ರಶಸ್ತಿ ಒಲಿದುಬಂದಿರುವುದು ಹೆಮ್ಮೆಯ ...

● ಡಾ. ವಡ್ಡಗೆರೆ ನಾಗರಾಜ...

...ಫ್ಯಾಸಿಸಂನ ಹಾದಿಯಲ್ಲಿ ಇನ್ನೂ ಒಂದಷ್ಟು ಹೆಜ್ಜೆಗಳು



"ಎಲ್ಲರ ಜೊತೆ ಎಲ್ಲರ ಅಭಿವೃದ್ಧಿ" ಮಂತ್ರವನ್ನು ...ದೆ ಜಪಿಸುತ್ತಲಿರುವ ಮೋದಿ ಒಳಗಿಂದೊಳಗೆ ...ರ್ಪೋರೇಟುಗಳು, ಧನಿಕರು ಮತ್ತು ಸಂಘ ಪರಿವಾರವನ್ನು ...ಭಿವೃದ್ಧಿಪಡಿಸುತ್ತಿರುವ ಸತ್ಯ ಇಂದು ಬೆಲೆ ಏರಿಕೆಯಿಂದ ...ರಿಸುತ್ತಿರುವ ಮತದಾರರ ಅರಿವಿಗೆ ಬರುತ್ತಿದೆ. ಯುಪಿಎ ...ಕಾರದ ಕಾವಲಿ ಕರ್ರಗಿದೆ ಎಂದು ಬೊಬ್ಬಿರಿಯುತ್ತ ...ಧಿಕಾರಕ್ಕೆ ಬಂದ ಮೋದಿಯ ಎನ್‌ಡಿಎ ಸರ್ಕಾರದ ...ಣಲೆಯೂ ಕಪ್ಪಾಗಿರುವ ಸಂಗತಿ ಬಯಲಾಗತೊಡಗಿದೆ. ...ೋದಿ ಸರ್ಕಾರದ ಭ್ರಷ್ಟಾಚಾರ ಪ್ರಕರಣಗಳು ನಿಧಾನಕ್ಕೆ ...ಂದೊಂದಾಗಿ ಹೊರಬೀಳಲಾರಂಭಿಸಿದ ನಂತರ ಯಾರು ...ಚ್ಚು ಕಪ್ಪು ಎಂಬುದೇ ಚರ್ಚೆಗಳ ವಿಷಯವಾಗಿದೆ!

...ಮ್ಮ ಮೋದಿ ಸರ್ಕಾರದಿಂದ ಮುಕ್ತ ರಹದಾರಿ ...ಡೆದಿರುವ ಸಂಘ ಪರಿವಾರದ ದಾಳಿಕೋರ ಪಡೆಗಳು ...ಲಿತರು, ಅಲ್ಪಸಂಖ್ಯಾತರನ್ನು ಇನ್ನಿಲ್ಲದಂತೆ ...ಗ್ಗುಬಡಿಯತೊಡಗಿರುವ ಸನ್ನಿವೇಶದಲ್ಲಿ ಹಿಂದಿನ ...ಧಾನಿಯನ್ನು ಮೌನಿ ಎಂದು ಹೀಯಾಳಿಸಿದಾತ ಇಂದು ...ನೇ ಮೌನಕ್ಕೆ ಶರಣಾಗಿರುವು ದನ್ನು ಜನ ಗಮನಿಸುತ್ತಾ ...ದ್ದಾರೆ. ಇವೆಲ್ಲದರ ಮಧ್ಯೆ ದೇಶದ ಎಲ್ಲಾ ಸಾಂಸ್ಕೃತಿಕ, ...ಸಾಮಾಜಿಕ ಸಂಸ್ಥೆಗಳನ್ನು ಭಾರಿ ವೇಗದಲ್ಲಿ ...ಕೇಸರೀಕರಣಗೊಳಿಸಲಾಗುತ್ತಿರುವ ವಿಚಾರವೂ ಜನರ ...ಮನಕ್ಕೆ ಬರುತ್ತಿದೆ. ಮೋದಿ ಸರ್ಕಾರದ ಭ್ರಷ್ಟಾಚಾರ, ...ಷ ರಾಜಕಾರಣ, ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ, ...ಭಿನ್ನಾಭಿ ಪ್ರಾಯಗಳ ಹತ್ತಿಕ್ಕುವಿಕೆ ಮತ್ತು ಕೇಸರೀಕರಣದ ...ಇತ್ತೀಚಿನ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ.

ಕಲ್ಲಿದ್ದಲು ಗಣಿಗಳ ಹರಾಜು

ಕಲ್ಲಿದ್ದಲು ಗಣಿಗಳ ಹರಾಜು ಪ್ರಕ್ರಿಯೆಯಲ್ಲಿ ನಡೆದ ...ಭ್ರಷ್ಟಾಚಾರದ ವಿಷಯವನ್ನೆತ್ತಿಕೊಂಡು ಸಂಸತ್ತಿನಲ್ಲಿ ...ಕೋಲಾಹಲ ಸೃಷ್ಟಿಸಿ, ದೇಶಾದ್ಯಂತ ಆಂದೋಲನ ನಡೆಸಿ, ...2014ರ ಚುನಾವಣೆಗಳ ಕಾಲದಲ್ಲಿ ಇದನ್ನು ಮುಖ್ಯ ...ವಿಷಯಗಳಲ್ಲೊಂದಾಗಿಸಿ ಜನರ ವಿಶ್ವಾಸ ಗಳಿಸಿ ...ಅಧಿಕಾರಕ್ಕೆ ಬಂದಿರುವ ಅದೇ ರಾಜಕೀಯ ಪಕ್ಷ ಇಂದು ...ಅಧಿಕಾರದ ರುಚಿ ಹತ್ತಿದ ನಂತರ ತಾನೇ ಸ್ವತಃ ...ಭ್ರಷ್ಟಾಚಾರ, ಸ್ವಜನಪಕ್ಷಪಾತದಲ್ಲಿ ಮುಳುಗೇಳುತ್ತಿರುವುದನ್ನು ...ಮತದಾರರಿಗೆ ಬಗೆದ ದೊಡ್ಡ ದ್ರೋಹವೆನ್ನದೆ ಬೇರೇನೆಂದು ...ಕರೆಯಬೇಕು? ಕಲ್ಲಿದ್ದಲು ದಿಣ್ಣೆಗಳ ಹಂಚುವಿಕೆಯಲ್ಲಿ ...ಭ್ರಷ್ಟಾಚಾರ ನಡೆದಿರುವ ಹಿನ್ನೆಲೆಯಲ್ಲಿ ಸರ್ವೋಚ್ಚ ...ನ್ಯಾಯಾಲಯ 2014ರಲ್ಲಿ 214 ದಿಣ್ಣೆಗಳ ...ಹಂಚುವಿಕೆಯನ್ನು ರದ್ದುಗೊಳಿಸಿತ್ತು, ತದನಂತರ ಮಾರ್ಚ್ ...2015ರಲ್ಲಿ ಮೋದಿ ಸರ್ಕಾರದ ವತಿಯಿಂದ ಪ್ರಪ್ರಥಮ ...ಇ-ಹರಾಜು ಪ್ರಕ್ರಿಯೆ ನಡೆದಿದೆ. ಇದೀಗ ಭಾರತದ ...ಮಹಾಲೆಕ್ಕಪರಿಶೋಧಕರ ವರದಿಯೊಂದು ಆ ಇ-ಹರಾಜು ...ಪ್ರಕ್ರಿಯೆಯಲ್ಲಿ ಅವ್ಯವಹಾರಗಳು ನಡೆದಿರುವ ವಿಷಯವನ್ನು ...ಬಯಲಿಗೆಳೆದಿದೆ. ಮೊದಲ ಎರಡು ಹರಾಜು ಪ್ರಕ್ರಿಯೆಗಳ ...ಲ್ಲಿ 29 ಕಲ್ಲಿದ್ದಲು ಗಣಿಗಳನ್ನು ಹರಾಜು ಹಾಕಲಾಗಿತ್ತು, ...ಅವುಗಳ ಪೈಕಿ 11ರಲ್ಲಿ ಭಾಗವಹಿಸಿದ್ದ ಅನೇಕ ಬಿಡ್ಡರುಗಳು ...ಒಂದೇ ಸಂಸ್ಥೆಗೆ ಸೇರಿದವರಾಗಿದ್ದರೆಂದು ಸಿಎಜಿ ...ಕಂಡುಕೊಂಡಿದೆ. ಇದೇ ಜುಲೈ 26ರಂದು ಸಂಸತ್ತಿನಲ್ಲಿ ...ಮಂಡಿಸಲಾಗಿರುವ ಸದರಿ ಸಿಎಜಿ ವರದಿ "ಆರಂಭದ ...ಎರಡು ಹರಾಜು ಪ್ರಕ್ರಿಯೆಗಳಲ್ಲಿ ಕಾರ್ಪೋರೇಟ್‌ಗಳು ...ತಮ್ಮ ಜಂಟಿ ಉದ್ದಿಮೆಗಳು ಅಥವಾ ತಮ್ಮದೇ ...ಅಂಗಸಂಸ್ಥೆಗಳ ಮೂಲಕ ಒಂದಕ್ಕಿಂತ ಜಾಸ್ತಿ ಬಿಡ್ ...ಮಾಡಿರುವ ಕಾರಣ ಪೈಪೋಟಿ ಇಲ್ಲದಂತಾಗಿರಬಹುದು. ...ಶಾಸಕ ಹರಾಜು ದಾಖಲೆಪತ್ರದಲ್ಲೆ ಜಂಟಿ ಉದ್ದಿಮೆಗಳು ...ಭಾಗವಹಿಸಬಹುದೆಂದು ಹೇಳ ಲಾಗಿದೆ; ಅರ್ಹ ಬಿಡ್ಡುಗಳ ...ಸಂಖ್ಯೆಗೆ ಮಿತಿ ವಿಧಿಸಲಾಗಿದೆ. ಇದನ್ನು ನೋಡಿದಾಗ ...ಪೋಟಿಯ ಪ್ರಚ್ಛನ್ನ ಮಟ್ಟವನ್ನು ಸಾಧಿಸಲಾದ ಬಗ್ಗೆ ...ನಮಗೆ ನಂಬಿಕೆ ಮೂಡಲು ಸಾಧ್ಯವಾಗಿಲ್ಲ" ಎಂದು ...ನಿರ್ವಾಕ್ಯಗಳಲ್ಲಿ ತಿಳಿಸುತ್ತದೆ.

ಎನ್‌ಜಿಒಗಳಿಗೆ ಕಿರುಕುಳ

...ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುವ ತನ್ನ ಫ್ಯಾಸಿಸ್ಟ್ ...ಅಜೆಂಡಾದ ಭಾಗವಾಗಿ ಮೋದಿ ಸರ್ಕಾರ ಗ್ರೀನ್‌ಪೀಸ್, ...ಸಿಪಿ ಮೊದಲಾದ ಅನೇಕ ಎನ್‌ಜಿಒಗಳನ್ನು ...ಆರಂಭದಿಂದಲೂ ಸತಾಯಿಸುತ್ತಿರುವ ಸಂದರ್ಭದಲ್ಲಿ ಆದರ ...ಪಟ್ಟಿ"ಯಲ್ಲಿ ಸಂಘ ಪರಿವಾರದ ಒಂದೇ ಒಂದು ಎನ್‌ಜಿಒ ...ಇಲ್ಲದಿರುವುದು ಗಮನಾರ್ಹವಾಗಿದೆ. ಇದು ಮೋದಿ ...ಸರ್ಕಾರದ ಪಕ್ಷಪಾತೀಯ ಧೋರಣೆ ಮತ್ತು ದ್ವೇಷ ...ರಾಜಕಾರಣಕ್ಕೆ ಪ್ರಬಲ ಸಾಕ್ಷಿಯಾಗಿ ನಿಲ್ಲುತ್ತದೆ. ಈಗ ...ಈ ಕಿರುಕುಳದ ಮುಂದುವರಿದ ಭಾಗವಾಗಿ ಇನ್ನಷ್ಟು ...ಹೊಸ ನಿಯಮಗಳನ್ನು ಜಾರಿಗೆ ತರಲಾಗಿದೆ. ಇತ್ತೀಚಿನ ...ಆದೇಶವೊಂದರಂತೆ ಎಲ್ಲಾ ಎನ್‌ಜಿಒಗಳು ನೀತಿ ...ಆಯೋಗದೊಂದಿಗೆ ನೋಂದಣಿ ಮಾಡಿಕೊಂಡು ಏಕಮಾತ್ರ ಗುರುತಿನ ಸಂಖ್ಯೆಯನ್ನು ಪಡೆದುಕೊಳ್ಳ ಬೇಕಾಗುತ್ತದೆ. ಅಷ್ಟೇ ಅಲ್ಲ, ಟ್ರಸ್ಟಿಗಳು ಮತ್ತು ಇತರ ಪದಾಧಿಕಾರಿಗಳಿಗೆ ಪ್ಯಾನ್ ಮತ್ತು ಆಧಾರ್ ನಂಬರ್ ಕಡ್ಡಾಯವಾಗಲಿದೆ. ಸರಕಾರದಿಂದ ರೂ. 1 ಕೋಟಿಗೂ ಅಧಿಕ ಅನುದಾನ ಪಡೆಯುವ ಎನ್‌ಜಿಒಗಳ ದೈನಂದಿನ ವ್ಯವಹಾರ ನೋಡಿಕೊಳ್ಳುವವರನ್ನು ಲೋಕಪಾಲ, ಲೋಕಾಯುಕ್ತ ಕಾಯ್ದೆಗಳಡಿ ಸರ್ಕಾರಿ ಅಧಿಕಾರಿಗಳೆಂದು ಪರಿಗಣಿಸಲು ನಿರ್ಧರಿಸಲಾಗಿದೆ. ವಿದೇಶಗಳಿಂದ ಸ್ವೀಕರಿಸಲಾಗುವ ಅನುದಾನಗಳಿಗೆ ರೂ. 10 ಲಕ್ಷದ ಮಿತಿಯನ್ನು ವಿಧಿಸಲಾಗಿದೆ. ಪದಾಧಿಕಾರಿಗಳನ್ನು ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ತರಲಾಗಿದ್ದು ಅವರೆಲ್ಲ ಜುಲೈ 31ರೊಳಗಾಗಿ



ತಮ್ಮ ವೈಯಕ್ತಿಕ ಸೊತ್ತು, ಆಭರಣ, ನಗದು ಹಾಗೂ ಸ್ಥಿರ, ಚರ ಆಸ್ತಿಗಳನ್ನು ಘೋಷಿಸಬೇಕಾಗಿದೆ. ಅಂದಹಾಗೆ ಆಧಾರ್ ಕಾರ್ಡಿನ ಸಿಂಧುತ್ವವನ್ನು ಪ್ರಶ್ನಿಸಿರುವ ಪ್ರಕರಣ ಸರ್ವೋಚ್ಚ ನ್ಯಾಯಾಲಯದ ಅಂಗಳದಲ್ಲಿದೆ. ಆದರೂ ಒಂದಾನೊಂದು ಕಾಲದಲ್ಲಿ ಆಧಾರ್ ಕಾರ್ಡನ್ನು ವಿರೋಧಿಸಿದ್ದ ಇದೇ ಮೋದಿ ಇಂದು ಬಣ್ಣ ಬದಲಾಯಿಸಿ ಪ್ರತಿಯೊಂದಕ್ಕೂ ಅದನ್ನು ಕಡ್ಡಾಯವಾಗಿಸಲು ಹೊರಟಿದ್ದಾನೆ. ಆಧಾರ್ ಮಸೂದೆಯನ್ನು ಹಣಕಾಸಿನ ಮಸೂದೆ ಎಂದು ಕರೆದು ವಾಮಮಾರ್ಗದಲ್ಲಿ ಲೋಕಸಭೆಯ ಅನುಮೋದನೆಯನ್ನೂ ಪಡೆದುಕೊಳ್ಳಲಾಗಿದೆ.

ಲಾಯರ್‌ಗಳಿಗೆ ಗೇಟ್‌ಪಾಸ್

ಮೋದಿ ಸರ್ಕಾರ ಇಚ್ಛಾನುಸಾರಿಯಾಗಿ ವರ್ತಿಸುತ್ತ ದೇಶದ ವಿವಿಧ ಸಂಘಸಂಸ್ಥೆಗಳಲ್ಲಿ ಸಂಘ ಪರಿವಾರಕ್ಕೆ ಸೇರಿದ ಅನರ್ಹ ವ್ಯಕ್ತಿಗಳನ್ನು ತುಂಬುತ್ತಿದೆ. ಅದೇ ವೇಳೆ ಅರ್ಹ ವ್ಯಕ್ತಿಗಳಿಗೆಲ್ಲ ಗೇಟ್‌ಪಾಸ್ ನೀಡಲಾಗುತ್ತಿದೆ. ಇದಕ್ಕೆ ಇತ್ತೀಚಿನ ನಿದರ್ಶನವೆಂದರೆ ಕೇಂದ್ರ ಅಬಕಾರಿ ಮತ್ತು ಸುಂಕ ಮಂಡಳಿಯ 111 ವಕೀಲರನ್ನು ಹಠಾತ್ತಾಗಿ ವಜಾಗೊಳಿಸಿರುವುದು. ಕೇಂದ್ರ ಅಬಕಾರಿ ಮತ್ತು ಸುಂಕ ಮಂಡಳಿಯ (Central Board of Excise and Customs, ಸಿಬಿಇಸಿ) ಲಾಯರ್ ಎನ್ನುವುದು ಒಂದು ಪ್ರತಿಷ್ಠೆಯ ಹುದ್ದೆ ಏಕೆಂದರೆ ಸಿಬಿಇಸಿಯ ಅತ್ಯುನ್ನತ ಅಧಿಕಾರಿಯಿಂದ ತಜ್ಞತೆಯ ಪರಿಶೀಲನೆಯಾದ ನಂತರ ರಾಷ್ಟ್ರಪತಿಯವರಿಂದ ನೇಮಕವಾಗುವ ಪದಾಧಿಕಾರಿಗಳಿವರು. ಯುಪಿಎ ಸರಕಾರ ಪರೋಕ್ಷ ತೆರಿಗೆ ಪ್ರಕರಣಗಳಲ್ಲಿ ಸರಕಾರವನ್ನು ಪ್ರತಿನಿಧಿಸಲೆಂದು 111 ಲಾಯರುಗಳನ್ನು ಸಿಬಿಇಸಿಗೆ ನೇಮಕ ಮಾಡಿತ್ತು, ಅವರು ವಿವಿಧ ಉಚ್ಚ ನ್ಯಾಯಾಲಯಗಳಲ್ಲಿ ಸರಕಾರದ ಪ್ರಕರಣಗಳನ್ನು ನಿರ್ವಹಿಸುತ್ತಿದ್ದರು. ಇದೀಗ ಎನ್‌ಡಿಎ ಸರ್ಕಾರ ಏಕಾಏಕಿಯಾಗಿ ಅವರನ್ನೆಲ್ಲ ಸೇವೆಯಿಂದ ಕಿತ್ತುಹಾಕಿದೆ. 2011ರ ಅಕ್ಟೋಬರ್ 15ರಂದು ನೇಮಿಸಲಾಗಿದ್ದ ಈ ವಕೀಲರ ಸೇವಾವಧಿ 2014ರ ಅಕ್ಟೋಬರ್ 15ರಂದು ಅಂತ್ಯವಾಗಲಿತ್ತು, ಆದರೆ ಪ್ರಧಾನ ಸುಂಕ ಆಯುಕ್ತರು ಖುದ್ದಾಗಿ ಅವರ ಕೆಲಸ ತೃಪ್ತಿಕರವಾಗಿದೆ ಎಂದು ಹೇಳಿದ ಬಳಿಕ ಅವರ ಮರುನೇಮಕಾತಿ ಮಾಡಿ ಸೇವಾವಧಿಯನ್ನು 2019ರ ಜೂನ್ 8ರ ತನಕ ವಿಸ್ತರಿಸಲಾಗಿತ್ತು, ಆಶ್ಚರ್ಯಕರ ಬೆಳವಣಿಗೆಯೊಂದರಲ್ಲಿ ಕೇಂದ್ರ ಅಬಕಾರಿ ಮತ್ತು ಸುಂಕ ಮಂಡಳಿ ಇದೇ ಜೂನ್ 18ರಂದು ಇನ್ನೊಂದು ಆದೇಶ ಹೊರಡಿಸಿ ಆ ನೇಮಕಾತಿಗಳನ್ನು ರದ್ದುಗೊಳಿಸಿದೆ. "14.10.2014ರಂದು ಯಾದಿಯಲ್ಲಿದ್ದ 111 ವಕೀಲರ ನೇಮಕಾತಿ ಆದೇಶವನ್ನು ಈ ಮೂಲಕ ಹಿಂತೆಗೆದುಕೊಳ್ಳಲಾಗಿದೆ" ಎಂದು ತಿಳಿಸುವ ಈ ಆದೇಶ ಆದರದೆ ಜೂನ್ 9ರ ಆದೇಶಕ್ಕೆ ವಿರುದ್ಧವಾಗಿದೆ. ಅಂದು ಕಾನೂನು ಮತ್ತು ನ್ಯಾಯ ಸಚಿವಾಲಯದ ಸಮ್ಮತಿಯೊಂದಿಗೆ ಅಂತ್ಯಗೊಳಿಸಲಾಗಿದ್ದ 251 ಹಿರಿಯ/ ಕಿರಿಯ ವಕೀಲರ ನೇಮಕಾತಿ ಪಟ್ಟಿಯಲ್ಲಿ ಆ 111 ವಕೀಲರ ಹೆಸರುಗಳನ್ನೂ ಸೇರಿಸಲಾಗಿತ್ತು. ಇದೀಗ ಮಂಡಳಿ ಯಾವುದೇ ಕಾರಣ ಕೊಡದೆ ಅವರ ನೇಮಕಾತಿಯನ್ನು ವಜಾಗೊಳಿಸಿದೆ.. ಹೀಗೆ ಕಾರಣ ನೀಡದೇ ರದ್ದುಪಡಿಸಿರುವುದು ಸಹಜ ನ್ಯಾಯದ ನೀತಿಗಳಿಗೆ ವಿರುದ್ಧವಾಗಿದೆ. ಇದೊಂದು ಇಚ್ಛಾನುಸಾರಿ ಕ್ರಮವಾಗಿದ್ದು ಇದರ ಹಿಂದೆ ರಾಜಕೀಯ ಕಾರಣಗಳಿ ರುವುದು ಸ್ಪಷ್ಟವಿದೆ.

ಲೋಕಸಭಾ ಟಿವಿಯ ಕೇಸರೀಕರಣ

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ತರುವಾಯ ಸಂಘಿಗಳು ಇತಿಹಾಸ ಸಂಶೋಧನಾ ಮಂಡಳಿ, ಸಾಂಸ್ಕೃತಿಕ ಸಂಬಂಧಗಳ ಮಂಡಳಿ ಮತ್ತು ಪುಣೆಯ ಸಿನಿಮಾ ಮತ್ತು ಟೆಲಿವಿಷನ್ ಸಂಸ್ಥೆಯೂ ಸೇರಿದಂತೆ ಅನೇಕ ಸಂಸ್ಥೆಗಳನ್ನು ತಮ್ಮ ಕೈವಶ ಮಾಡಿಕೊಂಡಿದ್ದಾರೆ. ಒಂದು ಸ್ವಾಯತ್ತ ಸಂಸ್ಥೆಯಾಗಿದ್ದ ಲೋಕಸಭಾ ಟಿವಿ ಕೂಡಾ ಇಂದು ಕೇಸರೀಕರಣಕ್ಕೆ ತುತ್ತಾಗಿದೆ. ಇಲ್ಲಿಯತನಕ ಲೋಕಸಭಾ ಟಿವಿಯಲ್ಲಿ ಟಿಆರ್‌ಪಿ ಬೆನ್ನತ್ತುವ ಖಾಸಗಿ ಚಾನಲ್ ಥರದ ಆಂಕರ್‌ಗಳ ಆರ್ಭಟ, ದಬ್ಬಾಳಿಕೆಗಳು ಇರುತ್ತಿರಲಿಲ್ಲ, ಅಲ್ಲಿ ನಡೆಯುತ್ತಿದ್ದ ಚರ್ಚೆ, ಸಂವಾದಗಳು ವಿವೇಚನಾಯುಕ್ತವೂ ಪಕ್ಷಪಾತರಹಿತವೂ ಆಗಿರುತ್ತಿದ್ದವು. ಅಂಕಿಅಂಶಗಳ ಆಧಾರದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಪ್ರಯತ್ನ ಆಗುತ್ತಿತ್ತೆ ಹೊರತು ಮಾಲೀಕರು ಅಥವಾ ಸಂಪಾದಕರಿಗೆ ಬೇಕಾದ ಹಾಗೆ ಅಲ್ಲ. ಮೋದಿ ಸರ್ಕಾರ ಈಗ ಲೋಕಸಭಾ ಟಿವಿ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿ ಕಂ ಪ್ರಧಾನ ಸಂಪಾದಕರ ಜಾಗಕ್ಕೆ ಸೀಮಾ ಗುಪ್ತಾ ಎಂಬಾಕೆಯನ್ನು ತಂದು ಕೂರಿಸಿದೆ. ಈಕೆ ಪತ್ರಕರ್ತ ವಲಯದಲ್ಲಿ ಹೆಸರು ಮಾಡಿರದ ವ್ಯಕ್ತಿ; ಸರಕಾರಿ ಅಧಿಕಾರಿಯೂ ಅಲ್ಲ, ಸಂಘ ಪರಿವಾರದ ನಿಕಟವರ್ತಿ ಆಗಿರುವುದೆ ಈಕೆಯ ಏಕೈಕ ಅರ್ಹತೆಯಾಗಿದೆ. ಈಕೆ ತಾನೋರ್ವ ಮೋದಿಭಕ್ತೆ ಎಂಬುದನ್ನು ತನ್ನ ಕೃತ್ಯಗಳ ಮೂಲಕ ತೋರುತ್ತಿದ್ದಾಳೆ. ಉದಾಹರಣೆಗೆ ಮೋದಿ ಸರ್ಕಾರದ ರೀತಿನೀತಿ, ನಡೆನುಡಿಗಳನ್ನು ಟೀಕಿಸುವ ಕಾರ್ಯಕ್ರಮಗಳಿಗೆ ಕತ್ತರಿಪ್ರಯೋಗ ಆಗುತ್ತಿದೆ. ಲೋಕಸಭೆಯ ಕಾರ್ಯ ಚಟುವಟಿಕೆಗಳಿಗೆ ಪ್ರಾಮುಖ್ಯತೆ ಕಡಿಮೆಯಾಗಿ ಮೋದಿಯ ಲೈವ್ ಕಾರ್ಯಕ್ರಮಗಳಿಗೆ ಪ್ರಥಮ ಪ್ರಾಶಸ್ತ್ಯ ಎಂದಾಗಿದೆ. ಎನ್‌ಜಿಒಗಳ ಚಟುವಟಿಕೆ ಕುರಿತ ಕಾರ್ಯಕ್ರಮಗಳನ್ನು ನಿಲ್ಲಿಸಲಾಗಿದೆ. ಅವುಗಳ ಜಾಗಕ್ಕೆ ಸಂಘ ಪರಿವಾರದ ಅಂಗಸಂಸ್ಥೆಗಳು ಬಂದಿವೆ. ನಿಯಮಗಳನ್ನು ಗಾಳಿಗೆ ತೂರಿ ನಾರದ ಕಮ್ಯೂನಿಕೇಷನ್ಸ್ ಎಂಬ ಖಾಸಗಿ ಸಂಸ್ಥೆ ತಯಾರಿಸಿದಂತಹ ದೀನದಯಾಳ್ ಉಪಾಧ್ಯಾಯರ ಜೀವನಚರಿತ್ರೆಯ ಧಾರಾವಾಹಿಯನ್ನು ಪ್ರಸಾರ ಮಾಡಲಾಯಿತು. ಬಿಜೆಪಿ ಆಡಳಿತದ ಛತ್ತೀಸ್‌ಗಢದಲ್ಲಿ ಸಂಭವಿಸಿದ 'ಸಂತಾನಹರಣ ಚಿಕಿತ್ಸಾ ಸಾವು'ಗಳ ಕುರಿತ ಕಾರ್ಯಕ್ರಮ ಪ್ರಸಾರ ಆಗುತ್ತಿದ್ದಂತೆ ಅರ್ಧದಲ್ಲೆ ಅದನ್ನು ನಿಲ್ಲಿಸಲಾಯಿತು. 201೫ರ ದಿಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಸೋಲು ಖಚಿತವಾದಾಗ ಅಲ್ಲಿಯವರೆಗೆ ನಡೆಯುತ್ತಿದ್ದ ಫಲಿತಾಂಶಗಳ ಪ್ರಸಾರವನ್ನು ಇದ್ದಕ್ಕಿದ್ದಂತೆ ನಿಲ್ಲಿಸಲಾಯಿತು. ಸೀಮಾ ಗುಪ್ತಾ ಮುಖ್ಯಸ್ಥೆಯಾದ ನಂತರದಲ್ಲಿ 20ಕ್ಕೂ ಅಧಿಕ ನೌಕರರನ್ನು ಕಿತ್ತುಹಾಕಲಾಗಿದೆ ಅಥವಾ ಬಲವಂತವಾಗಿ ರಾಜೀನಾಮೆ ಪಡೆಯಲಾಗಿದೆ.

- ಸುರೇಶ್ ಭಟ್ ಬಾಕ್ರಬೈಲ್

(ಆಧಾರ: ವಿವಿಧ ಪತ್ರಿಕಾ ವರದಿಗಳು; 1.8.2016ರ ಔಟ್‌ಲುಕ್ ನಲ್ಲಿ ಧೀರಜ್ ಸಿಂಗ್ ಲೇಖನ)

ಮೇಜಿನ ಆ ಬದಿಯವರು

ಅವನೊಬ್ಬ ಬಾಣಸಿಗ. ಮಾಂಸದ ಖಾದ್ಯಗಳನ್ನು ಮಾಡುವುದರಲ್ಲಿ ಅಪೂರ್ವ ಅನ್ನುವಷ್ಟು ಸಿದ್ಧಿಯನ್ನು ಪಡೆದಿದ್ದ. ಅವುಗಳನ್ನು ಸೇವಿಸುವುದು ಹಾಗಿರಲಿ, ಬೀರುವ ಪರಿಮಳಕ್ಕೇ ಬಾಯಿಯಲ್ಲಿ ನೀರು ಸುರಿಯುತ್ತಿತ್ತಂತೆ. ಹಲ್ಲುಗಳು ನುಸುಗುಡುತ್ತಿದ್ದವಂತೆ. ಒಮ್ಮೆ ಅವನ ಕೈರುಚಿ ಕಂಡವರಿಗೆ ಇತರೆ ಪಾಕಪ್ರವೀಣರು ತಯಾರಿಸಿದ ಖಾದ್ಯಗಳಲ್ಲಿ ಏನೋ ಕೊರತೆ ಇದೆ ಅನ್ನಿಸುತ್ತಿತ್ತಂತೆ. ಅಂತಹ ಆಧುನಿಕ ನಳಮಹಾರಾಜನ ಕೈಚಳಕ ಅನುಭವಿಸುವ ಅವಕಾಶವೊಂದು ಎಸ್.ಪಿ. ಸಾಹೇಬರೊಬ್ಬರಿಗೆ ದೊರೆಯಿತಂತೆ. ಅವರು ಖಾದ್ಯಗಳ ಸ್ವಾದಕ್ಕೆ ಮನಸೋತರಂತೆ. ಪಾಕಪ್ರವೀಣ ಬಾಣಸಿಗನು ತನ್ನ ಹಸ್ತಕೌಶಲ್ಯದಿಂದ ಸಾಹೇಬರ ಜಿಹ್ವಾ ಚಾಪಲ್ಯವನ್ನು ತಣಿಸಿದ್ದರಿಂದಾಗಿ ಅವರು ಸುಪ್ರೀತರಾಗಿದ್ದರಂತೆ. ಅಸಲಿಯನ್ನು ಅನುಭವಿಸುವ ಅಮಲಿನಲ್ಲೇ 'ಯಾರ ಮೇಜವಾನಿ ಇದು' ಎಂದು ಕೇಳಿದರಂತೆ. ಬಾಣಸಿಗ ಎದುರು ನಿಂತು ದೈನ್ಯದಿಂದ 'ನನ್ನದೇ ಮಹಾಸ್ವಾಮಿ' ಎಂದು ಕೈಮುಗಿಯುತ್ತಾ ನುಡಿದನಂತೆ. ಸಾಹೇಬರು ತಮ್ಮ ಕೃಪಾಕಟಾಕ್ಷವನ್ನು ದನಿ ಬಂದ ಕಡೆ ಬೀರಿದರಂತೆ. ಇನ್ನೂ ಇಪ್ಪತ್ತು-ಇಪ್ಪತ್ತೈದರ ವಯಸ್ಸಿನ ಯುವಕ. ಆ ಚಿಕ್ಕ ವಯಸ್ಸಿಗೆ ಪಾಕವಿದ್ಯೆ ಕರಗತ ಮಾಡಿಕೊಂಡಿರುವುದನ್ನು ತಿಳಿದು ಆಶ್ಚರ್ಯವೂ, ಸಂತೋಷವೂ ಆಯಿತಂತೆ. ಸಂತೋಷ ಯಾಕೆಂದರೆ ಇವನನ್ನು ಮನೆಯಲ್ಲಿ ಅಡುಗೆ ಕೆಲಸಕ್ಕೆ ನೇಮಿಸಿಕೊಂಡರೆ ಕೊನೆಯ ಪಕ್ಷ ತನ್ನ ಸರ್ವೀಸಿನಾದ್ಯಂತವಾದರೂ ಸೊಗಸಾದ ಖಾದ್ಯಗಳನ್ನು ಸೇವಿಸಬಹುದಲ್ಲಾ ಅಂತಾನಂತೆ. ಅದಕ್ಕೆ ಪೂರಕವಾಗಿಯೋ ಎಂಬಂತೆ 'ಸರ್ಕಾರಿ ಕೆಲಸಕ್ಕೆ ಸೇರ್ತಿಯೇನೋ' ಅಂತ ಕೇಳಿದರಂತೆ. 'ತಮ್ಮ ದಯೆ ಮಹಾಸ್ವಾಮಿ' ಅಂದನಂತೆ ಅವ. ಸಾಹೇಬರು ಬಾಣಸಿಗನಿಗೆ ಪೊಲೀಸ್ ಪೇದೆ ಹುದ್ದೆ ದಯ ಪಾಲಿಸಿದರಂತೆ. ಆ ಕಾಲದಲ್ಲಿ ಹಾಗೆ ಮಾಡಲು ಅವಕಾಶ ಇತ್ತಂತೆ. ಹುದ್ದೆಯ ಹೆಸರು ಪೊಲೀಸ್ ಪೇದೆ ಎಂದು ಇದ್ದರೂ ಅವನು ನಿರ್ವಹಿಸುತ್ತಿದ್ದ ಕೆಲಸ ಮಾತ್ರ ಸಾಹೇಬರ ಮನೆ ಅಡುಗೆಯವನದ್ದಾಗಿತ್ತಂತೆ. ಸಾಹೇಬರಿಗೆ ವರ್ಗಾ ಆಗುತ್ತಿದ್ದಂತೆಯೇ ಅವರ ಜೊತೆಯಲ್ಲಿ ಅವನಿಗೂ ವರ್ಗಾ ಆಗುತ್ತಿತ್ತಂತೆ. ಸಾಹೇಬರ ಒಂದು ಅಡುಗೆ ಮನೆಯಿಂದ ಅದೇ ಸಾಹೇಬರ ಇನ್ನೊಂದು ಅಡುಗೆ ಮನೆಯ ಚಾರ್ಜು ವಹಿಸಿಕೊಳ್ಳುತ್ತಿದ್ದನಂತೆ. ಇದೇ ಪದ್ಧತಿ ಸಾಹೇಬರಿಗೆ ಬಡ್ತಿ ಮೇಲೆ ಬಡ್ತಿ ದೊರೆತಾಗಲೂ ಮುಂದುವರೆದಿತ್ತಂತೆ. ಪಾಪ ಸಾಹೇಬರೂ ಅಷ್ಟೆ. ತಮ್ಮ ಕಾಯಂ ಬಾಣಸಿಗ ಕಂ ಪೊಲೀಸ್ ಪೇದೆಗೆ ಯಾವುದೇ ಅನ್ಯಾಯ ಮಾಡಲಿಲ್ಲ, ಅವನಿಗೆ ಕಾಲಕಾಲಕ್ಕೆ ಸಿಗಬೇಕಾದ ಬಡ್ತೀನೂ ಕೊಡಿಸುತ್ತಿದ್ದರಂತೆ. ಹಿಂಗಾಗಿ ಅವನು ಮುಖ್ಯ ಪೇದೆ ಆದನಂತೆ. ದಫೇದಾರನೂ ಆದನಂತೆ. ಕೊನೆಗೆ ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರೂ ಆಗಿ ನಿವೃತ್ತಿ ಹೊಂದಿದನಂತೆ. ಅವನು ಯಾವುದೇ ಹುದ್ದೆ ಹೊಂದಿದ್ದರೂ ಮಾಡುತ್ತಿದ್ದ ಕೆಲಸ ಮಾತ್ರ ಅಡುಗೆಯವನದ್ದಾಗಿತ್ತಂತೆ. ಅದನ್ನು ಅವನು ಸಂತೋಷದಿಂದಲೇ ನಿರ್ವಹಿಸುತ್ತಿದ್ದನಂತೆ. ಯಾಕೆಂದರೆ ಅವನು ಪ್ರಾವೀಣ್ಯತೆ ಪಡೆದದ್ದೂ ಅಡುಗೆ ಮಾಡುವುದರಲ್ಲಿ, ಮಾಡುತ್ತಿದ್ದ ಕೆಲಸವೂ ಅದೇ. ತನ್ನ ವಿದ್ಯಾ ಪ್ರಾವೀಣ್ಯತೆಗೆ ಸಾರ್ಥಕತೆ ಸಿಕ್ಕಿದ್ದರಿಂದ ಸನ್ಮಾನ್ಯ ಪೇದೆ, ಹೆಡ್‌ಕಾನ್‌ಸ್ಟೇಬಲ್, ದಫೇದಾರ್, ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರ್ ಉ. ಸಾಹೇಬ ಕುಕ್. ಅವರೂ ಸಂಪ್ರೀತರಾಗಿದ್ದರಂತೆ!

ಇಲ್ಲೊಬ್ಬ ಕಾನ್‌ಸ್ಟೇಬಲ್ ಇದ್ದ. ಆರಡಿ ಎತ್ತರದ ಆಸಾಮಿ. ಕಡಿದರೆ ನಾಕಾಳು ಆಗ್ತಾನೆ ಅಂತಾರಲ್ಲ ಅಂತಹ ಮೈಕಟ್ಟು. ಸದಾ ಸಿವಿಲ್ ಡ್ರೆಸ್ಸೇ ಅವನದು; ಯೂನಿಫಾರಂ ಹಾಕಿದ್ದನ್ನ ಕಂಡವರಿಲ್ಲ. ಸರ್ಕಲ್ ಇನ್‌ಸ್ಪೆಕ್ಟರ್ ನಂಬಿಕೆಯ ಬಂಟ. ಮನೆ ಮೇಲ್ವಿಚಾರಣೆ, ಹಫ್ತಾ ವಸೂಲಿ ಅವನ ಡ್ಯೂಟಿ. ಹಫ್ತಾ ವಸೂಲಿ ಅಂದರೆ ಜೇನು ಬಿಚ್ಚುವ ಕೆಲಸ. ಸ್ವಲ್ಪ ನೆಕ್ಕಿಕೊಂಡು ಉಳಿದದ್ದನ್ನು ನಿಯತ್ತಾಗಿ ಸಾಹೇಬರಿಗೆ ತಲುಪಿಸುತ್ತಿದ್ದ. ಐನಾತಿ ಬಡ್ಡಿ ಹೈದ ಕಾಸು ಕದ್ದಿರ್ತಾನೆ ಅಂತ ಸಾಹೇಬರಿಗೂ ಅನುಮಾನ ಇದ್ದೇ ಇರ್ತಿತ್ತು, ಆದರೆ ಹಫ್ತಾ ವಸೂಲಿಗೆ ಯಾರು ಯಾರನ್ನೋ ನಿಯಮಿಸಕ್ಕಾಗಲ್ಲ, ಹೊಸ ಕುದುಕ ಎಷ್ಟೆ ಸಮಾಚಾರ ಆಗ್ತದೆ ಅನ್ನೋದು ಗೊತ್ತಿತ್ತು, ಅದೂ ಅಲ್ದೆ ಅದೇನು ಬೆವರು ಸುರಿಸಿ ಸಂಪಾದಿಸಿರೋ ಹಣವಲ್ಲವಲ್ಲ ಅಂತಾನೋ ಏನೋ ಕಾಣೆ. ವಸೂಲಿ ಮಾಡಿದವನಿಗೂ ಒಂದು ಪಾಲು ಕೈ ಎತ್ತಿಕೊಡೋರು. ಅವನೂ ದಿಂಡಾದ, ಸಾಹೇಬರೂ ದಿಂಡಾದರು. ಇಬ್ಬರು ಖುಷಿಖುಷಿಯಾಗೇ ಇದ್ದರು.

ಹೀಗೆ ತಮ್ಮ ಮನಸ್ಸಿಗೆ ಹಿತವಾಗುವಂತಹ ಕೆಲಸಗಳು ಎಲ್ಲರಿಗೂ ದೊರೆಯುವುದಿಲ್ಲ, ನಮ್ಮಲ್ಲಿ ಒಬ್ಬ ಎಸ್.ಪಿ ಸಾಹೇಬರು ಇದ್ದರು. ಸಂಪ್ರದಾಯ ಪ್ರಿಯರು. ಪುರಾತನ ಸಂಸ್ಕೃತಿಯ ಮೇಲೆ ಅತೀವ ಮಮತೆ. ಎಂತಹ ತುರ್ತು ಪರಿಸ್ಥಿತಿಯೇ ಎದುರಾದರೂ ದೇವರ ಪೂಜೆ ಮಾಡದೆ ಮನೆಯ ಹೊರಗೆ ಕಾಲು ಹಾಕಿದವರೇ ಅಲ್ಲ, ಗೋವುಗಳು ಅಂದರೆ ಎಲ್ಲಿಲ್ಲದ ಪ್ರೀತಿ, ಅದರ ದೇಹ ಮೂವ್ವತ್ತು ಮೂರು ಕೋಟಿ ದೇವತೆಗಳ ಆವಾಸಸ್ಥಾನ ಎಂದು ನಂಬಿದವರು. ದೇವಿಲಾಲ್ ಅವರು ದೇಶದ ಉಪಪ್ರಧಾನಿ ಯಾಗಿದ್ದಾಗ ತಮ್ಮ ಸರ್ಕಾರಿ ನಿವಾಸದ ವಿಶಾಲವಾದ ಕಾಂಪೌಂಡಿನಲ್ಲಿ ಹತ್ತಾರು ಗೋವುಗಳನ್ನು ಸಾಕಿದ್ದು, ಲಲ್ಲೂ ಪ್ರಸಾದ್ ಯಾದವ್ ಅವರು ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಸರ್ಕಾರಿ ಬಂಗಲೆಯ ಆವರಣವನ್ನೇ ಗೋಶಾಲೆ ಮಾಡಿದ್ದು ಅವರ ಮೇಲೆ ಪ್ರಭಾವ ಬೀರಿರಬೇಕು. ಲಲ್ಲೂ ಯಾದವ್ ಮೇವು ಹಗರಣದಲ್ಲಿ ಜೈಲು ಸೇರಬೇಕಾಯ್ತು ಅನ್ನುವುದನ್ನು ಮರೆತಿರಬಹುದು. ಇದು ಹೇಗಾದರೂ ಇರಲಿ. ಸದರಿ ಸಾಹೇಬರು ತಮ್ಮ ಸರ್ಕಾರಿ ಬಂಗಲೆಯ ವಿಶಾಲವಾದ ಕಾಂಪೌಂಡಿನಲ್ಲಿ ತಾತ್ಕಾಲಿಕ ಶೆಡ್ಡನ್ನು ನಿರ್ಮಿಸಿ ಗೋಶಾಲೆಯನ್ನಾಗಿ ಪರಿವರ್ತಿಸಿದರು. ಗೋವುಗಳ ಪಾಲನೆ ಪೋಷಣೆಗೆ ಪ್ರತ್ಯೇಕ ಸಿಬ್ಬಂದಿ ಬೇಕು ಅನ್ನಿಸಲಿಲ್ಲ. ಪೇದೆಗಳೇ ಇದನ್ನು ಸಮರ್ಪಕವಾಗಿ ನಿರ್ವಹಿಸಬಲ್ಲರು ಎಂಬ ನಂಬಿಕೆ ಅವರಿಗಿತ್ತು ನಿಜ. ಪೇದೆಗಳಿಗೆ ಅಪರಾಧ ವಿಭಾಗದಲ್ಲಿ ತರಬೇತಿ ನೀಡಲಾಗಿತ್ತು, ಅಲ್ಲಿ ತರಬೇತು ಪಡೆದವರು ಇಲ್ಲಿ ಕೆಲಸ ಮಾಡಲಾಗುವುದಿಲ್ಲವೇ ಎಂಬ ಆಲೋಚನೆ ಅವರದ್ದಾಗಿತ್ತು ಎಂದು ತೋರುತ್ತೆ, ನಾಲ್ವರು ಪೇದೆಗಳನ್ನು ಇದಕ್ಕಾಗಿಯೇ ನಿಯಮಿಸಿದರು. ಕೊಟ್ಟಿಗೆಯನ್ನು ಸ್ವಚ್ಛಗೊಳಿಸುವುದು, ಗೋವುಗಳ ಮೈತೊಳೆಯುವುದು, ಮೇವು ತಿನ್ನಿಸುವುದು, ಕಲಗಚ್ಚು ಕುಡಿಸುವುದು, ಹಾಲು ಕರೆಯುವುದು, ಗೋಮಾತೆಯರನ್ನು ಹೊರಗಡೆ ಕರೆದುಕೊಂಡು ಹೋಗಿ ಕಾಲಾಡಿಸಿಕೊಂಡು ಬರುವುದು ಮುಂತಾದ ಕೆಲಸಗಳನ್ನು ಪೇದೆಗಳು ನಿರ್ವಹಿಸಬೇಕಾಗಿತ್ತು, ಈ ಪೇದೆಗಳೆಲ್ಲ ಅಪರಾಧಗಳ ವಿಷಯದಲ್ಲಿ ತರಬೇತಿ ಪಡೆದವರು; ಅವುಗಳು ನಡೆಯದಂತೆ ಕಾರ್ಯತಂತ್ರ ರೂಪಿಸುವವರು; ಒಂದುವೇಳೆ ಅಪರಾಧಗಳು ನಡೆದೇ ಹೋದರೆ ಅಪರಾಧಿಗಳ ಪತ್ತೆ ಹಚ್ಚುವ ರೂಪುರೇಷೆ ತಯಾರಿಸುವವರು. ಇಂತಹ ತರಬೇತಿ ಪಡೆದು ಕಾನ್‌ಸ್ಟೇಬಲ್ ಹುದ್ದೆ ನಿರ್ವಹಿಸಬೇಕಾಗಿದ್ದವರು ಸಾಹೇಬರ ಗೋಪ್ರೀತಿಯಿಂದಾಗಿ ದನ ಕಾಯುತ್ತಿದ್ದರು!

ಇತ್ತೀಚೆಗೆ ಪೊಲೀಸರು ಗೌರವಾನ್ವಿತ ಬದುಕಿಗಾಗಿ ಒಂದು ದಿನ ಸಾಮೂಹಿಕ ರಜೆ ಹಾಕಲು ಸಿದ್ಧರಾಗಿದ್ದಾರೆ ಎಂದು ತಿಳಿದಾಗ ಇವೆಲ್ಲ ನೆನಪಾಯಿತು. ಮುಷ್ಕರ ಹೂಡಬಹುದಿತ್ತಲ್ಲ, ಸಾಮೂಹಿಕ ರಜೆ ಏಕೆ ಹಾಕಬೇಕು ಅಂದರೆ ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆಯಂತೆ! ಮುಷ್ಕರ ಹೂಡುವುದು ಅಪರಾಧ ಅಂತೆ! ಇದು ಹಾಗಿರಲಿ. ಮಾಧ್ಯಮಗಳಲ್ಲಿ ಇವುಗಳಿಗಿಂತ ಭಯಾನಕ ವಿಷಯಗಳು ಬಯಲಾದವು.

ಆರ್ಡರ್ಲಿನ ಎಂಬ ಅನಿಷ್ಟ ಪದ್ಧತಿ ಇದೆಯಂತೆ. ತರಬೇತಿ ಪಡೆದ ಪೇದೆಗಳು ಉನ್ನತ ಅಧಿಕಾರಿಗಳ ಮನೆಯಲ್ಲಿ ಅವರ ಅಧಿಕಾರಾವಧಿಯಲ್ಲಿ ಮಾತ್ರ ಅಲ್ಲ, ನಿವೃತ್ತಿ ನಂತರವೂ ಸೇವೆ ಸಲ್ಲಿಸಬೇಕಂತೆ! ಅವರು ಮಾಡಬೇಕಾಗಿರುವ ಕೆಲಸ ಅಂದರೆ ಮನೆಯ ಆಳು ಮಾಡುವ ಕೆಲಸ. ಲಕ್ಷ ಲಕ್ಷ ಎಣಿಸುವ ಸಾಹೇಬರುಗಳು ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಲಾಗುವುದಿಲ್ಲ ಎಂದಲ್ಲ, ಬಿಟ್ಟಿಯಾಗಿ ಬರುವಾಗ ಯಾಕೆ ಬಿಡಬೇಕು ಎಂಬ ಘಾತುಕತನ. ಹೇಗೋ ಕೆಲಸ ನಿಭಾಯಿಸಿ ಮನೆಗೆ ಹೋದರೆ ಮನೆಯಲ್ಲಿ ನೆಂಟರು. ಮಲಗಲು ಸ್ಥಳ ಸಾಲದು. ಹೊರಗಡೆಯೇ ಮಲಗಬೇಕು. ಆರ್ಡರ್ಲಿಗಳಲ್ಲದವರಿಗೂ ಇಂತಹದ್ದೇ ಪರಿಪಾಟಲು. ರಜ ಕೇಳಿದರೆ ಸಿಗದು. ಕಾರಣ ಸಿಬ್ಬಂದಿ ಕೊರತೆ. ಹೀಗೆ ನೂರೆಂಟು ತೊಂದರೆಗಳನ್ನು ಮಾಧ್ಯಮಗಳಲ್ಲಿ ಪೊಲೀಸರು ಹೇಳಿಕೊಂಡಿದ್ದಾರೆ. ಅವರ ಕರುಣಾಜನಕ ಸ್ಥಿತಿ ಕಂಡು ಕರುಳು ಚುರುಕ್ ಎನ್ನುತ್ತೆ, ಹೃದಯವಿದ್ರಾವಕವಾಗುವಂತಹ ಘಟನೆಗಳ ನಡುವೆಯೂ ಅವರು ಜನರ ರಕ್ಷಣೆ ಮಾಡುತ್ತಿರುವುದು ಎಲ್ಲರ ಮನ್ನಣೆಗೂ ಪಾತ್ರವಾಗಬೇಕಾದ್ದು ಸಮಂಜಸವೇ ಸರಿ.




ಆದರೆ....

ನಿಜ. ಉನ್ನತ ಅಧಿಕಾರಿಗಳು ತಮ್ಮ ಕೈಕೆಳಗಿನವರನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಾರೆ. ನಾಗರಿಕ ಸಮಾಜಕ್ಕೆ ಸಲ್ಲದ ಬರ್ಬರ ರೀತಿಯ ಒಡನಾಟ ಅವರದ್ದಾಗಿರುತ್ತೆ, ಎಲ್ಲವೂ ಸತ್ಯ. ಅವರ ನೋವಿಗೆ ತಮ್ಮ ಸ್ಪಂದನೆ ಇದೆ. ಅದೇ ಪೊಲೀಸರು ಸಾರ್ವಜನಿಕರ ಜೊತೆ ಹೇಗೆ ನಡೆದುಕೊಳ್ಳುತ್ತಾರೆ? ಮೇಲಧಿಕಾರಿಗಳು ಅವರೊಡನೆ ಹೇಗೆ ನಡೆದುಕೊಳ್ಳಬಾರದು ಎಂದು ಪೊಲೀಸರು ಬಯಸುತ್ತಾರೋ ಅದಕ್ಕಿಂತ ಕ್ರೂರವಾಗಿರುತ್ತಲ್ಲ ಅವರ ನಡವಳಿಕೆ. ಕಳ್ಳಕಾಕರ ಜೊತೆ ಅವರ ಅಸಭ್ಯ ವರ್ತನೆ ಮಾತು ಹಾಗಿರಲಿ... ಬೀದಿಬದಿಯ ವ್ಯಾಪಾರಿಗಳು, ಲೈಂಗಿಕ ಕಾರ್ಯಕರ್ತೆಯರು ಇಂತಹವರ ನೋವನ್ನು ಅವರು ಅರಿತು ನಾಗರಿಕವಾಗಿ ನಡೆದುಕೊಂಡಿದ್ದಾರೆಯೇ? ಟಿ.ಕೆ. ದಯಾನಂದ ಅವರ 'ಬೀದಿನಕ್ಷತ್ರಗಳು' ಹಾಗೂ ಎ. ರೇವತಿ ಅವರ 'ಬದುಕು ಬಯಲು' ಕೃತಿಗಳನ್ನು ಓದಿದರೆ ಪೊಲೀಸರ ಕರಾಳಮುಖದ ಅಲ್ಪ ಪರಿಚಯ ಆಗುತ್ತದೆ. ಉನ್ನತ ಅಧಿಕಾರಿಗಳು ತಮ್ಮ ಕೈಕೆಳಗಿನವರನ್ನು ತುಚ್ಛವಾಗಿ ಕಾಣುತ್ತಾರೆ ಎನ್ನುವ ಆರೋಪ ಇದೆ. ಅವರು ಮೇಜಿನ ಈ ಬದಿಯಿದ್ದಾರೆ. ಕೈಕೆಳಗಿನವರು ಮೇಜಿನ ಆ ಬದಿ ಇದ್ದಾರೆ. ಅದೇ ಬೀದಿಬದಿಯ ವ್ಯಾಪಾರಿಗಳು, ರಸ್ತೆ ಬದಿಯ ಲೈಂಗಿಕ ಕಾರ್ಯಕರ್ತೆಯರು ಮುಂತಾದವರು ಮೇಜಿನ ಆ ಬದಿ ಇದ್ದಾರೆ. ಪೊಲೀಸರೆ ದಯ ಮಾಡಿ ಒಮ್ಮೆ ಮೇಜಿನ ಈ ಬದಿಯಲ್ಲಿ ನಿಂತು ನಿಮ್ಮ ವರ್ತನೆಯನ್ನು ಗಮನಿಸಬಲ್ಲಿರಾ...

ಇಂತಹ ನಡವಳಿಕೆ ಪೊಲೀಸ್ ಇಲಾಖೆಗೆ ಸೀಮಿತವಾದದ್ದಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಇದೇ ಸಮಸ್ಯೆ.

ಅಣಕ



• ಎಚ್.ಎಲ್.ಕೇಶವಮೂ

ಕೆಲವು ವರ್ಷಗಳ ಹಿಂದಿನ ಮಾತು. ನನ್ನ ತಮ್ಮನ ಮಗಳು ಪಿಯುಸಿ ಪಾಸಾಗಿದ್ದಳು. ವೈದ್ಯಕೀಯ ಕಾಲೇಜು ಸೇರಿಸಲು ಶಕ್ತಿ ಇರಲಿಲ್ಲ, ಇಂಜಿನಿಯರಿಂಗ್ ಪಾಸಾದವರಿಗೆ ಕೆಲಸ ಸಿಗುತ್ತಿರಲಿ... ಬಿಎಸ್.ಸಿ ನರ್ಸಿಂಗ್ ಸೇರಿಸುವಂತೆ ಕೆಲವರು ಸಲ... ನೀಡಿದರು. ಅವಳು ಅರ್ಜಿ ಹಾಕಿದಳು. ಕೌನ್ಸೆಲಿಂಗ್... ಇತ್ತು, ಮಲ್ಲೇಶ್ವರಂ 18ನೇ ಕ್ರಾಸ್‌ನ ಒಂದು ಕಟ್ಟಡದಲ್ಲಿ ಅದು ನಡೆಯುತ್ತಿತ್ತು, ಕೌನ್ಸೆಲಿಂಗ್‌ಗೆ ಹೋದವರಿಗೆ ಇದು ಅನುಭವ ಆಗಿರುತ್ತೆ, ನೂರೆಂ... ಕಾಲೇಜುಗಳು ಇರುತ್ತವೆ. ಯಾವ ಕಾಲೇಜು ಹೇಗೆ... ಎಂಬುದರ ಅರಿವು ಇರುವುದಿಲ್ಲ, ಎಲ್ಲರಿಗೂ ಉತ್ತ... ದರ್ಜೆಯ ಕಾಲೇಜಿಗೆ ಸೇರಬೇಕೆಂಬ ಆಸೆ ಸಹಜವಾ... ಇರುತ್ತೆ, ಹಲವಾರು ಕಡೆಯಿಂದ ವಿಷಯ ಸಂಗ್ರಹಿಸುತ್ತೀರಿ. ಕೊನೆಗೆ ಒಂದು ಐದಾರು ಕಾಲೇಜುಗಳ ಹೆಸರು ಗುರುತು ಮಾಡಿಕೊಳ್ಳುತ್ತೀರಿ... ನಿಮ್ಮ ಸರದಿ ಬರುತ್ತೆ, ಹೋಗುತ್ತೀರಿ. ಸಮಯ ಬಹಳ ಕಡಿಮೆ ಇರುತ್ತೆ, ಕಂಪ್ಯೂಟರ್ ಸ್ಕ್ರೀನ್ ಮ... ಕಾಲೇಜುಗಳ ಹೆಸರು, ಉಳಿದಿರುವ ಸೀಟುಗಳ ಸಂ... ಬರುತ್ತಾ ಇರುತ್ತೆ. ನೀವು ಉತ್ತಮ ಕಾಲೇಜು ಎಂದು... ಗುರುತು ಮಾಡಿಕೊಂಡ ಕಾಲೇಜುಗಳ ಕಡೆ ಆಸೆಗಣ್ಣುಗಳಿಂದ ನೋಡುತ್ತೀರಿ. ನಿರಾಸೆ ಕಾದಿರುತ್ತೆ... ಅಲ್ಲಿನ ಎಲ್ಲ ಸೀಟುಗಳೂ ಭರ್ತಿಯಾಗಿರುತ್ತವೆ. ಉ... ಕಾಲೇಜುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವು... ಅನಿವಾರ್ಯ ಆಗುತ್ತದೆ. ದೇವರ ಮೇಲೆ ಭಾರ ಹಾಕ್ತೀರಿ. ಯಾವುದೋ ಒಂದು ಕಾಲೇಜನ್ನು ಆ... ಮಾಡಿಕೊಳ್ಳುತ್ತೀರಿ. ದೇವರು ಸರಿಯಾಗಿ ತನ್ನ ಕರ್ತ... ನಿರ್ವಹಿಸಿದರೆ ಸುಮಾರು ಅನ್ನುವ ಕಾಲೇಜಾದರೂ ಸಿಕ್ಕಬಹುದು ಇಲ್ಲದೇ ಹೋದರೆ ದಕ್ಕಿದ್ದೇ ಪುಣ್ಯ ಅಂತ ತೆಪ್ಪಗಾಗುವುದು ಅನಿವಾರ್ಯವೇ ಆಗುತ್ತೆ.

ಅವತ್ತು ನಮಗೆ ಸುಮಾರು ಸಂಜೆ ಆರು ಗಂಟೆಯ ವೇಳೆಗೆ ಸಮಯ ಸಿಕ್ಕಿತು. ಬೆಳಗ್ಗೆಯೇ ಒಂದು ಫಾರಂ ಕೊಟ್ಟಿದ್ದರು. ಅದನ್ನು ಭರ್ತಿ ಮಾಡಬೇಕಿತ್ತು, ತಮ್ಮನ ಮಗಳು ಪೆನ್ನು ತಂದಿರಲಿ... ನಾನು ನನ್ನ ಪೆನ್ನನ್ನೇ ಕೊಟ್ಟೆ. ಅವಳು ಭರ್ತಿ ಮಾಡಿದಳು. ಕಾಲೇಜು ಆಯ್ಕೆಗೆ ಮುನ್ನ ಭರ್ತಿ ಮಾಡಿದ ಫಾರಂ ತಪಾಸಣೆ ಇತ್ತು, ಅದನ್ನು ಮಾಡ... ಸುಮಾರು ಮೂವ್ವತ್ತು ವರ್ಷ ವಯಸ್ಸಿನ ಹೆಣ್ಣು ಮಗಳೊಬ್ಬಳು ಕುಳಿತಿದ್ದಳು. ಅವಳು ನಮ್ಮ ತುಂಬ... ಫಾರಂ ನೋಡಿದವಳೇ ವ್ಯಂಗ್ಯವಾಗಿ 'ಯಾರ್ರೀ ಭರ್ತಿ... ಮಾಡಿದ್ದು' ಅಂದಳು. ನಾವು ಸುಮ್ಮನೆ ನಿಂತಿದ್ದೆವು.

'ಹಸಿರು ಇಂಕಲಿ ಯಾಕ್ರೀ ಮಾಡಿದ್ರಿ' ಎಂದು ಕೇಳುತ್ತಾ ಕತ್ತೆತ್ತಿ ನೋಡಿದಳು. ಅರ್ಜಿ ಫಾರಂ ಭರ್ತಿ... ಮಾಡಿ ಎಂದಷ್ಟೇ ನಮಗೆ ತಿಳಿಸಿದ್ದರು. ಯಾವ ಬ... ಇಂಕಿನಲ್ಲಿ ಭರ್ತಿ ಮಾಡಬೇಕೆಂಬ ಸೂಚನೆ ಕೊಟ್ಟಿರಲಿಲ್ಲ, ಏನಾದರೂ ಮಾತನಾಡಿದರೆ ಏನು ತಕರಾರು ತೆಗೆಯುವಳೋ ಎಂದು ದಿಗಿಲಾಯಿತು. ಹ್ಯಾಪು ಮೋರೆ ಹಾಕಿಕೊಂಡು ನಿಂತೆ. ಆಕೆಯೇ 'ನೀವೇನು ಗೆಜೆಟೆಡ್ ಆಫೀಸ್‌ರೇನ್ರಿ ಗ್ರೀನ್ ಇಂಕ್ ಉಪಯೋಗಿಸೋಕೆ' ಅಂತ ಕೇಳಿದಳು. ಗೆಜೆಟೆಡ್ ಆಫೀಸರುಗಳು ಮಾತ್ರ ಗ್ರೀನ್ ಇಂಕ್ ಬಳಸಬೇಕ... ಅದು ಅವರ ಪೇಟೆಂಟ್ ಅಂತೆ! ನನಗೆ 'ತಾಯಿ ನಾನೂ ಗೆಜೆಟೆಡ್ ಆಫೀಸರ್ರೇ. ಅಷ್ಟು ಮಾತ್ರ ಅಲ್ಲ... ನೂರಾರು ಗೆಜೆಟೆಡ್ ಆಫೀಸರ್‌ಗಳನ್ನು ತಯಾರು ಮಾಡೋ ಕೆಲಸದಲ್ಲಿರೋನು' ಎಂದು ಹೇಳುವ ಮನಸ್ಸಾದರೂ ತಡೆದುಕೊಂಡೆ.

ಆಕೆ ಪ್ರಾಯಶಃ ಎರಡನೆ ದರ್ಜೆ ಗುಮಾಸ್ತೆ ಹಂತದವಳು. ನಾನು ಕೆಲಸ ಮಾಡುವ ಕಡೆ ಆಕೆ ಇದ್ದಿದ್ದರೆ ಬೆಲ್ ಮಾಡಿದರೆ ಹುಜೂರ್ ಅಂತ ಓ... ಬರುವವಳು. ಅರ್ಜಿ ಪರಿಶೀಲಿಸುವ ಅಧಿಕಾರ ಸಿಕ್ಕಿದ್ದಕ್ಕೇ ಈ ರೀತಿಯ ವರ್ತನೆ ಬರಬೇಕೆ? ಆಕೆ ಜಾಗದಲ್ಲಿ ನಿಂತಿದ್ದು ನಾನು ಆಕೆಯ ಸ್ಥಾನದಲ್ಲಿ ಕುಂತಿದ್ದು ಈ ರೀತಿ ನಡೆದುಕೊಂಡಿದ್ದರೆ ಆಕೆಯ ಮನಸ್ಸಿಗೆ ಎಂತಹ ನೋವು ಆಗುತ್ತಿತ್ತು?


ಕ್ಷೇತ್ರ ಯಾವುದೇ ಇರಲಿ, ವ್ಯಕ್ತಿ ಯಾರೇ ಇರ... ಇಂತಹ ನಡವಳಿಕೆಗಳು ಸಾಮಾನ್ಯ. ಅಧಿಕಾರದಲ್ಲಿರುವವರು ತಮ್ಮ ಕೈಕೆಳಗಿನವರ ಸ್ಥಾನ... ತಮ್ಮನ್ನು ಕಲ್ಪಿಸಿಕೊಂಡು ತಮ್ಮ ನಡವಳಿಕೆಯನ್ನು ಮಾರ್ಪಡಿಸಿಕೊಂಡರೆ ಸಂವಹನ ಸುಲಭ ಆಗುತ್ತದೆ... ಸೌಹಾರ್ದತೆ ಮೂಡುತ್ತದೆ. ಕ್ಲೇಶಗಳು ದೂರ ಆಗುತ್ತವೆ. ವಾತಾವರಣ ಆಹ್ಲಾದಕರವಾಗುತ್ತದೆ. ಕೆ... ಕೆಲಸ ಅನ್ನಿಸುವುದಿಲ್ಲ, ಬಿಡುವು ಅನ್ನಿಸುತ್ತದೆ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ತಂತ್ರೋಕ್ತಿಗಳು



ಕುಲಚೂಡಾಮಣಿ ತಂತ್ರದಲ್ಲಿ ಮೊದಲ ಅಧ್ಯಾಯ ಪ್ರಾರಂಭವಾಗುವುದು ಹೀಗೆ.

ಭೈರವನು ಹೇಳುತ್ತಾನೆ, "ಕಾಳಿಕೆಯ ತ್ರಿಪುರ ತಂತ್ರಗಳು ಅಸಂಖ್ಯ, ವಾಗೀಶ್ವರಿ, ಅಸಂಖ್ಯ ಮತ್ತು ಸುಂದರ ಕುಲಾಕುಲಗಳನ್ನು ಹೊಂದಿರುವ ಮಾತಂಗಿನಿ, ಪೂರ್ಣ, ವಿಮಲ, ಚಂಡನಾಯಿಕಾ, ತ್ರಿಪುರ ಏಕಜಾತ, ದುರ್ಗಾ ಮತ್ತು ಕುಲಸುಂದರಿ ಹಾಗೆಯೇ ವೈಷ್ಣವ, ಗಾಣಪತ್ಯ, ಸೌರ, ಶೈವ ಮತ್ತು ಶಂಕರನ ವಿವಿಧ ತತ್ವ ಸಿದ್ಧಾಂತಗಳು. ಮಹಾಸಾರಸ್ವತ, ಯೋಗಿನೀಜಾಲ, ಶಂಬರ, ತತ್ವಶಂಬರ, ಎಂಟು ಭೈರವಗಳು, ಎಂಟು ಬಹುರೂಪಗಳು, ಜ್ಞಾನ, ಯಮಳ, ತಂತ್ರಜ್ಞಾನ, ವಾಸುಕಿ, ಮಹಾಸಮ್ಮೋಹನ, ಮಹಾಸೂಕ್ಷ್ಮ, ವಾಹನ ಮತ್ತು ವಾಹನೋತ್ತರಂ, ಹೃಧೇದ, ಗುಹ್ಯತತ್ವ, ಕಾಮಿಕಾ, ಕಾಲಪಾಕ, ಕುಬ್ಜಿಕಮಾತಾ, ಮಾಯೋತ್ತರ, ವಿನ, ತ್ರೋದಲೋತ್ತರ, ಪಂಚಾಮೃತ, ರೂಪಭೇದ, ಭೂತಾಧಮಾರ, ಕುಲಸಾರ, ಕುಲ್ಲೋದಿಸ, ವಿಶ್ವಾತ್ಮಕ, ಸರ್ವಜ್ಞಾತ್ಮಕ, ಮಹಾಪಿತೃಮಾತಾ, ಮಹಾಲಕ್ಷ್ಮಿ ಮಾತಾ, ಸಿದ್ಧಿ ಯೋಗೇಶ್ವರಿ ಮಾತಾ, ಕುರೂಪಿಕಾ ಮಾತಾ, ರೂಪಿಕಾಮಾತಾ, ಸರ್ವವೀರಮಾತಾ, ವಿಮಲಮಾತಾ, ಉತ್ತರ ದಕ್ಷಿಣ ಪೂರ್ವ ಪಶ್ಚಿಮ ತಂತ್ರಗಳೇ, ನಿರುತ್ತರವೇ, ವೈಶೇಷಿಕ ಜ್ಞಾನ ತಂತ್ರ, ಶಿವಬಲಿ, ಅರುಣೇಶಾ, ಮೋಹನೇಶ, ವಿಶುದ್ಧೇಶ್ವರ" ಹೀಗೆಲ್ಲಾ ಉಲ್ಲೇಖಿಸುತ್ತಾ ಮಾತು ಮುಂದುವರಿಸುತ್ತಾ, "ಓ ಮನೋಹರವಾದ ಕುಂಡಿ ಉಳ್ಳವಳೇ, ನೀನು ನನ್ನ ಪ್ರೀತಿಸುವುದೇ ನಿಜವಾದಲ್ಲಿ ಈ ಮೇಲೆ ತಿಳಿಸಿದವುಗಳೆಲ್ಲದರ ಸಾರಸತ್ವವನ್ನು ನನಗೆ ಹೇಳು" ಎಂದು ಕೇಳಿಕೊಳ್ಳುತ್ತಾನೆ. ಅವನು ಎಲ್ಲಾ ಸಿದ್ಧಾಂತಗಳನ್ನು ಬಲ್ಲವನಾಗಿರುತ್ತಾನೆ. ಆದರೆ ಅವನು ಆನಂದವನ್ನು ಹೊಂದಿರುವುದಿಲ್ಲ, ಹಾಗಾಗಿ ಆ ಭೈರವನು ಭೈರವಿಯನ್ನು ಕೇಳುವುದು.

ಈ ಭಾಗವನ್ನು ನೋಡಿದರೆ ಸ್ಪಷ್ಟವಾಗುವುದು ಏನೆಂದರೆ, ಕುಲಚೂಡಾಮಣಿ ತಂತ್ರವು ಹಲವು ತಂತ್ರಶಾಸ್ತ್ರಗಳ ನಂತರ ಬಂದಿರುವುದು. ಹಾಗೆಯೇ ಅವುಗಳೆಲ್ಲದರ ಅಧ್ಯಯನ ಮತ್ತು ಅನುಭವವನ್ನು ಘನೀಭವಿಸಿ ಈ ಕೃತಿಯನ್ನು ನಿರೂಪಿಸಿರುವ ಸಾಧ್ಯತೆಗಳಿರುತ್ತವೆ.

"ಕೇಳು ದೇವಾ," ದೇವಿಯು ಭೈರವಿ ಎಂಬ ಹೆಸರಿನಲ್ಲಿ ಈ ರೀತಿಯಾಗಿ ಹೇಳುವಳು, "ನಾನು ಮಹಾ ಪ್ರಕೃತಿ, ಪ್ರಜ್ಞೆ, ಆನಂದ, ಶುದ್ಧ ಸಾರ ಹಾಗೂ ದೈವಿಕವಾಗಿ ಆರಾಧಿಸಲ್ಪಡುವವಳು. ನಾನೆಲ್ಲಿರುವೆನೋ ಅಲ್ಲಿ ಬ್ರಹ್ಮ, ಹರಿ, ಶಂಭು ಅಥವಾ ಯಾವುದೇ ದೇವತೆಗಳಿರುವುದಿಲ್ಲ, ಸೃಷ್ಟಿ, ಸ್ಥಿತಿ ಮತ್ತು ಲಯಗಳೂ ಇರುವುದಿಲ್ಲ, ನಾನೆಲ್ಲಿರುವೆನೋ ಅಲ್ಲಿ ಮೋಹವಿಲ್ಲ, ಸಂತೋಷವಿಲ್ಲ, ಸಂಕಟವಿಲ್ಲ, ಕೈವಲ್ಯವಿಲ್ಲ, ಒಳಿತೆಂಬುದಿಲ್ಲ, ಶ್ರದ್ಧೆ ಎಂಬುದಿಲ್ಲ, ನಾಸ್ತಿಕತೆ, ಗುರು ಅಥವಾ ಶಿಷ್ಯ ಏನೂ ಇರುವುದಿಲ್ಲ, ನನಗೆ ಸೃಷ್ಟಿಯ ಆಶಯವಾದಾಗ ನಾನೇ ಮಾಯೆಯಿಂದ ಆವರಿಸಲ್ಪಟ್ಟು ಮೂರಾಗುತ್ತೇನೆ (ಸೃಷ್ಟಿ ಸ್ಥಿತಿ ಮತ್ತು ಲಯ). ನಾನೇ ಪರವಶಳಾಗಿ ನನ್ನೊಡನೆ ಪ್ರೇಮದಲ್ಲಿ ತೊಡಗುತ್ತೇನೆ. ನಾನು ವಿಕಾರಿಣಿ. ಹಲವು ವಸ್ತುಗಳಿಗೆ (ವಿಷಯಗಳಿಗೆ) ಜನ್ಮ ಕೊಡುತ್ತೇನೆ." ಹೀಗೆನ್ನುವ ಅವಳ ಮಾತು ಪ್ರಕೃತಿಯ ಪ್ರತಿನಿಧಿಯಾಗಿಯೇ ಧ್ವನಿಸುತ್ತದೆ ಅಥವಾ ನಿರೂಪಕ ಪ್ರಕೃತಿಯನ್ನು ಭೈರವಿ ಎಂಬ ಪ್ರತಿಮಾರೂಪದಲ್ಲಿ ನಿಲ್ಲಿಸಿ ಮಾತಾಡಿಸುತ್ತಾನೆ. ಅಧಿಪತಿ ಅಥವಾ ಅದಿದೈವತೆಗಳನ್ನು ನಿರಾಕರಿಸುತ್ತಾ, ಭಾವನೆಗಳ ವಿವಿಧ ಅಭಿವ್ಯಕ್ತಗಳನ್ನೂ ಅಥವಾ ದ್ವಂದ್ವಗಳನ್ನೂ ನಿರಾಕರಿಸುತ್ತಾನೆ. ಸುಖವೂ ಇಲ್ಲ, ದುಃಖವೂ ಇಲ್ಲ, ಬಂಧನವಿಲ್ಲ, ಮುಕ್ತಿಯಿಲ್ಲ, ಇದೊಂದು ಉನ್ನತವಾದ ಮತ್ತು ಸರಳ ಪ್ರಜ್ಞೆಯಾಯಿತು.

ಇರಲಿ, ಆದಿಮ ಕಾಲದಲ್ಲಿ ಶಿಶುವಿನ ಜನನಕ್ಕೆ ಪುರುಷನು ಕಾರಣನು ಎಂಬ ಅರಿವೇ ಇಲ್ಲದ ಕಾಲದ ಮುಗ್ಧತೆಯನ್ನೂ ಧ್ವನಿಸುತ್ತದೆ. ಸ್ತ್ರೀಯು ತನ್ನ ಆನಂದಕ್ಕೆ ಪುರುಷನೊಡನೆ ಸಂಭೋಗವೆಂಬ ಆಟವಾಡುತ್ತಿದ್ದರೂ, ಅದು ಮಗುವಿನ ಜನನಕ್ಕೆ ಕಾರಣವಾಗಿತ್ತೆಂಬ ಅರಿವಿಲ್ಲದ ವಿಷಯವನ್ನು ನೆನಪಿಸುತ್ತದೆ. ತನ್ನಲ್ಲಿ ಸೃಷ್ಟಿಕಾರ್ಯವು ತನ್ನಿಂದಲೇ ಆಗುತ್ತದೆ ಎಂದು ಭಾವಿಸಿದ್ದ ಆದಿಮ ಮಹಿಳೆಯು ನೆನಪಾಗುತ್ತಾಳೆ. ಹೆರುವಾಗ ತಾನೇ ಬಯಸಿ ಶಿಶುವನ್ನು ಹೊರಕ್ಕೆ ತರುವುದು ಎಂಬ ಭಾವದ ಪದರ ಕಾಣುತ್ತದೆ.

ಕುಲಚೂಡಾಮಣಿ ತಂತ್ರದಲ್ಲಿ ಉಲ್ಲೇಖಿತವಾಗಿರುವ ಅನೇಕಾನೇಕ ತಂತ್ರಗಳನ್ನು ಗಮನಿಸಿದರೆ ಇದು ಅಷ್ಟು ಪ್ರಾಚೀನವೆಂದೆನಿಸದು. ಆದರೆ ಭೈರವಿ ದೇವಿಯ ಮಾತುಗಳನ್ನು ಕೇಳಿದರೆ ಆದಿಮ ಕಾಲದ ಧ್ವನಿ ಪ್ರತಿಧ್ವನಿಸುತ್ತದೆ ಅಥವಾ ಆದಿಮ ಕಾಲದ ಸ್ತ್ರೀ ತತ್ವದ ಅರಿವಿನ ಪ್ರತಿಬಿಂಬವಾಗಿ ರೂಪಕದಲ್ಲಿ ಮಾತಾಡುತ್ತಾಳೆ. ಅದೇನೇ ರೂಪಕಗಳಿರಲಿ, ದೇವಿ ಎಂದಾಕ್ಷಣಾಕ್ಷಣ, ಪ್ರಕೃತಿಗೆ ಸಂಕೇತವೆಂದು ಭಾವಿಸುವುದು ಏನೂ ತಪ್ಪಾಗಲಾಗದು.

ಆದರೆ, ಪ್ರಕೃತಿಯೊಂದಿಗೇ ಶಕ್ತಿ, ಗುಣ, ಸ್ವಭಾವ, ಸೃಷ್ಟಿ, ಪ್ರಜ್ಞೆ, ಭಾವನಾಶಕ್ತಿ ಇತ್ಯಾದಿಗಳೂ ಕೂಡ ಜೊತೆಜೊತೆಗೇ ಸಂಕೇತಗಳಿಗೆ ಸಾಮ್ಯತೆಗೆ ಬರುತ್ತವೆ.


ರಹಸ್ಯ ಮೌಖಿಕ ಕಲಿಕೆಗಳು

ಅದೇನೇ ಇರಲಿ, ಕುಲಚೂಡಾಮಣಿ ತಂತ್ರವನ್ನು ರಹಸ್ಯವಾಗಿ ಸಾಧನೆ ಮಾಡಬೇಕೆಂದು ಅದರ ವಿಧಿವಿಧಾನಗಳು ತಿಳಿಸುತ್ತದೆ. ಕೊನೆಯ ಅಧ್ಯಾಯದಲ್ಲಿ ಹೇಳುವಂತೆ ಈ ಕುಲಚೂಡಾಮಣಿಯನ್ನು ವಿಷ್ಣು, ಬ್ರಹ್ಮ ಅಥವಾ ಗಣಪ ಯಾರಿಗೂ ಕೂಡ ಬೋಧಿಸಿಲ್ಲವೆಂದು ತಿಳಿಸುತ್ತಾಳೆ. ಕುಲಾಚಾರವೆನ್ನುವ ಈ ರಹಸ್ಯ ಸಾಧನೆಯನ್ನು ನಾಸ್ತಿಕರಿಗೆ, ಮೂರ್ಖರಿಗೆ, ಪಶು ಸಮಾನವಾದವರಿಗೆ, ಜೊತೆಗೆ ದ್ವಿಜರಿಗೆ (ಬ್ರಾಹ್ಮಣರಿಗೆ) ಹೇಳಿಕೊಡಬಾರದು ಎಂದು ಹೇಳುವುದನ್ನು ಕೇಳಿದರೆ ಕೊಂಚ ಅಚ್ಚರಿಯೇ ಎನಿಸುತ್ತದೆ. ಮೌಖಿಕ ಪರಂಪರೆಯಿಂದ ಬರುತ್ತಿದ್ದಂತಹ ಈ ವಿದ್ಯೆಯನ್ನು ಬ್ರಾಹ್ಮಣರಿಗೆ ಹೇಳಿಕೊಡಬಾರದು ಎಂದು ಭೈರವಿಯು ಹೇಳುವ ಕಾರಣ ಆ ಕಾಲದ ವೈದಿಕ ವಿರೋಧವೋ ಅಥವಾ ಬೇರಿನ್ನೇನಿದೆಯೋ ತಿಳಿಯದು.

ಆಧ್ಯಾತ್ಮದ ಸೂಕ್ಷ್ಮತೆಯ ಬಗ್ಗೆ ಕುಲಚೂಡಾಮಣಿ ಅನಾವರಣ ಮಾಡುತ್ತಾ, ಅದನ್ನು ಪಡೆಯಲು ತಂತ್ರಗಳನ್ನು ಹೇಳಿಕೊಡುತ್ತಾ ಹೋಗುತ್ತದೆ. ಈ ತಂತ್ರಗಳನ್ನು ಬಹಳ ಕಾಲದಿಂದ ಮೌಖಿಕ ಪರಂಪರೆಯಲ್ಲೇ ಗುರುವಿನಿಂದ ಶಿಷ್ಯರಿಗೆ ದಾಟಿಸಲಾಗುತ್ತಿತ್ತು, ಒಂದು ತಂತ್ರಗಳನ್ನು ರಹಸ್ಯವಾಗಿ ಇಡುವ ಉದ್ದೇಶವಾದರೆ, ಮತ್ತೊಂದು ಅಪಾತ್ರರು ತಂತ್ರಗಳನ್ನು ಅಪಬಳಕೆ ಮಾಡಬಾರದು ಎಂಬುದೂ ಕೂಡ ಆಗಿತ್ತು, ಹೀಗಾಗಿ ನೂರಾರು ವರ್ಷಗಳ ಕಾಲ ಇವುಗಳು ಮೌಖಿಕ ಪರಂಪರೆಯಲ್ಲಿಯೇ ಸಾಗಿಬರುತ್ತಿತ್ತು.

ಬರಿಯ ಮೌಖಿಕವಾಗಿ ಸಾಗಿಬರುತ್ತಿದ್ದ ವಿದ್ಯೆಗಳು, ಶಾಸ್ತ್ರಗಳು ಅಥವಾ ರಹಸ್ಯಗಳು ಹಾದಿ ತಪ್ಪುತ್ತಿರಲಿಲ್ಲವೇ? ಅಥವಾ ತಮ್ಮದಿನ್ನೇನನ್ನೋ ಬೆರೆಸಿ ಅಥವಾ ತಮಗಿಷ್ಟವಿರದಿದ್ದನ್ನು ತೆಗೆದುಹಾಕಿ, ತಿರುಚಿ ಹೇಳುತ್ತಿರಲಿಲ್ಲವೇ? ಇಲ್ಲ, ಹಾಗಾಗುತ್ತಿರಲಿಲ್ಲ. ಮಾತಿನ ಬಗ್ಗೆ ಪ್ರಜ್ಞೆಯು ಅಂದಿನ ಜನರಲ್ಲಿ ಅತ್ಯಂತ ಜಾಗೃತವಾಗಿಯೂ ಮತ್ತು ಪ್ರಾಮಾಣಿಕವಾಗಿಯೂ ಇತ್ತು. ಏಕೆಂದರೆ ಮತ್ತದೇ ಪ್ರಕೃತಿಯ ರಾಗವನ್ನು ಹಾಡುತ್ತೇನೆ. ಪ್ರಾಕೃತಿಕವಾಗಿರುವುದು ಯಾವುದೇ ಆದರೂ ತನ್ನ ಸ್ವಭಾವಕ್ಕೆ ಅನುಗುಣವಾಗಿ ಅಭಿವ್ಯಕ್ತಿಯಾಗುತ್ತದೆ. ಹಾಗಾಗಿ ಸ್ವಭಾವಕ್ಕೆ ಅಥವಾ ಯಾವುದೇ ವಸ್ತುವಿನ ಆಂತರಿಕ ಗುಣಕ್ಕೂ ಪ್ರಕೃತಿ ಎಂಬ ಶಬ್ದವನ್ನು ಸಮಾನಾರ್ಥಕವಾಗಿ ಬಳಸುವುದು. ನಾವು ಕೇಳುತ್ತೇವೆ. ಆ ಸ್ಥೂಲಕಾಯದ ವ್ಯಕ್ತಿ ಏನು ಮಾಡಿದರೂ ಸಪೂರ ಆಗುವುದಿಲ್ಲ. ಅವನ ದೇಹ ಪ್ರಕೃತಿಯೇ ಹಾಗಿದೆ ಎಂದು. ಅದು ದಪ್ಪ ಸಣ್ಣಗಾಗುವುದರಲ್ಲಿ ಏಕ ಪ್ರಕಾರವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಆದರೆ, ಪ್ರಕೃತಿಯೆಂದರೆ ಮೂಲ ಸ್ವಭಾವ ಎಂದು ಅರ್ಥ ಮಾಡಿಕೊಳ್ಳಲು ಈ ಉದಾಹರಣೆ ಹೇಳಬೇಕಾಯ್ತು.

ಸರಿ, ಮಂಜಿನ ಗಡ್ಡೆ ಒಂದು ಪ್ರಾಕೃತಿಕ ವಸ್ತು, ತಂಪು ಅದರ ಪ್ರಕಟಣೆ. ಮಂಜುಗಡ್ಡೆಯು ತನ್ನ ಸ್ವಭಾವವು ಮೂಲತಃ ತಂಪಿರುವಂತಹದ್ದು. ಹಾಗಾಗಿ ನಾನು ತಂಪನ್ನೇ ಕೊಡಬೇಕು ಎಂದು ಉದ್ದೇಶಪೂರ್ವಕವಾಗಿ ಅಥವಾ ಆಶಯದಿಂದ ತಂಪನ್ನು ಕೊಡುವುದಿಲ್ಲ, ಹಾಗೆಯೇ ಸದಾ ತಂಪನ್ನು ಕೊಟ್ಟು ಕೊಟ್ಟು ಬೋರ್ ಆಗಿದೆ. ಫಾರ್ ಎ ಚೇಂಜ್ ಅಂತ ಒಮ್ಮೆ ಬಿಸಿ ಕೊಡುವುದಿಲ್ಲ, ಮಂಜುಗಡ್ಡೆಯ ಪ್ರಕೃತಿಯೇ ತಂಪು. ಅದು ತನ್ನ ಪ್ರಕೃತಿಗೆ ಸಹಜವಾಗಿ ತಂಪನ್ನೇ ಸೂಸುತ್ತದೆ. ಮಲ್ಲಿಗೆ ತನ್ನ ಪರಿಮಳವನ್ನು ಪಸರಿಸಿದಂತೆ. ಸಂಪಿಗೆ ತನ್ನದನ್ನ ಬೀರಿದಂತೆ. ಸೂರ್ಯ ಬಿಸಿಲನ್ನು ನೀಡಿದಂತೆ. ಮೋಡಗಳು ಮಳೆಗರೆದಂತೆ. ಸೂರ್ಯ ಫಾರ್ ಎ ಚೇಂಜ್ ಅಂತ ಒಮ್ಮೆ ಮಳೆಗರೆಯಲು ಆಗದು. ಮೋಡಗಳು ಬಿಸಿಲೂಡಲು ಆಗದು.



ಪ್ರಕೃತಿ ಧರ್ಮದ ವೈಶಿಷ್ಟ್ಯವೇ ಇದು. ಪ್ರಕೃತಿಯ ಸ್ವಾರಸ್ಯ ಮತ್ತೂ ಹೆಚ್ಚಿನದು ಎಂದರೆ ಅವೆಲ್ಲವೂ ಪೈಪೋಟಿಗಳಿಲ್ಲದೇ, ತಮ್ಮ ಪ್ರಕೃತಿ ಸ್ವಭಾವವನ್ನು ಯಾವ ಮೇಲರಿಮೆ ಮತ್ತು ಕೀಳರಿಮೆಗಳಿಲ್ಲದೇ ಸಹಜವಾಗಿ ಅಭಿವ್ಯಕ್ತಿಸುತ್ತಾ ಸಾಮರಸ್ಯದಲ್ಲಿರುವುದು. ಮೇಲರಿಮೆ ಮತ್ತು ಕೀಳರಿಮೆಗಳಿಂದಲೇ ಸಾಮರಸ್ಯ ಕೆಡುವುದು. ಐಕ್ಯತೆ ಇಲ್ಲದಿರುವುದು.

ಮಾತೆಂಬ ಸಹಜ ಪ್ರಕಟಣೆ

ಯಾವ ಜನ ಅಥವಾ ಜನಾಂಗ ಅಥವಾ ಕುಲಗಳು ಅಥವಾ ಸಮೂಹಗಳು ಅಥವಾ ವ್ಯಕ್ತಿಗಳು ಪ್ರಕೃತಿ ಧರ್ಮಕ್ಕೆ ಸಹಜವಾಗಿ ಬದ್ಧರಾಗಿರುತ್ತಾರೋ ಅವರಲ್ಲಿ ಮೇಲರಿಮೆ, ಕೀಳರಿಮೆಗಳಿರುವುದಿಲ್ಲ, ಪೈಪೋಟಿ ಇರುವುದಿಲ್ಲ, ತನಗಾಗಿ, ತನ್ನವರಿಗಾಗಿ ಎಂಬ ಸಂಗ್ರಹ ಬುದ್ಧಿ ಇರುವುದಿಲ್ಲ, ತನ್ನ ಸ್ವಭಾವ ಅಥವಾ ಗುಣ ಧರ್ಮ ಏನೋ ಅದಕ್ಕೆ ವಿರುದ್ಧವಾದ ಭಾವನೆಗಳನ್ನು ವ್ಯಕ್ತಪಡಿಸುವುದಿಲ್ಲ, ಒಳಗೆ ಅಸೂಯೆ ಅಥವಾ ಅಸಹನೆ ಇದ್ದರೂ ಎದುರು ದೇಶಾವರಿ ನಗೆ ಬೀರುತ್ತಾ ನಿಮ್ಮ ಸಂಗದ ಇರುವುದೇ ನನ್ನ ಭಾಗ್ಯ ಎನ್ನುವುದಿಲ್ಲ.


ಇರಲಿ, ವಿಷಯಕ್ಕೆ ಬರುತ್ತೇನೆ. ಮಾತು ಒಬ್ಬರ ಗುಣ ಧರ್ಮದ ಅಭಿವ್ಯಕ್ತಿ ಸ್ವಭಾವ (ತನ್ನದೇ ಆದ ಭಾವದ) ಪ್ರಕಟಣೆ. ಮಲ್ಲಿಗೆಯಿಂದ ಪರಿಮಳವು ಹೊರಬಂದಂತೆ, ವ್ಯಕ್ತಿಯಿಂದ ಮಾತು ಅವನ ಸ್ವ-ಭಾವದ, ನಿಜವಾದ ಗುಣಧರ್ಮದ ಪ್ರಕಟಣೆ. ನೈಸರ್ಗಿಕವಾಗಿರುವ ಮನುಷ್ಯನಿಂದ ಮಾತುಗಳು ಸೂರ್ಯನಿಂದ ಬಿಸಿಲು ಬಂದಂತೆ ಬರುತ್ತವೆ. ಸ್ವಭಾವ ಬಿಸಿಯ ವಸ್ತುವಾಗಿದ್ದು ಮಾತು ತಂಪಿನ ಮಳೆಗರೆಯುವುದಿಲ್ಲ, ಒಳಗೇನೋ ಹೊರಗೆ ಬರುವುದೂ ಅದೇ. ಪ್ರಕೃತಿಯ ಮಕ್ಕಳಾಗಿದ್ದು ತಮ್ಮ ಪ್ರಕೃತಿಗೆ ತಕ್ಕಂತೆ ನಡೆದುಕೊಳ್ಳುತ್ತಿದ್ದ ಜನರ ಮಾತು ಅಷ್ಟೇ ನೈಜವಾಗಿರುತ್ತಿತ್ತು, ಹಾಗಾಗಿ ಯಾರೂ ಮಾತು ತಪ್ಪುತ್ತಿರಲಿಲ್ಲ, ಮಾತು ಎಂದರೆ ಮಾತು. ಈಗಲೂ ಮಾತಿನ ಬದ್ಧತೆಗೆ ಹಿರಿಯರು ನಾಲಿಗೆಯನ್ನು ತೋರಿಸುತ್ತಾರೆ. ನಾಲಿಗೆ ಎಂಬ ಕರಣವು ಆ ವ್ಯಕ್ತಿಯ ನೈಜವಾದ ಸ್ವಭಾವವನ್ನು ಹೊರಹಾಕುತ್ತದೆ ಮತ್ತು ಅವನು ಅದಕ್ಕೆ ಸಹಜವಾಗಿ ಬದ್ಧನಾಗಿರುತ್ತಾನೆ ಎಂದರ್ಥ. ಹಾಗಾಗಿಯೇ ಮಾತು ಎಂದರೆ ವಚನ. ವಾಗ್ದಾನ. ಅದಕ್ಕೆ ಅಷ್ಟು ಮಹತ್ವ.

ಮೌಖಿಕ ಪರಂಪರೆಯಲ್ಲಿ ಬರುತ್ತಿದ್ದಂತಹ ವಿದ್ಯೆಯನ್ನು ಯಥಾವತ್ತಾಗಿ ಕಲಿಯುತ್ತಿದ್ದರು. ಒಂದು ವೇಳೆ ತಮಗೆ ಸಮ್ಮತಿ ಇರದಿದ್ದರೆ ಅದನ್ನು ನಿರಾಕರಿಸುತ್ತಿದ್ದರು. ಸಮ್ಮತಿಸುವುದರಲ್ಲಿ ಅಥವಾ ನಿರಾಕರಿಸುವುದರಲ್ಲಿ ಪ್ರಾಮಾಣಿಕತೆ ಇರುತಿತ್ತು. ಹಾ, ಪ್ರಾಮಾಣಿಕತೆ ಎಂಬುದು ನೈಸರ್ಗಿಕವಲ್ಲ, ಅದು ಮನುಷ್ಯಕೃತ. ಪ್ರಮಾಣ ಮಾಡುವುದು, ಪ್ರತಿಜ್ಞೆ ಮಾಡುವುದು, ಆಣೆ ಮಾಡುವುದು, ತಾನು ಸತ್ಯವಂತ ಅಥವಾ ಸಾಚಾ ಎಂದು ನಿರೂಪಿಸಿಕೊಳ್ಳಲು ಯಾವುದೇ ರೀತಿಯ ಪ್ರಮಾಣ ಮಾಡುವುದು ನೈಸರ್ಗಿಕವಲ್ಲ. ಪ್ರಮಾಣದ ಮೂಲ ನಿರೂಪಿಸುವುದು ಪ್ರಾಮಾಣಿಕತೆ.

ಮನೋಲೋಕ ಪ್ರಾಮಾಣಿಕತೆ

ಒಬ್ಬ ಮನುಷ್ಯ ಮನೆಗೆ ಕಾವಲು ಕಾಯಲು ಬುದ್ಧಿಪೂರ್ವಕವಾಗಿ ಒಪ್ಪಿದ್ದಾನೆ. ಮನೆ ಎಂದಮಾತ್ರಕ್ಕೆ ಮನೆಯಲ್ಲಿನ ಜನ, ದನ, ಧನ, ಇತರ ವಸ್ತುಗಳ ಸಮೇತವಾಗಿಯೇ ನೋಡಿಕೊಳ್ಳಬೇಕಾಗುತ್ತದೆ. ಮನೆಗೆ ಕಾವಲು ಎಂದರೆ ಮನೆಯಲ್ಲಿರುವ ಜನಕ್ಕಲ್ಲ ಬರಿಯ ಕಟ್ಟಡಕ್ಕೆ ಎಂದರೆ ಅದು ಮೂರ್ಖತನವಾಗುತ್ತದೆ. ಅದೇ ರೀತಿ ಮನೆಯಲ್ಲಿರುವ ಯಾವುದೇ ವಸ್ತುವನ್ನು ತಾನೇ ತೆಗೆದುಕೊಳ್ಳಬಹುದಾದ ಸಂದರ್ಭವೊದಗಿದರೂ ಅದನ್ನು ಹೊಂದದೇ ತಾನು ನೋಡಿಕೊಂಡಿದ್ದು ವಸ್ತುವನ್ನು ಮನೆಯವರಿಗೆ ಒಪ್ಪಿಸುವ ಕೆಲಸ ಮಾಡುತ್ತಾನೆ. ಅದು ಅವನ ಪ್ರಾಮಾಣಿಕತೆ. ಏಕೆಂದರೆ ಮನೆಯನ್ನು ಮತ್ತು ಅದರ ಸಕಲ ವಸ್ತುಗಳನ್ನು ನೋಡಿಕೊಳ್ಳುವುದು ತನ್ನ ಕೆಲಸವೇ ಹೊರತು, ಅದಕ್ಕೆ ಬುದ್ಧಿಪೂರ್ವಕವಾಗಿ ಒಪ್ಪಿರುವುದರಿಂದ ಆ ವಸ್ತುವನ್ನು ತನಗೆಂದು ಎತ್ತಿಕೊಳ್ಳುವುದಾಗಲಿ, ಬಳಸುವುದಾಗಲಿ ಕರಾರಿನಂತೆ ಸಲ್ಲದು. ತಾನು ಯಾವ ಕೆಲಸವನ್ನು ಮಾಡುತ್ತೇನೆಂದು ಅಂತರಂಗದಲ್ಲಿ ಪ್ರಮಾಣ ಮಾಡಿರುತ್ತೇನೋ ಅದಕ್ಕೆ ಯಾವ ಪ್ರಲೋಭನೆಗಳಿಗೆ ಒಳಗಾಗದೇ ಬದ್ಧವಾಗಿರುವುದು ಪ್ರಾಮಾಣಿಕತೆ. ಆದರೆ ನಿಸರ್ಗದಲ್ಲಿ ಪ್ರಾಮಾಣಿಕತೆ ಎಂಬುದರ ವಿಷಯವೇ ಇಲ್ಲ, ಅಲ್ಲಿರುವುದು ಬರೀ ಸಹಜತೆ. ಮನುಷ್ಯನದು ಮೂರು ಲೋಕಗಳು. ಒಂದು ಮನೋಲೋಕ. ಇನ್ನೊಂದು ಭಾವಲೋಕ. ಮತ್ತೊಂದು ಇಹಲೋಕ. ಪ್ರಾಮಾಣಿಕತೆ ಎಂಬುದು ಮನೋಲೋಕಕ್ಕೆ ಸಂಬಂಧಿಸಿದ್ದು, ಅದರಲ್ಲಿ ಆಲೋಚನೆ, ಚಿಂತನೆ, ವೈಚಾರಿಕತೆ, ಉದ್ದೇಶ, ಆಶಯ ಇತ್ಯಾದಿ ವಿಷಯಗಳ ಕಾರುಬಾರು. ಇನ್ನು ಭಾವಲೋಕದಲ್ಲಿ ನವರಸಗಳ ಸ್ಫುರಣ. ಭಾವನೆಗಳ ಅಲೆಗಳು. ಭಾವುಕತೆಗಳ ತಾಕಲಾಟಗಳು. ಇಹಲೋಕವೆಂದರೆ ಅದು ಇರುವುದರ ಲೋಕ. ಇರುವಿಕೆಯ ಅಸ್ತಿತ್ವ. ಇನ್ನು

▶▶ 19



ಮರಣವನ್ನು 3,000 ವರ್ಷಗಳಿಂದ ದುಷ್ಟರು ಸಂಭ್ರಮಿಸುತ್ತಿದ್ದಾ

ಸಿದ್ದರಾಮಯ್ಯನವರ ಮಗನ ಮರಣಕ್ಕೆ ಸಂಭ್ರಮಿಸಿದ ಸಂಘಿ-ಚಡ್ಡಿ-ನಾಯಿಗಳಿಗೆ, ಪಟಾಕಿ ಹಚ್ಚಿ ಸಂತಸಪಟ್ಟ ಕಲ್ಲಿನಂತ ಕಲ್ಲು ಮನಸ್ಸಿನವರಿಗೆ ಮತ್ತು ಸಿಹಿ ಹಂಚಿದ ಅತ್ಯಾಚಾರಿ ಗೋಸ್ವಾಮಿಗೆ ಧಿಕ್ಕಾರವಿರಲಿ. ಸಂಜೆಯಾದ ಕೂಡಲೇ ಗಾಂಜಾದ ನಶೆಯಲ್ಲಿ ತೇಲುವ ಕೇಸರಿ ಕಾಲಾಳುಗಳಿಗೆ ಯಾವುದು ಸರಿ ಯಾವುದು ತಪ್ಪು ಎಂದು ವಿವೇಚಿಸುವಷ್ಟು ಬುದ್ಧಿಶಕ್ತಿಯೇ ಇಲ್ಲ, ಅವರ ಸಂಘಿ ನೇತಾರರು ಪಟಾಕಿ ಹಚ್ಚಿ ಸಿಹಿ ಹಂಚಿ ಬೆತ್ತಲೆ ಕುಣಿಯಲು ಆದೇಶಿಸಿದರೆ ಗಾಂಜಾದ ನಶೆಯಲ್ಲಿ ಹಾಗೆಯೇ ಮಾಡುತ್ತಾರೆ. ಸಂಘಿಗಳ ಕಟ್ಟಿಹರುಕ ಬ್ರಹ್ಮಚಾರಿ ನೇತಾರರಿಗೆ ಹಾಗೂ ಕಾವಿಧಾರಿ ಸ್ವಾಮೀಜಿಗಳಿಗೆ ನಿಜವಾದ ತಾಯಿಯ ಪ್ರೀತಿ, ಪತ್ನಿಯ ಪ್ರೇಮ ಅಥವಾ ಮಕ್ಕಳ ಅಕ್ಕರೆ ಇವುಗಳ ಅರ್ಥವೇ ಗೊತ್ತಿಲ್ಲ, ಕಾರಣ ಅವರು ಗೋವನ್ನು ತಾಯಿ ಹಾಗೂ ಹೋರಿಯನ್ನು ತಂದೆ ಎಂದು ಭಾವಿಸುವವರು. ಗೋರಕ್ಷಣೆಯ ನಾಟಕದಡಿ ದಂಡಿಯಾಗಿ ಹಫ್ತಾ ವಸೂಲು ಮಾಡಿ ತಮ್ಮ ಐಷಾರಾಮಿ (ಹರಾಮಿ) ಜೀವನ ನಡೆಸುವ ಇವರಿಗೆ ಮಾನವ ಸಂಬಂಧಗಳ ಸೂಕ್ಷ್ಮತೆ ಅರ್ಥ ಆಗುವುದಾದರೂ ಹೇಗೆ?

ಯಾವುದೇ ಗಂಡಸು ನಾಲ್ಕಾರು ಮಕ್ಕಳ ತಂದೆಯಾದರೂ ಅವನಿಗೆ ತನ್ನ ಹೆಂಡತಿಯ ಹೆರಿಗೆ ನೋವು ಅಕ್ಷರಶಃ ಹೇಗಿರುತ್ತದೆ ಎಂದು ಕಲ್ಪಿಸಿಕೊಳ್ಳುವುದು ಹೇಗೆ ಅಸಾಧ್ಯವೋ ಹಾಗೆಯೇ ಆ ಕಚ್ಚೆಹರುಕ ಬ್ರಹ್ಮಚಾರಿ ಕೇಸರಿ ಮುಂದಾಳುಗಳಿಗೆ ಬೆಳೆದ ಮಕ್ಕಳ ಮರಣದ ನೋವು ಎಂದೂ ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಮಕ್ಕಳೇ ಇಲ್ಲದ ಈ ಬಂಜೆ ಗಂಡಸರಿಗೆ ಮಕ್ಕಳನ್ನು ಕಳೆದುಕೊಂಡಾಗ ಆಗುವ ದುಃಖ ಅರ್ಥ ಆಗಲು ಸಾಧ್ಯವಿಲ್ಲ ಬಿಡಿ. ಎಷ್ಟಾದರೂ ಇವರೆಲ್ಲಾ ದೇವರಲ್ಲೂ ಕಾಮ ಮೋಹ ತುಂಬಿ ಆ ನಿರಾಕಾರ ನಿರ್ವಿಕಾರ ನಿರ್ಮೋಹಿ ದೇವರಿಗೂ ಎರಡು-ಮೂರು ಮದುವೆ ಮಾಡಿಸಿ ಪ್ರತಿ ವರ್ಷವೂ ಶ್ರೀನಿವಾಸ ಕಲ್ಯಾಣ ನಡೆಸಿಯೂ ದೇವರಿಗೆ ಮಕ್ಕಳೇ ಆಗಲಿಲ್ಲ ಎಂದು ಪೊಳ್ಳು ಪುರಾಣ ಕಥೆ ಬರೆದವರು ಇವರೇ ತಾನೇ.

ಮಾಜಿ ಬಿಜೆಪಿ ಮುಖ್ಯಮಂತ್ರಿ ಸದಾನಂದ ಗೌಡರ ಒಬ್ಬ ಮಗ ಅಪಘಾತದಲ್ಲಿ ತೀರಿಕೊಂಡಾಗ ಅಥವಾ ಅವರ ಎರಡನೇ ಮಗನಿಗೆ ಕಾರ್ ಅಪಘಾತದಲ್ಲಿ ತೀವ್ರ ಪೆಟ್ಟಾದಾಗ ಅಥವಾ ಯಡಿಯೂರಪ್ಪನವರ ಹೆಂಡತಿ ಸಂಪ್‌ನಲ್ಲಿ ಮುಳುಗಿ ತೀರಿಕೊಂಡಾಗ ಅಥವಾ ರಘುಪತಿ ಭಟ್ಟನ ಮೊದಲ ಪತ್ನಿ ಅನುಮಾನಾಸ್ಪದವಾಗಿ ಸತ್ತಾಗ ಯಾರಾದರೂ ತಿಳಿಗೇಡಿಗಳು ಸಂಭ್ರಮಿಸಿದ್ದರೆ ಈ ಸಂಘಿಗಳಿಗೆ ಹೇಗೆ ಅನಿಸುತ್ತಿತ್ತು? ಇತ್ತೀಚೆಗೆ ಅಡ್ವಾಣಿಯವರ ಪತ್ನಿ ತೀರಿದಾಗ ಅಥವಾ ಮಾಜಿ ಪ್ರಧಾನಿ ವಾಜಪೇಯಿಯವರು ಸಂಪೂರ್ಣ ನಿಷ್ಕ್ರಿಯ ಸ್ಥಿತಿಯಲ್ಲಿರುವಾಗ ಅವರ ವಿರೋಧಿಗಳು ಸಂಭ್ರಮ ಪಡಲಿಲ್ಲ. ಸಂಘಿಗಳ ಹೊರತು ಇತರರು ಇಷ್ಟು ಕೀಳುಮಟ್ಟಕ್ಕೆ ಇಳಿಯುವುದಿಲ್ಲವಾದುದರಿಂದ ಬಿಜೆಪಿಗರ ಕುಟುಂಬದಲ್ಲಿ ಯಾರಾದರೂ ಸತ್ತಾಗ ಹೀಗೆ ಸಂಭ್ರಮಿಸುವ ರೋಗಗ್ರಸ್ತ ಮನಸ್ಸು ಸಾಮಾನ್ಯ ಜನರಲ್ಲಿ ಇಲ್ಲ.

ಹಿಂದೂ ಹಬ್ಬಗಳಲ್ಲಿ ಮುಖ್ಯವಾದವುಗಳೆಲ್ಲಾ ಸಾವಿನ ಸಂಭ್ರಮವೇ ಆಗಿದೆ. ನರಕಾಸುರನನ್ನು ಮೋಸದಿಂದ ಸತ್ಯಭಾಮೆ ಮತ್ತು ಕೃಷ್ಣ ಕೊಂದ ಮೇಲೆ ನರಕ ಚತುರ್ದಶಿ ಎಂಬ ಹಬ್ಬ ಆಚರಣೆಗೆ ಬಂತು. ರಾಮನು ರಾವಣನನ್ನು ಕೊಂದ ನೆನಪಲ್ಲಿ ದಸರೆ ದೀಪಾವಳಿ ಹಬ್ಬ ಆಚರಿಸಲಾಗುತ್ತಿದೆ. ಪ್ರಜಾಪ್ರೇಮಿ ಬಲಿ ಚಕ್ರವರ್ತಿಯನ್ನು ಆರ್ಯ ವಾಮನ ಮೋಸದಿಂದ ಕೊಂದ ಖುಷಿಯಲ್ಲಿ ಬಲಿಪಾಡ್ಯಮಿ ಆಚರಿಸಲಾಗುತ್ತಿದೆ. ಮಹಿಷಾಸುರನನ್ನು ಆರ್ಯ ಹೆಂಗಸು ಮೋಸದಿಂದ ಕೊಂದ ಸಂತಸದಲ್ಲಿ ನವರಾತ್ರಿ ಉತ್ಸವ



ಆಚರಿಸಲಾಗುತ್ತಿದೆ. ವಾನರ ಎಂಬ ಬುಡಕಟ್ಟು ಜನಾಂಗದ ನೇತಾರ ವಾಲಿಯನ್ನು ಮೋಸದಿಂದ ಕೊಂದು ರಾಮ ಲಕ್ಷ್ಮಣ ಸುಗ್ರೀವ ಕುಣಿದು ಕುಪ್ಪಳಿಸಿದರು. ಕುರುಕ್ಷೇತ್ರ ಯುದ್ಧದಲ್ಲಿ 50 ಲಕ್ಷ ಯೋಧರು, 25 ಲಕ್ಷ ಸಹಾಯಕ ಸೈನಿಕರು, 20 ಲಕ್ಷ ಆನೆ-ಕುದುರೆಗಳು- ಹೀಗೆ ಕೇವಲ ಒಂದು ಕುಟುಂಬದ ಕ್ಷುಲ್ಲಕ ಆಸ್ತಿ ಕಲಹಕ್ಕಾಗಿ ಸುಮಾರು ಒಂದು ಕೋಟಿ ಪ್ರಾಣಗಳನ್ನು ಬಲಿಕೊಟ್ಟ ಕೃಷ್ಣ ಮತ್ತು ಪಾಂಡವರು ಬ್ರಾಹ್ಮಣರನ್ನೆಲ್ಲಾ ಕರೆದು ಅವರಿಗೆ ಭೋಜನಕೂಟ ಆಯೋಜಿಸಿ ಭಾರಿ ದಾನ ಕೊಟ್ಟು ಹಬ್ಬ ಆಚರಿಸಿದರು. ಇದನ್ನು ಆಕ್ಷೇಪಿಸಿದ ಚಾರ್ವಾಕ ಋಷಿಯನ್ನು ಜೀವಂತ ಸುಟ್ಟ ಜೂಜುಕೋರ ಯುಧಿಷ್ಠಿರ ಮತ್ತು ಬ್ರಾಹ್ಮಣರೆಲ್ಲಾ ಸೋಮರಸ ಕುಡಿದು ಗೋಮಾಂಸ ತಿಂದು ಕುಣಿದಾಡಿದರು. ಮನುಷ್ಯತ್ವವೇ ಇಲ್ಲದ ಪರಶುರಾಮ ಮುಗ್ಧ ಹೆಂಗಸರು ಮಕ್ಕಳ ಸಹಿತ ಸಮಸ್ತ ಕ್ಷತ್ರಿಯರನ್ನು ಕೊಂದಿದ್ದಕ್ಕೆ ಅವನಿಗೆ ದೇವರಪಟ್ಟ ಕಟ್ಟಿ ಕುಣಿದರು.

ನರಕಾಸುರ, ಮಹಿಷಾಸುರ, ರಾವಣ, ಬಲಿಚಕ್ರವರ್ತಿ, ವಾಲಿ ಇವರೆಲ್ಲಾ ಇಲ್ಲಿಯ ಮೂಲನಿವಾಸಿ ದ್ರಾವಿಡ ಜನಾಂಗದ ನೇತಾರರಾಗಿದ್ದರು. ಈ ಅಮಾಯಕ ಬುಡಕಟ್ಟು ಜನಾಂಗಗಳ ನೇತಾರರಿಗೆ ದುಷ್ಟ ರಾಕ್ಷಸರು ಎಂದು ಸುಳ್ಳು ಹಣೆಪಟ್ಟಿ ಕಟ್ಟಿ ಅವರನ್ನೆಲ್ಲಾ ಆರ್ಯರು ಮೋಸದಿಂದ ಕೊಂದ ದಿನದ ನೆನಪಿನ ಹಬ್ಬಗಳೆಲ್ಲಾ ಸಾವಿನ ಸಂಭ್ರಮವೇ ಆಗಿದೆ. ಅದನ್ನೇ ಆರ್ಯ-ವೈದಿಕರ ಈಗಿನ ಅನೈತಿಕ ಪೀಳಿಗೆಯಾದ ಸಂಘ ಪರಿವಾರ ಅನುಸರಿಸುತ್ತಿದೆ ಅಷ್ಟೇ. ರಾಕ್ಷಸರು-ಅಸುರರು ಎಂಬ ಐವತ್ತು ಅಡಿ ಎತ್ತರದ ಜನಾಂಗ ಇದ್ದುದಕ್ಕೆ ವೈಜ್ಞಾನಿಕ ಸಾಕ್ಷಿ ಕೊಡಿ ಎಂದು ಕೇಳಿದರೆ ಇವರದು ಮತ್ತೆ ಶಬ್ದಗಳ ಸರ್ಕಸ್ ಅಷ್ಟೇ. ಪುರಾಣಗಳೆಲ್ಲಾ ಸತ್ಯ ಎಂದು ನೇರವಾಗಿ ಸಾಬೀತುಮಾಡುವ ಶಕ್ತಿ ಇವರಲ್ಲಿ ಇಲ್ಲ. ಆದರೂ ರಾಕ್ಷಸರ-ಅಸುರರ ಮರಣಕ್ಕೆ ಸಂಭ್ರಮಿಸುವುದನ್ನು ಈ ದುಷ್ಟರು ಮೂರು ಸಾವಿರ ವರ್ಷದಿಂದ ಬಿಡಲಿಲ್ಲ ಮಾತ್ರವಲ್ಲ ಈಗಿನ ಸಭ್ಯ ಸಮಾಜದಲ್ಲೂ ಅನಂತಮೂರ್ತಿ, ಡಾ. ಕಲಬುರ್ಗಿ ಮತ್ತು ರಾಕೇಶ್ ತೀರಿಕೊಂಡಾಗ ಅದನ್ನೇ ಮುಂದುವರಿಸಿರುವುದು ಈ ನೀಚ ಗುಣ ವೈದಿಕರ ಮತ್ತು ಅರೆವೈದಿಕ-ಮೇಲ್ಜಾತಿಗಳ ಜೀನ್ಸ್‌ನಲ್ಲಿಯೇ ಸೇರಿ ಹೋಗಿದೆ ಎಂಬುದಕ್ಕೆ ಸಾಕ್ಷಿ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಚೆಡ್ಡಿಗಳ ಮೌಢ್ಯ ಮತ್ತು ಮಂದಬುದ್ಧಿಯ ಧಿಮಾಕು

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರನ ಅಕಾಲ ಮರಣದಿಂದ ರಾಜ್ಯವಿಡೀ ಶೋಕತಪ್ತವಾಗಿದ್ದರೆ ಸಂಘ ಪರಿವಾರದವರು ಮಾತ್ರ ಈ ಸಂದರ್ಭವನ್ನು ಇನ್ನೂ ಹೆಚ್ಚಿನ ಮೌಢ್ಯ ಹುಟ್ಟು ಹಾಕಲು ಬಳಸುತ್ತಿರುವುದು ದುರಾದೃಷ್ಟ. "ಅವನ ತಾಯಿಯ ಶಾಪ, ಇವನ ಹೆಂಡತಿಯ ಶಾಪ" ಎಂದು ಹೇಳುತ್ತಾ ತಮ್ಮ ಮೌಢ್ಯ ಸಮರ್ಥಿಸಲು ಸಂಘಿಗಳು ಇತ್ತೀಚೆಗೆ ಆದ ಕೆಲವು ಘಟನೆಗಳಿಗೆ ಬಣ್ಣ ಹಚ್ಚಿ ಕಥೆ ಕಟ್ಟಿ ಸೋಷಿಯಲ್ ಮೀಡಿಯಾದಲ್ಲಿ ಹರಡುತ್ತಿದ್ದಾರೆ.

ದುಃಖತಪ್ತ ತಾಯಿಯರ ಅಥವಾ ಹೆಂಡತಿಯರ ಶಾಪಕ್ಕೆ ನಿಜವಾಗಿ ಅಷ್ಟು ಶಕ್ತಿ ಇದ್ದಿದ್ದೇ ಆಗಿದ್ದರೆ ಮೋದಿ ಮತ್ತು ಅಮಿತ್ ಷಾ ಎಂಬ ಕರಟಕ ದಮನಕರು ಗುಜರಾತಿನಲ್ಲಿ ನಡೆಸಿದ ನರಮೇಧ ಅಥವಾ ನಕಲಿ ಎನ್‌ಕೌಂಟರುಗಳಲ್ಲಿ ಸತ್ತ ಅಮಾಯಕರ ಸಾವಿರಾರು ತಾಯಂದಿರು ಅಥವಾ ಹೆಂಡತಿಯರು ಕೊಟ್ಟ ಶಾಪಗಳಿಂದ ಇವರಿಬ್ಬರೂ ಎಂದೋ ಘೋರ ರೋಗದಿಂದ ಬಳಲಿ ಮೂಲೆ ಸೇರಬೇಕಾಗಿತ್ತು.


ಸಿದ್ದರಾಮಯ್ಯನವರಿಗೆ ಶಿಕ್ಷೆ ಕೊಡಲು ದೇವರು ಅವರ ಅಮಾಯಕ ಹೆಂಡತಿಗೆ ಹಾಗೂ ಸೊಸೆ-ಮೊಮ್ಮಕ್ಕಳಿಗೆ ಶಿಕ್ಷೆ ಕೊಡುತ್ತಾನೆಯೇ? ದೇವರೂ ಈ ಸಂಘಿಗಳಂತೆ ಮಹಾ ಮೂರ್ಖನೇ? ಇಂತಹಾ ನೀಚ ಶತಮೂರ್ಖ ಯೋಚನೆಗಳು ಕೇವಲ ವಿಕೃತ ಸಂತೋಷಿಗಳಾದ ಸಂಘಿಗಳ ಹೊರತು ಬೇರೆ ಯಾರಿಗೂ ಬರಲಿಕ್ಕಿಲ್ಲ!

ಕಳೆದ ವಾರ ಬೆಂಗಳೂರಿನಲ್ಲಿ ನಿಡುಮಾಮಿಡಿ ಸ್ವಾಮೀಜಿಗಳು ಮತ್ತು ಚಂಪಾ ಮುಂತಾದ ಪ್ರಗತಿಪರರು



ಸಭೆ ಸೇರಿ ಕರ್ನಾಟಕ ಸರಕಾರ ಕಣ್ಣುಮುಚ್ಚಾಲೆ ಆಡುವುದನ್ನು ನಿಲ್ಲಿಸಿ ಮೌಢ್ಯ ಪ್ರತಿಬಂಧಕ ಕಾಯ್ದೆಯನ್ನು ಆದಷ್ಟು ಬೇಗ ಅನುಷ್ಠಾನಗೊಳಿಸಬೇಕೆಂದು ಒತ್ತಡ ಹೇರಲು ಮುಖ್ಯಮಂತ್ರಿಗಳನ್ನು ಮತ್ತೆ ಭೇಟಿಯಾಗುವುದಾಗಿ ಹೇಳಿದ್ದಾರೆ. ಆದರೆ ಇದರಿಂದ ಏನಾದರೂ ಸಕಾರಾತ್ಮಕ ಫಲಿತಾಂಶ ಬರುವುದು ಅನುಮಾನ. ಯಾಕೆಂದರೆ ಬಿಜೆಪಿಯವರು ಮಾತ್ರವಲ್ಲ ಕಾಂಗ್ರೆಸ್ಸಿನಲ್ಲಿಯೂ ಹೆಚ್ಚಿನವರು ಮೌಢ್ಯ ಪ್ರತಿಬಂಧಕ ಕಾಯ್ದೆಯನ್ನು ಒಳಗಿಂದೊಳಗೆ ವಿರೋಧಿಸುತ್ತಿದ್ದಾರೆ. ಕಾರಣ ಇವರಲ್ಲಿ ಹೆಚ್ಚಿನವರು ವಾಸ್ತುಶಾಸ್ತ್ರ ಮತ್ತು ಜ್ಯೋತಿಷ್ಯದಲ್ಲಿ ಆಳವಾದ ನಂಬಿಕೆಯುಳ್ಳವರು. ಅದಕ್ಕಾಗಿ ಅವರು ತಮ್ಮ ಸರಕಾರಿ ನಿವಾಸಗಳಲ್ಲೂ ಕೋಟ್ಯಾಂತರ ರೂಪಾಯಿ ಸರಕಾರಿ ವೆಚ್ಚದಲ್ಲಿ ವಾಸ್ತು ಬದಲಾಯಿಸಿ ಜನರ ತೆರಿಗೆ ಹಣ ಹಾಳು ಮಾಡುತ್ತಾರೆ. ಜೆಡಿಎಸ್‌ನ ಗೌಡರುಗಳಂತೂ ಅತೀ ಹೆಚ್ಚು ಮೌಢ್ಯವುಳ್ಳವರು. ರೇವಣ್ಣ ಮತ್ತು ದೇವೇಗೌಡರು ಯಾವಾಗಲೂ ತಮ್ಮ ಕಿಸೆಯಲ್ಲಿ ಮಂತ್ರಿಸಿದ ನಿಂಬೆಕಾಯಿ ಇಟ್ಟುಕೊಳ್ಳಲು ಮರೆಯುವುದಿಲ್ಲ.

ಇನ್ನು ಬಿಜೆಪಿಯವರಂತೂ ತಮ್ಮ ಮೂಢನಂಬಿಕೆಗಳನ್ನು ಹೆಮ್ಮೆಯಿಂದ ಬಹಿರಂಗವಾಗಿ ಪ್ರದರ್ಶಿಸುತ್ತಾರೆ. ಕಳೆದ



ತಿಂಗಳು ಗುಜರಾತಿನಲ್ಲಿ ಬಿಜೆಪಿಯವರು ನಡೆಸಿದ ವೈಪ
ನೋಡಿ- ಸತ್ತ ದನದ ಚರ್ಮ ಊರಿನ
ಸುಲಿಯುವುದು ಊರಿಗೆ ಅಶಾಂತಿ ತರುತ್ತದೆ
ಒಬ್ಬ ಜ್ಯೋತಿಷಿ ಹೇಳಿದ್ದಕ್ಕೆ ಕೆಲವು ಕೇಸರಿ ಪುಂ
ಊನಾದಲ್ಲಿ ಸತ್ತ ದನದ ಚರ್ಮ ಸುಲಿಯುತ್ತಿದ್ದ ಅಮಾ
ದಲಿತರನ್ನು ಅಮಾನುಷವಾಗಿ ಹೊಡೆದು ತಮ್ಮ ಊ
ಮಾತ್ರವಲ್ಲ, ತಾವೇ ಇಡೀ ದೇಶಕ್ಕೇ ಅಶಾ
ಉಂಟುಮಾಡಿದರು. ವಿಪರ್ಯಾಸವೆಂದರೆ ಜ್ಯೋತಿಷಿಗ
ಇಷ್ಟು ಗಾಢವಾಗಿ ನಂಬುವ ಗುಜರಾತಿನ ಬಿಜೆಪಿಯ
ಕೆಲದಿನಗಳ ಹಿಂದೆ ರಾಜಕೋಟ್ ಎಂಬಲ್ಲಿ ಒಬ್ಬ ಜ್ಯೋ
ಮೋದಿಯವರ ಬಗ್ಗೆ ಭವಿಷ್ಯ ನುಡಿದದ್ದಕ್ಕಾಗಿ ಅ
ಭಯಂಕರವಾಗಿ ಹೊಡೆದರು. ಯಾಕೆಂದರೆ ಆ ಜ್ಯೋ
ಹೇಳಿದ್ದು ಹೀಗಿದೆ:

"ದೇವರುಗಳಿಗೂ ಜಾತಿಗಳಿವೆ. ಶನಿ ದೇವರದ್ದು ಗಾ
ಜಾತಿ. ಹಾಗಾಗಿ ಶನಿಗೆ ಎಣ್ಣೆ ಅತಿ ಇಷ್ಟ. ಅದ
ಅವನಿಗೆ ಎಳ್ಳೆಣ್ಣೆ ಅರ್ಪಿಸಿ ಅವನನ್ನು ಸಂಪ್ರೀತಿ
ಸಬಹುದು. ನರೇಂದ್ರ ಮೋದಿ ಗಾಣಿಗ ಜಾತಿಯ
ದುದರಿಂದ ಅವರು ಶನಿಯ ಜಾತಿಯವರು. ಆದುದ
ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಗುಜ
ರಾಜ್ಯದಲ್ಲಿ ಭಯಂಕರ ನರಮೇಧ ಮತ್ತು ಅನೇಕ
ಎನ್‌ಕೌಂಟರ್‌ಗಳು ನಡೆದವು, ಭೀಕರ ಭೂಕಂಪವಾಯಿ
ಘೋರ ಬರಗಾಲ ಬಿತ್ತು. ಅಂತೆಯೇ ಈಗ ಅ
ಪ್ರಧಾನಿಯಾದ ಮೇಲೆ ಇಡೀ ದೇಶಕ್ಕೇ ಶನಿ ಹಿಡಿ
ಆಗಿದೆ."

ಈ ರೀತಿ ಆ ರಾಜಕೋಟ್ ಜ್ಯೋತಿಷಿ ಹೇಳಿದ
ಅವನಿಗೆ ಕೇಸರಿ ಪಡೆಗಳಿಂದ ಒದೆ ಬಿತ್ತು ಅಷ್ಟೇ
ಜ್ಯೋತಿಷಿಯು ಹೀಗೆ ಸಂಪೂರ್ಣ ಗಾಣಿಗ ಜಾ
ಅವಮಾನ ಮಾಡಿದ್ದು ನಿಜಕ್ಕೂ ಖಂಡನೀಯ.
ಒಂದುವೇಳೆ ಆ ಜ್ಯೋತಿಷಿ ಮೋದಿಯವರನ್ನು ದೇ
ಕಳುಹಿಸಿದ ಪವಾಡ ಪುರುಷ ಎಂದು ಸುಳ್ಳು ಹೇ
ಬಹುಶಃ ಅವನಿಗೆ ಬಹುಮಾನವಾಗಿ ದೊಡ್ಡ ಹ
ಕವರ್ ಸಿಗುತ್ತಿತ್ತು. ಹಾಗಾದರೆ ಜ್ಯೋತಿಷಿಗಳು ಕೆ
ನಮ್ಮ ಪರವಾಗಿ ಭವಿಷ್ಯ ಹೇಳಿದರೆ ಮಾತ್ರ ಅವ
ಅಸಲಿ ಎಂದು ನಂಬಬೇಕು; ಒಂದು ವೇಳೆ ಅ

ಕೃಷ್ಣನ ಸಾವಿರಾರು ಮಕ್ಕಳು ಆತನ ಕಣ್ಣೆದುರೇ ಸತ್ತರು

"ಸಿದ್ದರಾಮಯ್ಯನವರು ಕಳೆದ ಜನವರಿಯಲ್ಲಿ ಉಡುಪಿಯ ಪರ್ಯಾಯಕ್ಕೆ ಸ್ವತಃ ಬರಲಿಲ್ಲ, ಆದುದರಿಂದ ಕೃಷ್ಣ ದೇವರು ಅವರಿಗೆ ಅದರ ಫಲ ಕೊಟ್ಟ" ಎಂದು ಕರಾವಳಿಯ ಕೆಲವು ವಿಕೃತ ಮನೋರೋಗಿಗಳು ಸಾಮಾಜಿಕ ತಾಣದಲ್ಲಿ ಚೀರಾಡುತ್ತಿದ್ದಾರೆ. ಮೂಲತಃ ಈ ವಿಕೃತರು ಕೃಷ್ಣ ಪುರಾಣದ ಕೊನೆಯ ಅಧ್ಯಾಯ ಓದಿಯೇ ಇಲ್ಲ. ಕೃಷ್ಣನ ಕಣ್ಣೆದುರಿನಲ್ಲಿಯೇ ಅವನ ಒಂದು ಲಕ್ಷ ಅರವತ್ತು ಸಾವಿರ ಗಂಡು ಮಕ್ಕಳು ಒಂದೇ ದಿನದಲ್ಲಿ ತಮ್ಮ ತಮ್ಮಲ್ಲಿಯೇ ಹೊಡೆದಾಡಿ ಸತ್ತರು. ಇದರಲ್ಲಿ ರುಕ್ಮಿಣಿ ಸತ್ಯಭಾಮೆಯ ಇಪ್ಪತ್ತು ಮಕ್ಕಳೂ ಇದ್ದರು. ಕೃಷ್ಣನ ಹದಿನಾರು ಸಾವಿರ ಹೆಣ್ಣುಮಕ್ಕಳನ್ನೂ ದರೋಡೆಕೋರರು ಅಪಹರಿಸಿಕೊಂಡು ಹೋಗಿ ಅತ್ಯಾಚಾರ ಮಾಡಿದರು. ತನ್ನ ಕಣ್ಣೆದುರಿನಲ್ಲಿಯೇ ನಡೆದ ಈ ದುರಂತಗಳನ್ನು ತನ್ನಿಂದ ತಡೆಯಲು ಸಾಧ್ಯವಾಗದ್ದಕ್ಕೆ ಕೃಷ್ಣ ವೈರಾಗ್ಯದಿಂದ ಅರಣ್ಯಕ್ಕೆ ಹೋದ. ಕುರುಕ್ಷೇತ್ರ ಯುದ್ಧದಲ್ಲಿ ತಾನು ಲಕ್ಷಾಂತರ ಜನರ ಮರಣಕ್ಕೆ ಕಾರಣನಾಗಿದ್ದಕ್ಕೆ ತನಗೇ ಈ ಶಿಕ್ಷೆ ಸಿಕ್ಕಿತು ಎಂದು ಕೃಷ್ಣ ತನ್ನ ಕರ್ಮಕ್ಕೆ ತಾನೇ ಮರುಗುತ್ತಾ ಅಲ್ಲಿ ಬೇಡನ ಬಾಣಕ್ಕೆ ತುತ್ತಾಗಿ ನರಳಿನರಳಿ ಜೀವಬಿಟ್ಟ. ತನ್ನ ಕಣ್ಣ ಮುಂದೆ ತನ್ನೆಲ್ಲಾ ಮಕ್ಕಳ ಘೋರ ಅವಸಾನ ನೋಡಿರುವ ಉಡುಪಿ ಕೃಷ್ಣನು ಈಗ ಮಾನವನಂತೆ ತನ್ನ ಕ್ಷುಲ್ಲಕ ಒಣ ಪ್ರತಿಷ್ಠೆಗಾಗಿ ಹುಲುಮಾನವರ ಮಕ್ಕಳಿಗೆ ಅಕಾಲಮೃತ್ಯು ತರುವಂತಹ ಬುದ್ಧಿಗೇಡಿಯೇ? ಈಗಿನ ಕಾಲದಲ್ಲಿ ಮೂರ್ಖರ ಕೈಯಲ್ಲಿ ಸ್ಮಾರ್ಟ್ ಫೋನ್ ಮತ್ತು ಇಂಟರ್ನೆಟ್ ಸಿಕ್ಕಿರುವುದು ಮಂಗನ ಕೈಯಲ್ಲಿ ಮಾಣಿಕ್ಯ ಸಿಕ್ಕಂತಾಗಿದೆ. ಆರ್‌ಎಸ್‌ಎಸ್‌ನವರು ಇಂತಹ ತಲೆ ಮಾಸಿದ ಮಧ್ಯಮ ಸ್ತರದ ಜಾತಿಯವರಿಗೆ ಪ್ರಚೋದನೆ ಕೊಟ್ಟು ತಮ್ಮ ಗುಪ್ತ ಉದ್ದೇಶ ಸಾಧಿಸುತ್ತಿದ್ದಾರೆ.

ಮಹಾಭಾರತದ ಯಕ್ಷ ಪ್ರಶ್ನೆಯಲ್ಲಿ ಯಕ್ಷನು ಯ [illegible] ಎಂದು ಪ್ರಶ್ನೆ ಹೀಗೆ ಕೇಳುತ್ತಾನೆ: "ಈ ಜಗತ್ತಿನಲ್ಲಿ ಅತೀ ದೊಡ್ಡ ಆಶ್ಚರ್ಯ [illegible]ದು?" ಯುಧಿಷ್ಠಿರ



ಉತ್ತರಿಸುತ್ತಾನೆ: "ಒಬ್ಬ ಮನುಷ್ಯ ದಿನಾಲೂ ತನ್ನ ಸುತ್ತ ಜನರು ಮತ್ತು ಪ್ರಾಣಿ ಸಾಯುತ್ತಲೇ ಇರುವುದನ್ನು ನೋಡಿಯೂ ತಾನು ಮಾತ್ರ ಸಾಯುವುದಿಲ್ಲ ಎ ಭಾವಿಸಿ ಅದರಂತೆ ವರ್ತಿಸುವುದೇ ಜಗತ್ತಿನ ಅತೀ ದೊಡ್ಡ ಆಶ್ಚರ್ಯ!"

ಮೊನ್ನೆ ಶನಿವಾರ ಸಂಜೆ ರಾಕೇಶರ ಮರಣದ ವಾರ್ತೆ ಬಂದನಂತರ ಸಂತಸ ಮಾಡಲು ಪುತ್ತೂರಿನ ಕೆಲವು ಅರೆ-ಮಂಡೆಯ ಅರೆಭಾಷೆ ಗೌಡರ ಪಡ್ಡೆಗಳು ಟೈಟ್ ಕುಡಿದು ಬೈಕಿನಲ್ಲಿ ಹೋಗುವಾಗ ಸ್ವತಃ ತಾವೇ ಅಪಘಾತಕ್ಕೆ ಈಡಾದರು. ಅ ಪ್ರಜ್ಞಾವಂತರು ಅವರಿಗೆ ತಕ್ಕ ಶಾಸ್ತಿಯಾಯಿತು ಎಂದು ಎಂದಿಗೂ ಹೇಳುವು ಕಾರಣ ಯಾರದೋ ಮಗನ ಮರಣಕ್ಕೆ ಸಂತಸ ಸೂಚಿಸಲು ಕುಡಿದು ಅಪ ಮಾಡಿಕೊಂಡು ತನ್ನ ಸ್ವಂತ ಅಮಾಯಕ ತಂದೆ ತಾಯಿಗೆ ಈ ಹುಡುಗರು ಅ ದುಃಖ ಕೊಟ್ಟಿದ್ದು ಯಾರಿಗೆ ತಾನೇ ಖುಷಿಯಾಗಲು ಸಾಧ್ಯ.

- ಅಭಿಷೇಕ್ ಪಡಿವಾಲ್, ಸುಳ್ಯ




ನಮ್ಮ ವಿರುದ್ಧ ಭವಿಷ್ಯ ಹೇಳಿದರೆ ಅದು ಮೂಢನಂಬಿಕೆ ಎಂದು ಹೇಳಿ ಜ್ಯೋತಿಷಿಗಳ ಜುಟ್ಟು ಹಿಡಿದೆಳೆದು ಹಲ್ಲು ಮುರಿಯಬೇಕು ಅಲ್ಲವೇ? ಈ ಎಲ್ಲಾ ಗೊಂದಲಕ್ಕಿಂತ ಜ್ಯೋತಿಷ್ಯವನ್ನು ಒಟ್ಟಾರೆ ನಿಷೇಧಿಸಿದರೆನೇ ಒಳ್ಳೆಯದಲ್ಲವೇ?

- ವೀರಪ್ಪ ಡಿ.ಎನ್. ಮಡಿಕೇರಿ

RIP ರಾಕೇಶ್ ಸಿದ್ದರಾಮಯ್ಯ

ಮನುಷ್ಯ ತನ್ನ ಜೀವಿತದ ಅವಧಿಯಲ್ಲಿ ಹಲವಾರು ಸಹಮಾನವರನ್ನ ಮಾನಸಿಕವಾಗಿ/ಭಾವನಾತ್ಮಕವಾಗಿ ಸಾಯಿಸುತ್ತಾನೆ. ತಾನೂ ಸಹ ಹಲವರಿಂದ ಅದೇರೀತಿ ಕೊಲೆಯಾಗುತ್ತಾನೆ. ಬದುಕ್ತಾನೆ. ಸಾವು ಕೇವಲ ದೈಹಿಕವಾಗಿ ಮಣ್ಣಾರೆಯಾಗೋದಲ್ಲ, ಬದಲಾಗಿ ಹೃದಯದಿಂದ ಮಣ್ಣಾರೆಯಾಗೋದು. ನಾನು ಇವತ್ತು ನೂರಾರು ಸತ್ತವರನ್ನ ಸಂಜೆಯಿಂದ ಕಂಡು ಮರುಗಿದೆ. ಹೌದು, ಒಬ್ಬ ಸಹಮನುಷ್ಯನ ಸಾವನ್ನು ವಿಕೃತವಾಗಿ ಆನಂದಿಸುತ್ತಾ ಆತ್ಮಹತ್ಯೆಮಾಡಿಕೊಂಡವರ ಶವಗಳನ್ನು ಕಂಡು ನನ್ನ ಮನಸ್ಸು ತುಂಬಾ ನೊಂದಿದೆ. ಮನುಷ್ಯನ ಮೂಲ ಸಂವೇದನೆಗಳನ್ನೆ ಮರೆತು ಮನುಷ್ಯರೆಂದು ತಮ್ಮನ್ನು ತಾವು ಭಾವಿಸಿಕೊಂಡು ಭ್ರಮೆಯಲ್ಲಿರುವ ಕೋಟ್ಯಾಂತರ ಜೀವಗಳು ಮನುಷ್ಯರಾಗುವ ಮುಂಚೆಯೇ ಮಣ್ಣಾಗಿಹೋಗುವ ಈ ಸ್ಥಿತಿಗೆ ಜೀವ ವಿಕಾಸನದ ಕುಂಠಿತ ಎಂದು ನಾನು ಕರೆಯುವೆ.

ಮಾನವನ ಈ ವಿಕೃತತೆ ಇಂದು ನಿನ್ನೆಯದಲ್ಲ,



ಮನುಷ್ಯನನ್ನು ಲಿಂಗದ ಹೆಸರಲ್ಲಿ, ಜಾತಿಧರ್ಮ ಬಣ್ಣ ಪ್ರದೇಶದ ಹೆಸರಲ್ಲಿ ಮಾನಸಿಕವಾಗಿ/ದೈಹಿಕವಾಗಿ ಕೊಲೆಮಾಡುತ್ತಾ ವಿಕೃತಾನಂದಪಡುತ್ತಾ ವಿಕಾಸನವಾದ ಈ ವಿಕೃತಿಗೆ ಈ ದೇಶದಲ್ಲಿ ಸಾವಿರಾರು ವರ್ಷದ ಇತಿಹಾಸ ಇದೆ. ಈ ವಿಕೃತಿ ಮನುಷ್ಯನ ರಕ್ತದಲ್ಲಿ ವಂಶವಾಹಿನಿಯಾಗಿ ಬಂದುಬಿಟ್ಟಿದೆ, ಹಾಗೆಯೇ ಕೆಲವರಲ್ಲಿ ಕ್ರಮೇಣ ನಶಿಸುತ್ತಾ ಬಂದಿದೆ.

ಮಾನವನನ್ನು ಮನುಷ್ಯನನ್ನಾಗಲು ಬಿಡದಂತೆ ಈ ನಮ್ಮ ಸಾಮಾಜಿಕ-ಧಾರ್ಮಿಕ-ರಾಜಕೀಯ ವ್ಯವಸ್ಥೆಗಳೆ ಬದ್ಧಗಾಲಾಕಿಬಿಟ್ಟಿವೆ.

ಪ್ರೀತಿ ಅಂತಃಕರಣ ಸಾಮರಸ್ಯ ಸೌಹಾರ್ದತೆಯನ್ನು ಆನಂದಿಸಲು ಕಲಿಯದ ಮನುಷ್ಯ ಎಂದೋ ಸತ್ತಿರುತ್ತಾನೆ. ನೋವುಗಳ ಬೆಲೆ ಕಂಡುಕೊಳ್ಳುತ್ತಾ ಸಾಗುವ ಮನುಷ್ಯ ದಿನನಿತ್ಯ ಹೊಸ ಹುಟ್ಟು ಪಡೀತಾ ಹುಟ್ಟುತ್ತಿರುತ್ತಾನೆ.

ನಾನು ಕೆಲದಿನ, ಕೆಲಕ್ಷಣ ಸಾಯುತ್ತಾ ಇರ್ತೀನಿ ಹಾಗೆ ಕೆಲದಿನ, ಕ್ಷಣ ಹೊಸದಾಗಿ ಹುಟ್ಟುತ್ತಾನೂ ಇರ್ತೀನಿ. ಬೇರೆಯವರ ಹಲವರನ್ನ ಮಾನಸಿಕವಾಗಿ ಸಾಯಿಸ್ತಾ ಹಲವರನ್ನು ಬದುಕಿಸುತ್ತಾ ದಿನ ಸಾಗಿಸ್ತಿರ್ತೀನಿ.

"ಸಾವು ಎಂದರೆ ಮಣ್ಣಲ್ಲಿ ಮಣ್ಣಾಗಿ ಹೋಗೊದಲ್ಲ. ಮನುಷ್ಯನ ಮನಸಿಂದ ಅಳಿಸಿಹೋಗೋದು."

ಎಂದೋ ಸತ್ತರು ಕೂಡ ಇಂದಿಗೂ ನಮ್ಮ ಮನಸಲ್ಲಿ ಇರುವ ಜನರ ನೆನಪುಗಳೇ ಹೇಳ್ತಾವೆ "ಸಾವು ಎಂದ್ರೆ ಮನಸಿಂದ ದೂರವಾಗೋದೆಂದು."

ದೈಹಿಕವಾಗಿ ಸಾಯೋದ್ರ ಒಳಗೆ ನಾವು ಮಾಡಿ ಮುಗಿಸಬೇಕಾದ ಮುಖ್ಯ ಕೆಲಸ ಎಂದ್ರೆ ಮನುಷ್ಯರಾಗಿ ಪರಿವರ್ತನೆ ಹೊಂದುವುದು. ಸಮಯ ಮೀರುವ ಮುನ್ನ ಮನುಷ್ಯರಾಗೋಣ. ಮಾನವ ಮನುಷ್ಯನಾಗ್ತಾ ಹೋದಂತೆಲ್ಲ ಭೂಮಿಮೇಲೆ ಶಾಂತಿ ಪ್ರೀತಿ ದಯೆ ನೆಮ್ಮದಿ ಪಸರಿಸುತ್ತಾ ಹೋಗುತ್ತೆ, ಅದರ ಫಲಾನುಭವಿ ನಾವಾಗಲು ಮನುಷ್ಯರಾಗೋಣ.

ಸಿದ್ದರಾಮಯ್ಯನವರ ಮಗ ರಾಕೇಶ್ ಅವರು ಕೆಲವರ ಪಾಲಿಗೆ ಸತ್ತಿರಬಹುದು, ಕೆಲವರ ಪಾಲಿಗೆ ಬದುಕಿರಲೂಬಹುದು. ಅದೇನೇ ಇರಲಿ ದೈಹಿಕ ಅಗಲಿಕೆಯೇ ನಿಜವಾದ ಸಾವೆಂದು ನಂಬಬಂದ ನಮಗೆ ಅವರು ಇನ್ನಿಲ್ಲ ಎಂದೆ ನಮ್ಮ ಮನಸೇಳ್ತಾ ಇರುತ್ತೆ...

RIP ರಾಕೇಶ್ ಸಿದ್ದರಾಮಯ್ಯ

- ಪ್ರಶಾಂತ್ ದಾನಪ್ಪ, ಮಸ್ಕಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಸ್ಪಷ್ಟವಾಗಿ ಮತ್ತು ಚುಟುಕಾಗಿ SMS ಕಳುಹಿಸಬಹುದು.

ಬೇರೆ ಭಾಷೆಯಲ್ಲಿ ನಟಿಸಲು ಅಭ್ಯಂತರವೇನೂ ಇಲ್ಲ

ಪುನೀತ್ ರಾಜ್‌ಕುಮಾರ್

ಹೊಸ ರೀತಿಯ ಪಾತ್ರಗಳಿಗೆ ಸದಾ ತೆರೆದುಕೊಳ್ಳುವ ನಟ ಪುನೀತ್ ರಾಜ್‌ಕುಮಾರ್, ಸದ್ಯ ಅವರು 'ದೊಡ್ಮನೆ ಹುಡುಗ' ಶೂಟಿಂಗ್ ಮುಗಿಸಿದ್ದಾರೆ. 'ರಾಜಕುಮಾರ್' ಸಿನಿಮಾದಲ್ಲಿ ಬಿಜಿ ಆಗಿದ್ದಾರೆ. ಇದರ ಜತೆಗೆ ಇತರ ವಿಷಯಗಳ ಕುರಿತು ಪವರ್‌ಸ್ಟಾರ್ ಮಾತಿಗೆ ಸಿಕ್ಕಿದ್ದಾರೆ.

ಸದಾ ಬಿಜಿ ಆಗಿರುವ ನಟ ಪುನೀತ್ ರಾಜ್‌ಕುಮಾರ್. ಕೇವಲ ನಟನಾಗಿರದೇ, ನಿರ್ಮಾಪಕನಾಗಿಯೂ ಯಶಸ್ವಿಯಾದ ಕಲಾವಿದ ಇವರು. ಜತೆಗೆ ಕಿರುತೆರೆಯಲ್ಲೂ ಸಕ್ಸೆಸ್ ಶೋಗಳನ್ನು ನಡೆಸಿಕೊಟ್ಟಿದ್ದಾರೆ. ಒಂದಿಲ್ಲೊಂದು ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಪುನೀತ್, ಸದ್ಯ 'ದೊಡ್ಮನೆ ಹುಡುಗ' ಸಿನಿಮಾದ ಶೂಟಿಂಗ್ ಮುಗಿಸಿಕೊಂಡು 'ರಾಜಕುಮಾರ್' ಸಿನಿಮಾದ ಚಿತ್ರೀಕರಣದಲ್ಲಿದ್ದಾರೆ. ಈ ನಡುವೆ ಮತ್ತೆ ಇವರನ್ನು ಕಿರುತೆರೆ ಕರೆಯುತ್ತಿದೆ. ಈ ಎಲ್ಲದರ ಕುರಿತು ಪುನೀತ್ ಇಲ್ಲಿ ಮನಬಿಚ್ಚಿ ಮಾತಾಡಿದ್ದಾರೆ.

** 'ದೊಡ್ಮನೆ ಹುಡುಗ' ಸಿನಿಮಾಗಾಗಿ ಮೊನ್ನೆಯಷ್ಟೇ ರಾಜ್ಯವನ್ನು ಸುತ್ತಿದ್ದೀರಿ. ದಣಿವಾರುವ ಮುನ್ನವೇ ಮತ್ತೊಂದು ಸಿನಿಮಾದ ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದೀರಿ. ರೆಸ್ಟ್ ಬೇಕು ಅಂತ ಅನಿಸಲ್ಲವಾ?*

ಯಾವುದೇ ಕೆಲಸವನ್ನು ಇಷ್ಟಪಟ್ಟು ಮಾಡಿದರೆ ದಣಿವೆನಿಸುವುದಿಲ್ಲ. ನಟನೆ ನನಗೆ ಇಷ್ಟವಾದ ಕೆಲಸ. ಹೀಗಾಗಿ ನಟಿಸುತ್ತಲೇ ನಾನು ರಿಲ್ಯಾಕ್ಸ್ ಆಗುತ್ತೇನೆ. ತೀರಾ ರೆಸ್ಟ್ ಬೇಕು ಅಂತ ಅನಿಸಿದಾಗ, ಒಂದಿಷ್ಟು ಪ್ರವಾಸ ಮಾಡುತ್ತೇನೆ.

** 'ದೊಡ್ಮನೆ' ಸಿನಿಮಾದಲ್ಲಿ ಅಭಿಮಾನಿಗಳಿಗಾಗಿಯೇ ಒಂದು ಹಾಡು ಮಾಡಿದ್ದೀರಿ. ಇಂಥದ್ದೊಂದು ಐಡಿಯಾ ಹೊಳೆದದ್ದು ಹೇಗೆ?*

ನಾವೆಲ್ಲ ಸಿನಿಮಾ ಮಾಡುವುದು ಅಭಿಮಾನಿಗಳಿಗಾಗಿಯೆ. ಅವರನ್ನೂ ಸಿನಿಮಾದಲ್ಲಿ ತೋರಿಸಬೇಕು ಅನ್ನುವ ಐಡಿಯಾ ನಿರ್ದೇಶಕರಿಗೆ ಬಂತು. ಅದರಲ್ಲೂ ಅಭಿಮಾನಿಗಳ ಜತೆ ಹೆಜ್ಜೆ ಹಾಕುವ ಅವಕಾಶ ಎಲ್ಲರಿಗೂ ಬರುವುದಿಲ್ಲ. ನನಗೆ ಬಂತು. ಹೀಗಾಗಿ ರಾಜ್ಯದ ನಾನಾ ಕಡೆ ಪ್ರವಾಸ ಮಾಡಿ, ಅಭಿಮಾನಿಗಳ ಸಮ್ಮುಖದಲ್ಲೇ ಶೂಟಿಂಗ್ ಮಾಡಿದ್ದೇವೆ. ಈ ಹಾಡನ್ನಂತೂ ನಾನು ಯಾವತ್ತೂ ಮರೆಯೋದಿಲ್ಲ.

** ಕನ್ನಡದಲ್ಲಿ ಅನೇಕ ಯಶಸ್ವಿ ಚಿತ್ರಗಳನ್ನು ಕೊಟ್ಟಿದ್ದೀರಿ. ಬೇರೆ ಭಾಷೆಗಳಲ್ಲೂ ನಟಿಸಬೇಕು ಅಂತ ಅನಿಸ್ತಾ ಇಲ್ಲವಾ?*

ಬೇರೆ ಭಾಷೆಗಳಲ್ಲಿ ನಟಿಸಲು ನನಗೇನೂ ಅಭ್ಯಂತರವಿಲ್ಲ, ನಿಜ ಹೇಳುತ್ತೇನೆ. ಯಾವ ಸಿನಿಮಾರಂಗದಿಂದಲೂ ನಟಿಸುವಂತೆ ಆಫರ್ ಬಂದಿಲ್ಲ, ಒಳ್ಳೆಯ ಸ್ಕ್ರಿಪ್ಟ್ ಸಿಕ್ಕರೆ, ಅಂಥದ್ದೊಂದು ಅವಕಾಶ ಬಂದರೆ, ಖಂಡಿತಾ ನಟಿಸುತ್ತೇನೆ. ತಮಿಳು ಮತ್ತು ತೆಲುಗಿನ ನಿರ್ದೇಶಕರ ಜತೆ ಕೆಲಸ ಮಾಡಿರುವ ಅನುಭವ ನನಗಿದೆ. ಹೀಗಾಗಿ ನಾನಂತೂ ಮುಕ್ತವಾಗಿದ್ದೇನೆ.



** ನಿಮ್ಮ ಕಾಲ್‌ಶೀಟ್ ಸಿಗುವುದು ಸುಲಭವಲ್ಲ ಅನ್ನುವ ಮಾತಿದೆ. ಸಿನಿಮಾ ಆಯ್ಕೆ ಮಾಡುವಾಗ ಏನೆಲ್ಲ ಪರಿಗಣಿಸುತ್ತೀರಿ?*

ಕಾಲ್‌ಶೀಟ್ ಸಿಗಲ್ಲ ಅಂತೇನೂ ಇಲ್ಲ, ಹೊಸ ರೀತಿಯ ಆಲೋಚನೆ ಮಾಡುವ ನಿರ್ದೇಶಕರ ಜತೆ ಯಾವಾಗಲೂ ನಾನು ಕೆಲಸ ಮಾಡುತ್ತೇನೆ. ಒಳ್ಳೆಯ ಸ್ಕ್ರಿಪ್ಟ್ ಇದ್ದರೆ ಅದಕ್ಕೆ ಮೊದಲು ಆದ್ಯತೆ ಕೊಡುತ್ತೇನೆ. ಸ್ಟೋರಿ ಕೇಳಿದ ಕೂಡಲೆ ಆಸಕ್ತಿದಾಯಕವಾಗಿ ಅದು ಇರಬೇಕು ಅಂತ ಬಯಸುತ್ತೇನೆ. ಈ ಹೊತ್ತಿನ ನೋಡುಗರನ್ನು ಮೆಚ್ಚಿಸುವ ತಾಂತ್ರಿಕ ಕೌಶಲ್ಯವನ್ನು ನಾನು ನೋಡುತ್ತೇನೆ.

** ಈಗಾಗಲೇ ಹಲವು ರೀತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೀರಿ. ಇನ್ನೂ ಯಾವ ರೀತಿಯ ಪಾತ್ರಕ್ಕಾಗಿ ಕಾಯುತ್ತಿದ್ದೀರಿ?*

ನಾನು ಹೆಚ್ಚೇನೂ ಸಿನಿಮಾ ಮಾಡಿಲ್ಲ, ಮಾಡಿರುವ ಬಹುತೇಕ ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳು ಸಿಕ್ಕಿವೆ. ಹೀರೋ ಕ್ಯಾರೆಕ್ಟರ್ ಅನ್ನು ಹೇಗೋ ನಿಭಾಯಿಸಿ ಬಿಡಬಹುದು. ಆದರೆ, ನೆಗೆಟಿವ್ ಶೇಡ್ ಇರುವ ಪಾತ್ರ ಮಾಡುವುದು ಸುಲಭವಲ್ಲ, ಹೀಗಾಗಿ ನೆಗೆಟಿವ್ ಶೇಡ್ ಇರುವ ಪಾತ್ರ ಮಾಡಬೇಕು ಅನ್ನುವ ಆಸೆ ಇದೆ.

** ಮೊದಲಿನಿಂದಲೂ ನಿಮ್ಮ ಕುಟುಂಬಕ್ಕೆ ರಾಜಕಾರಣದ ಬಗ್ಗೆ ಆಸಕ್ತಿ ಇಲ್ಲ, ನಿಮಗೆ?*

ನಾನು ಕಲಾವಿದನಾಗಿಯೇ ಇರಬೇಕು ಅಂತ ಆಸೆಪಟ್ಟವನು. ಹೀಗಾಗಿ ನಟನಾಗಿಯೇ ಉಳಿಯುತ್ತೇನೆ. ಹಾಗಂತ ರಾಜಕೀಯದಲ್ಲಿ ಆಸಕ್ತಿ ಇಲ್ಲವಂತೇನೂ ಇಲ್ಲ. ಆಯಾ ಬೆಳವಣಿಗೆಯನ್ನು ದೂರದಿಂದಲೇ ಗಮನಿಸುತ್ತೇನೆ.

** ಸದ್ಯ 'ರಾಜಕುಮಾರ್' ಸಿನಿಮಾದಲ್ಲಿ ನಟಿಸುತ್ತಿದ್ದೀರಿ. ಆ ಪಾತ್ರದ ಬಗ್ಗೆ ಹೇಳಿ...*

ರಾಜಕುಮಾರ್ ಅಂದಾಕ್ಷಣ, ಅದು ಅಪ್ಪಾಜಿ (ಡಾ.ರಾಜ್‌ಕುಮಾರ್) ಜೀವನವನ್ನು ಆಧರಿಸಿದ ಸಿನಿಮಾವಲ್ಲ, ಅಲ್ಲದೇ ಐತಿಹಾಸಿಕ ಸಿನಿಮಾ ಕೂಡ ಅಲ್ಲ, ಅವನಿಗೆ ಅವನೇ ರಾಜಕುಮಾರ್ ಅನ್ನುವಂತಹ ವ್ಯಕ್ತಿ, ಅಂತಹ ಪಾತ್ರವನ್ನು ನಾನಿಲ್ಲಿ ಮಾಡುತ್ತಿದ್ದೇನೆ. ತುಂಬಾ ಸ್ಟೈಲೀಶ್ ಆಗಿ ಇರುವಂತಹ ಪಾತ್ರವದು. ನಿರ್ದೇಶಕರು ತುಂಬಾ ಚೆನ್ನಾಗಿ ಪಾತ್ರವನ್ನು ಹೆಣೆದಿದ್ದಾರೆ.

** ಮೊದಲು 'ರಾಜಕುಮಾರ್' ಸಿನಿಮಾ ಬರತ್ತಾ? 'ದೊಡ್ಮನೆ ಹುಡುಗ'ನಾ?*

'ದೊಡ್ಮನೆ ಹುಡುಗ' ಶೂಟಿಂಗ್ ಈಗಾಗಲೇ ಮುಗಿದಿದೆ. ಇನ್ನೂ 'ರಾಜಕುಮಾರ್' ಶೂಟ್ ಆಗಬೇಕು. ಹೀಗಾಗಿ ಮೊದಲು 'ದೊಡ್ಮನೆ ಹುಡುಗ' ರಿಲೀಸ್ ಆಗುತ್ತದೆ. ಮುಂದಿನ ತಿಂಗಳು ಬಿಡುಗಡೆ ಮಾಡುವುದಾಗಿ ನಿರ್ಮಾಪಕರು ಹೇಳಿದ್ದಾರೆ. ■

17 ◀◀

...ತಂತ್ರೋಕ್ತಿಗಳು

ಪರಲೋಕವೆಂಬುದು ಎಲ್ಲಿಯೂ ಇಲ್ಲ. ಅದೋ ಮನೋ ಲೋಕದ ಅಥವಾ ಭಾವಲೋಕದ ಒಂದು ಪ್ರತಿಫಲಿತ ನೆರಳಾಗಿರುತ್ತದೆ. ನಾವು ಈ ಮೂರೂ ಲೋಕಗಳ ಕಾಂಬಿನೇಶನ್ ಅಥವಾ ಪ್ರಮಾಣಾನುಸಾರ ಮಿಶ್ರಿತಲೋಕಗಳಲ್ಲಿರುತ್ತೇವೆ. ಇದೋ ಹದವಾಗಿದ್ದರೆ ಚೆನ್ನ. ಸಹಜವಾದ ಅರಿವಲ್ಲಿದ್ದರೆ ಇನ್ನೂ ಚೆನ್ನ.

ಪ್ರಕೃತಿಯೊಟ್ಟಿಗೆ ಪ್ರಕೃತಿ ಸಹಜವಾಗಿದ್ದ ನಮ್ಮ ಪೂರ್ವಿಕರು ಆರೋಗ್ಯವನ್ನು, ವಸ್ತುಗಳನ್ನು, ನಮ್ಮತನವನ್ನು, ಶಕ್ತಿಯನ್ನು, ನಮ್ಮಿಂದ ಹೊರತಾಗಿರುವ ಶಕ್ತಿಯನ್ನು; ಹೀಗೆ ತಾವು ತಿಳಿದ ಎಲ್ಲಾ ಮೌಲ್ಯಗಳನ್ನೂ ತಮ್ಮಿಂದ ದೂರಾಗದಿರುವಂತಹ ಅಥವಾ ಪಡೆಯುವಂತಹ ತಂತ್ರಗಳನ್ನು ಹೇಳಿಕೊಡುತ್ತಿದ್ದರು. ಬಾಯಿಂದಬಾಯಿಗೆ ಹರಿದುಬರುತ್ತಿತ್ತು, ಸಮ್ಮತಿಸಿದವನು, ತನ್ನ ಸ್ವಭಾವಕ್ಕೆ ಅನುಗುಣವಾಗಿ ಅದು ಇದೆಯೆಂದರೆ ಮುಂದುವರಿಯಲು ಒಪ್ಪುತ್ತಿದ್ದನು. ಕಲಿಯುತ್ತಿದ್ದನು. ಕಲಿಸುತ್ತಿದ್ದನು. ತನಗೆ, ತನ್ನ ಸ್ವಭಾವಕ್ಕೆ ಒಗ್ಗುತ್ತಿಲ್ಲ ಎಂದರೆ ಅದರಿಂದ ಹೊರಗೆ ಬಂದುಬಿಡುತ್ತಿದ್ದನು. ಮೌಖಿಕವಾಗಿಯಷ್ಟೇ ಹರಿಯುತ್ತಿದ್ದ ವಿದ್ಯೆಯ ಮೌಲ್ಯಗಳು ಹಾಳಾಗಿದ್ದೇ ಅಕ್ಷರಗಳ ಬರವಣಿಗೆಯ ಪ್ರವೇಶದಿಂದ. ಏಕೆಂದರೆ ಒಬ್ಬ ತಾನು ಮೌಖಿಕವಾಗಿ ಪಡೆದಿದ್ದನ್ನು ಮತ್ತೊಂದು ಕಡೆಗೆ ಮೌಖಿಕವಾಗಿಯೇ ದಾಖಲಿಸುವಾಗ ಅವನು ತಪ್ಪಿದರೆ ಸಾಕ್ಷೀಕರಿಸುವವರು ಅದನ್ನು ಗುರುತಿಸಬಿಡುತ್ತಿದ್ದರು. ಅಪರಾಧಪಟ್ಟಿಯು ತಕ್ಷಣವೇ ಗೋಚರಿಸಲ್ಪಡುತ್ತಿತ್ತು, ಹೇಳುವಿಕೆಯಲ್ಲಿ ಉಂಟಾಗುವ ಎಡರುತೊಡರುಗಳಿಂದಲೇ ಅಲ್ಲಿ ಸಮಸ್ಯೆ ಉಂಟಾಗಿರುವುದು ಗೋಚರವಾಗುತ್ತಿತ್ತು, ಆದರೆ ಬರವಣಿಗೆಯ ರೂಪದಲ್ಲಿ ದಾಖಲಿಸುವುದನ್ನು ಯಾರೂ ಸಾಕ್ಷೀಕರಿಸುತ್ತಿರಲಿಲ್ಲ. ಆತನೆಲ್ಲೋ ತನ್ನ ಏಕಾಂತದಲ್ಲಿ ತನ್ನಿಷ್ಟಕ್ಕೆ ತನ್ನ ಆಶಯ ಪೂರೈಕೆಗೆ ಬರೆಯುತ್ತಿದ್ದನು. ಆತನಿಗಿರುವ ಭಾಷಾಪಾಂಡಿತ್ಯ ಪದ ಚಮತ್ಕಾರಗಳು, ವಾಕ್ಯ ರಚನಾ ವೈಖರಿಗಳು ಮುಂದಿನವರಿಗೆ ಆತನ ಸ್ವಭಾವದ ಅಭಿವ್ಯಕ್ತಿಯನ್ನು ಕಾಣಲಾಗುತ್ತಿರಲಿಲ್ಲ, ಬರವಣಿಗೆಯ ಕಡೆಗೆ ಸೆಳೆದುಹೋಗಿರುತ್ತಿದ್ದರು. ಬರೆದಿದ್ದನ್ನು ಅವರು ಸಾಗಿಸಲಾರಂಭಿಸಿದರೇ ಹೊರತು! ಬರೆದವನ ಸಹಜತೆ, ನೈಜತೆ, ಪ್ರಾಮಾಣಿಕತೆಯನ್ನು ನೋಡಲಾಗಲಿಲ್ಲ, ವಾಸ್ತವವಾಗಿ ಬರವಣಿಗೆಯಲ್ಲೂ ಬರೆದವನ ಆಶಯ, ಬುದ್ಧಿ ಪ್ರಾಮಾಣಿಕತೆ, ಸಹಜತೆಗಳನ್ನು ನೋಡಬಹುದು. ಸೂಕ್ಷ್ಮತೆಯಿಂದ ಗುರುತಿಸಬಹುದು. ಬರವಣಿಗೆ ಇಷ್ಟು ಶತಮಾನಗಳ ಕಾಲ ನಡೆದು ಬಂದಿರುವುದಕ್ಕೆ, ನಮಗೆ ಇತರ ಮೂಲಗಳಿಂದ ವಿಷಯಗಳ ಪರಿಚಯ ಮತ್ತು ತಿಳಿವಳಿಕೆ ಉಂಟಾಗಿರುವುದರಿಂದ ಅದು ಸಾಧ್ಯವಾಗುತ್ತಿದೆ. ಆದರೆ, ಆಗ, ಬರವಣಿಗೆ ಆರಂಭದ ದಿನಗಳಲ್ಲಿ, ಅದು ಬರವಣಿಗೆ ವ್ಯಾಪಕವಾಗಿ ಬಳಕೆಯಲ್ಲಿರದ ಅಂಕುರಾವಸ್ಥೆಯ ಸಮಯದಲ್ಲಿ ಸುಲಭವಾಗಿರಲಿಲ್ಲ.

ಒಟ್ಟು ಮೌಲ್ಯಾಧಾರಿತವಾಗಿ ಹೇಳುವುದಾದರೆ ಸಹಜ ಮಾತಿನಲ್ಲಿದ್ದ ಮೌಲ್ಯವು ಬರವಣಿಗೆಯ ಪ್ರಾಮಾಣಿಕತೆಯಾಗಿದ್ದರೆ ಮನುಷ್ಯನ ಮೂರು ಲೋಕಗಳು (ಮನೋ, ಭಾವ, ಇಹ) ಹದದಲ್ಲಿ ಸಮ್ಮಿಶ್ರಗೊಂಡು ಪ್ರಕೃತಿಯೊಡನೆಯೂ ಸಾಮರಸ್ಯದಿಂದ ಇರಲು ಸಾಧ್ಯವಾಗುತ್ತಿತ್ತು. ಆದರೆ, ಬರವಣಿಗೆ ಬಂದಮೇಲೆ ಮಾತಿನ ಮಹತ್ವ ಕಳೆಯಿತು. ಮಾತಿಗಿಂತ ಬರವಣಿಗೆಯನ್ನು ಅವಲಂಬಿಸಲು ಪ್ರಾರಂಭಿಸಿದ. ಸಹಜ ಮಾತಿನ ನೈಜತೆಯನ್ನು ಕಡೆಗಣಿಸಿ, ಇದಕ್ಕೆ ಶಾಸ್ತ್ರ ಪ್ರಮಾಣವೇನು? ಯಾವ ಲಿಖಿತಾಧಾರ ಎಂದು ಮನುಷ್ಯ ಪ್ರಶ್ನಿಸಲು ಪ್ರಾರಂಭಿಸಿದ. ಪ್ರಕೃತಿ ಸದಾ ನಿತ್ಯ ನೂತನವಾಗಿ ಯಾರೊಬ್ಬನ ಬಾಯಿಂದ ಯಾವುದೇ ಹೊಸತನ್ನು ಹೊರಡಿಸಿದರೂ, ಅವನು ಯಾವುದೋ ಹಳೆಯ ಲಿಖಿತದ ಆಧಾರವನ್ನು ಒದಗಿಸಬೇಕಾದಂತಹ ಸಾಮಾಜಿಕ ದೌರ್ಭಾಗ್ಯ ಎದುರಾಯಿತು. ಬರಿಯ ಮಾತನ್ನು ಒಪ್ಪದ ಜನ ಲಿಖಿತ ಕರಾರುಪತ್ರಗಳನ್ನು ನಂಬತೊಡಗಿದರು. ಅನುಮಾನಿಸುವ ರೂಢಿ ಪ್ರಾರಂಭವಾಯಿತು. ಅನುಮಾನಿಸುವುದೆಂದರೆ ಅಪಮಾನಿಸುವುದು. ಯಾವಾಗ ಮಾತುಗಳು ಅನುಮಾನಕ್ಕೆ ಕಾರಣವಾದವೋ ಮಾತಿಗಿದ್ದ ಮೌಲ್ಯಕ್ಕೆ ಅಪಮಾನವಾಗಿ ಅದು ಮುಖ ಮರೆಸಿಕೊಂಡಿತು. ಹೀಗೆ ಪ್ರಕೃತಿಯ ಸಹಜತೆಗೂ ಸಮಾಜಕ್ಕೂ ಸಂಘರ್ಷ ಪ್ರಾರಂಭವಾಯಿತು. ಪ್ರಕೃತಿಯ ಪ್ರಕೃತಿಗೆ ವಿರುದ್ಧವಾಗಿ ಸಮಾಜದಲ್ಲಿ ಅನೇಕ ಮೌಲ್ಯಗಳು ವಸ್ತುಗಳ ಮೇಲೂ ಆರೋಪಗೊಂಡವು. ಆದರಿಂದ ಮನುಷ್ಯನ ಸಹಜತೆ ಇನ್ನೂ ಕರಗತೊಡಗಿತು. ಆಗ ಸರಳವಾಗಿದ್ದ ಪ್ರಕೃತಿಯ ತಂತ್ರಗಳನ್ನೆಲ್ಲಾ ಅರಿಯಲು ಇನ್ನೂ ಕ್ಲಿಷ್ಟವಾಗತೊಡಗಿತು. ಕಷ್ಟವಾಗತೊಡಗಿತು. ■

Registered No.RNP/KA/BGS/2036/2014-16 Posted at :Bangalore-26, PSO, Mysore Road. Thursday R B P LANKESH, Kannada Weekly Price Rs. 15/- 17-08-2016 RNI No. KARKAN20

ರಂಗಿತರಂಗ ಬಳಗ ಸೇರಿದ ರಕ್ಷಿತ್

ನಟ ಕಂ ನಿರ್ದೇಶಕ ರಕ್ಷಿತ್ ಶೆಟ್ಟಿ ಈಗಾಗಲೇ 'ಕಿರಿಕ್ ಪಾರ್ಟಿ' ಚಿತ್ರದಲ್ಲಿ ಬಿಜಿ ಆಗಿದ್ದಾರೆ. ಈ ನಡುವೆ ಮತ್ತೊಂದು ಹೊಸ ಸಿನಿಮಾವನ್ನೂ ಒಪ್ಪಿಕೊಂಡಿದ್ದಾರೆ. ಹೊಸ ಸಿನಿಮಾವನ್ನು ಒಪ್ಪಿಕೊಳ್ಳಲು ಕಾರಣ 'ರಂಗಿತರಂಗ' ಸಿನಿಮಾವಂತೆ. ಹೊಸ ಚಿತ್ರವನ್ನು ನಿರ್ಮಾಣ ಮಾಡುತ್ತಿರುವುದು ಇದೇ 'ರಂಗಿತರಂಗ' ಚಿತ್ರಕ್ಕೆ ಬಂಡವಾಳ ಹಾಕಿದ್ದ ನಿರ್ಮಾಪಕ ಎಚ್.ಕೆ.ಪ್ರಕಾಶ್. ಆ ನಿರ್ಮಾಪಕರು ಮತ್ತೊಂದು ಹೊಸ ರೀತಿಯ ಕತೆಯನ್ನು ಹುಡುಕಿದ್ದಾರೆ. ಆ ಕತೆಯು ರಕ್ಷಿತ್‌ಗೆ ಪಕ್ಕಾ ಹೊಂದುತ್ತದೆಯಂತೆ. ಹೀಗಾಗಿಯೇ ಇವರನ್ನು 'ರಂಗಿತರಂಗ' ಟೀಮ್‌ಗೆ ಸೇರಿಸಿಕೊಂಡಿದ್ದಾರೆ ನಿರ್ಮಾಪಕರು.

ಸಿನಿಮಾದ ಮತ್ತೊಂದು ವಿಶೇಷತೆ ಅಂದರೆ 'ಉಳಿದವರು ಕಂಡಂತೆ' ಚಿತ್ರದಲ್ಲಿ ಸಂಕಲನಕಾರರಾಗಿ ಕೆಲಸ ಮಾಡಿದ್ದ ಸಚಿನ್, ಈ ಸಿನಿಮಾದ ಮೂಲಕ ನಿರ್ದೇಶಕರಾಗುತ್ತಿದ್ದಾರೆ. ರಕ್ಷಿತ್ ಈ ಚಿತ್ರವನ್ನು ಒಪ್ಪಿಕೊಳ್ಳಲು ಇದು ಕೂಡ ಒಂದು ಕಾರಣವಾಗಿದೆಯಂತೆ. ಈಗಾಗಲೇ ಸ್ಕ್ರಿಪ್ಟ್ ಕೆಲಸ ಪಕ್ಕಾ ಆಗಿದೆ. 'ಮಾಸ್ಟರ್‌ಪೀಸ್' ಖ್ಯಾತಿಯ ಶಾನ್ವಿ ಶ್ರೀವಾತ್ಸವ್ ಅವರನ್ನು ನಾಯಕಿಯನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಮುಂದಿನ ತಿಂಗಳಿಂದ ಶೂಟಿಂಗ್ ಶುರುವಾಗಲಿದೆಯಂತೆ.

ಸ್ಟಾರ್ ಸಿನಿಮಾದಲ್ಲಿ ತಮನ್ನಾ



ದಕ್ಷಿಣ ಭಾರತದ ನಟಿ ತಮನ್ನಾ ಭಾಟಿಯಾ ಹೆಸರು ಮತ್ತೆ ಸ್ಯಾಂಡಲ್‌ವುಡ್‌ನಲ್ಲಿ ಕೇಳಿಬರುತ್ತಿದೆ. ಕಳೆದೊಂದು ವರ್ಷದಿಂದ ಕನ್ನಡದಲ್ಲಿ ಇವರ ಹೆಸರು ಹರಿದಾಡುತ್ತಿದ್ದರೂ, ಈವರೆಗೂ ತಮನ್ನಾ ಕನ್ನಡದ ಸಿನಿಮಾದಲ್ಲಿ ನಟಿಸಿಲ್ಲ. ಆದರೂ, ಈ ಸಲ ಇವರ ಹೆಸರನ್ನು ಹೇಳುತ್ತಿದ್ದಾರೆ ನಿರ್ದೇಶಕ ಪ್ರೇಮ್. "ಈವರೆಗೂ ಏನಾಗಿದೆಯೋ ಗೊತ್ತಿಲ್ಲ. ಈ ಬಾರಿಯಂತೂ ಅವರು ನಮ್ಮ ಸಿನಿಮಾದಲ್ಲಿ ನಟಿಸಲಿದ್ದಾರೆ" ಅಂತಿದ್ದಾರೆ ಜೋಗಿ ಪ್ರೇಮ್.

ಸುದೀಪ್ ಮತ್ತು ಶಿವರಾಜ್‌ಕುಮಾರ್‌ಗಾಗಿ ಪ್ರೇಮ್ ಹೊಸದೊಂದು ಸಿನಿಮಾ ಕೈಗೆತ್ತಿಕೊಂಡಿದ್ದಾರೆ. ಚಿತ್ರಕ್ಕೆ 'ದ ವಿಲನ್' ಎಂಬ ಹೆಸರನ್ನೂ ಇಟ್ಟಿದ್ದಾರೆ. ಆಗಸ್ಟ್ 12ರಂದು ಚಾಲನೆ ಸಿಗಲಿರುವ ಚಿತ್ರಕ್ಕೆ ತಮನ್ನಾ ನಾಯಕಿಯಂತೆ. ಈಗಾಗಲೇ ಅವರ ಜತೆ ಒಂದು ಹಂತದಲ್ಲಿ ಮಾತುಕತೆ ಕೂಡ ನಡೆದಿದೆ ಎನ್ನಲಾಗುತ್ತಿದೆ. ಈ ಸಿನಿಮಾ ನಾಲ್ಕು ಭಾಷೆಗಳಲ್ಲಿ ನಿರ್ಮಾಣ ಆಗುವುದರಿಂದ, ಆಯಾ ಭಾಷೆಗೆ ಗೊತ್ತಿರುವ ನಾಯಕಿ ಬೇಕು. ಹೀಗಾಗಿ ತಮನ್ನಾ ಖಂಡಿತಾ ಸಿನಿಮಾದಲ್ಲಿ ಇರುತ್ತಾರೆ ಅನ್ನುವುದು ನಿರ್ದೇಶಕರ ಮಾತು.

ಕನ್ನಡದಲ್ಲಿ ಮಾತ್ರ ಸುದೀಪ್ ಮತ್ತು ಶಿವರಾಜ್‌ಕುಮಾರ್ ನಟಿಸಿದರೆ, ಬೇರೆ ಭಾಷೆಗಳಲ್ಲಿ ಕೊಂಚ ಬದಲಾವಣೆ ಆಗಲಿದೆ. ಅಲ್ಲದೇ ಶೂಟಿಂಗ್ ಶುರುವಾಗಲು ಇನ್ನೂ ಆರೇಳು ತಿಂಗಳಾದರೂ ಬೇಕಾಗುವುದರಿಂದ, ಇನ್ನಿತರ ಕಲಾವಿದರ ಬಗ್ಗೆ ಆ ಸಮಯದಲ್ಲಿ ಹೇಳಲಿದ್ದೇನೆ ಅಂತಾರೆ ಪ್ರೇಮ್.

ಸೂರಿ ಚಿತ್ರಕ್ಕೆ ಅನೀಶ್ ನಾಯ



ರಾಧಿಕಾ ಕುಮಾರಸ್ವಾಮಿ ಅವರ 'ಲಕ್ಕಿ' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದ ಡಾ.ಸೂರಿ, ಮತ್ತೊಂದು ಸಿನಿಮಾ ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರಕ್ಕೆ 'ಅಕಿರಾ' ಖ್ಯಾತಿಯ ಅನೀಶ್ ಲೋಕನಾಥ್ ಅವರನ್ನು ನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಅನೀಶ್ ಈ ಚಿತ್ರವನ್ನು ಒಪ್ಪಿಕೊಳ್ಳಲು ಕಾರಣ, ಯಶ್ ಅನ್ನುವುದು ವಿಶೇಷ. ಎರಡ್ಮೂರು ಸಿನಿಮಾಗಳಿಗೆ ನಿರ್ದೇಶಕರಾಗಿ ಕೆಲಸ ಮಾಡಿರುವ ಸೂರಿಗೆ, ಹೇಳಿಕೊಳ್ಳುವಂಥ ಗೆಲುವು ಸಿಕ್ಕಿಲ್ಲ. ತನ್ನ ಗೆಳೆಯನಿಗೊಂದು ಯಶಸ್ಸು ಸಿಗಲಿ ಅಂತ ಸ್ವತಃ ಯಶ್, ಅನೀಶ್‌ಗೆ ... ಮಾಡಿ ಸಿನಿಮಾ ಒಪ್ಪಿಕೊಳ್ಳುವಂತೆ ಕೇಳಿಕೊಂಡಿದ್ದಾರೆ.

ಈ ಮಧ್ಯೆ ಅನೀಶ್ ಮತ್ತೊಂದು ಅಚ್ಚರಿಯ ಸುದ್ದಿಯೊಂದನ್ನು ... ಹಾಕಿದ್ದಾರೆ. 'ಅಕಿರಾ' ನಂತರ ಬರೋಬ್ಬರಿ ಇಪ್ಪತ್ತೈದಕ್ಕೂ ಹೆಚ್ಚು ಕ... ಕೇಳಿದ್ದರಂತೆ. ಅವುಗಳಲ್ಲಿ ಯಾವುದೂ ಇಷ್ಟವಾಗದ ಕಾರಣ, ಸಿನಿಮಾರಂ... ದೂರ ಉಳಿದಿದ್ದರಂತೆ. ಸೂರಿ ಹೇಳಿದ ಕತೆ ಇಷ್ಟವಾಗಿದೆಯಂತೆ. ಆ... ಅದು ವಿಭಿನ್ನವಾಗಿಯೂ ಇದೆಯಂತೆ. ಜತೆಗೆ ಯಶ್ ಹೇಳಿದ್ದರಿಂದ, ಕತೆಯ ಮೇಲೆ ಮತ್ತಷ್ಟು ನಂಬಿಕೆ ಬಂದಿದೆಯಂತೆ. ಇವೆಲ್ಲ ಕಾರಣಗಳಿಂದಾಗಿ ಹೊಸ ಸಿನಿಮಾಗೆ ಗ್ರೀನ್‌ಸಿಗ್ನಲ್ ಕೊಟ್ಟಿದ್ದಾರೆ ಅನೀಶ್.

ಮಿಸ್ಸಿಂಗ್ ಬಾಯ್‌ಗೆ ಸಿಕ್ಕಳು ನಾಯಕಿ



'ಫಸ್ಟ್‌ರ್‍ಯಾಂಕ್ ರಾಜು' ಖ್ಯಾತಿಯ ಗುರುನಂದನ್ 'ಮಿಸ್ಸಿಂಗ್ ಬಾಯ್' ಎಂಬ ಸಿನಿಮಾ ಮಾಡುತ್ತಿರುವ ಸುದ್ದಿ ಗೊತ್ತೇ ಇದೆ. ಈ ಚಿತ್ರಕ್ಕೆ ನಾಯಕಿಯ ಹುಡುಕಾಟ ನಡೆದಿತ್ತು. ಕೊನೆಗೂ 'ಮಿಸ್ಸಿಂಗ್ ಬಾಯ್'ಗೆ ಹುಡುಗಿ ಸಿಕ್ಕಿದ್ದಾಳೆ. ಈಗಾಗಲೇ ಮಲೆಯಾಳಂ ಸಿನಿಮಾ ರಂಗದಲ್ಲಿ ಗುರುತಿಸಿಕೊಂಡಿರುವ ಅರ್ಚನಾ ಜಯಕೃಷ್ಣರನ್ನು ತಮ್ಮ ಚಿತ್ರಕ್ಕೆ ಹೀರೋಯಿನ್ ಆಗಿ ಆಯ್ಕೆ ಮಾಡಿಕೊಂಡಿದ್ದಾರೆ ನಿರ್ದೇಶಕ ರಘುರಾಮ್.



ನಾಯಕನಷ್ಟೇ ನಾಯಕಿಯ ಪಾತ್ರ ಕೂಡ ವಿಭಿನ್ನವಾಗಿದೆಯಂತೆ. ಹಾಗಾಗಿಯೇ ಅರ್ಚನಾರನ್ನು ಆಯ್ಕೆ ಮಾಡಿಕೊಂಡಿದ್ದೇವೆ ಅನ್ನುವುದು ನಿರ್ದೇಶಕರ ಮಾತು. ಈಕೆಗೆ ಇದು ಮೊದಲ ಕನ್ನಡ ಸಿನಿಮಾ. ಹುಟ್ಟಿ ಬೆಳೆದದ್ದೆಲ್ಲಾ ಕೆನಡಾದಲ್ಲಾದರೂ, ಆರು ವರ್ಷದ ಹಿಂದೆ ಇವರು ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ಗುರುನಂದನ್ ಜತೆ ನಟಿಸುತ್ತಿರುವುದಕ್ಕೆ ಸಂಭ್ರಮಿಸುತ್ತಿರುವ ಅರ್ಚನಾ "ಈ ಚಿತ್ರತಂಡವನ್ನು ಸೇರಿಕೊಳ್ಳುತ್ತಿರುವುದಕ್ಕೆ ಹೆಮ್ಮೆ ಆಗುತ್ತಿದೆ" ಅಂದಿದ್ದಾರೆ. ಈ ಸಿನಿಮಾ ನೈಜ ಘಟನೆಯೊಂದರ ಆಧಾರಿತ ಚಿತ್ರ. ಕ್ರೈಂ ಸ್ಟೋರಿ ಕಾರ್ಯಕ್ರಮದಲ್ಲಿ ಪ್ರಸಾರವಾದ ಘಟನೆಯನ್ನು ಸಿನಿಮಾ ಮಾಡುತ್ತಿದ್ದಾರೆ ನಿರ್ದೇಶಕರು. ಅಂದುಕೊಂಡಂತೆ ಆದರೆ, ಮುಂದಿನ ತಿಂಗಳಿಂದ ಸಿನಿಮಾದ ಶೂಟಿಂಗ್ ಕೂಡ ಶುರುವಾಗಲಿದೆ.

ಕಿಚ್ಚನ ಹಾದಿಯಲ್ಲಿ ರಾಗಿಣಿ



ಈವರೆಗೂ ಅಭಿಮಾನಿಯಾಗಿ ಕ್ರಿಕೆಟ್ ಮೈದಾನದಲ್ಲಿ ಕಾಣಿಸಿಕೊಳ್ಳುತ್ತಿದ್ದ ರಾಗಿಣಿ, ಇನ್ಮುಂದೆ ತಂಡವೊಂದರ ಮಾಲೀಕಳಾಗಿ ಆಟಗಾರರನ್ನು ಹುರಿದುಂಬಿಸಲಿದ್ದಾರೆ. ಕ್ರಿಕೆಟ್ ತಂಡವನ್ನು ಖರೀದಿಸುವಂಥ ಧೈರ್ಯವನ್ನು ಈವರೆಗೂ ದಕ್ಷಿಣ ಭಾರತದ ಯಾವ ನಟಿಯೂ ಮಾಡಿರಲಿಲ್ಲ, ಅಂತಹ ಸಾಹಸದ ಕೆಲಸಕ್ಕೆ ಕೈಹಾಕುವ ಮೂಲಕ ಅಚ್ಚರಿ ಮೂಡಿಸಿದ್ದಾರೆ ರಾಗಿಣಿ.

ರಾಗಿಣಿ ದ್ವಿವೇದಿ ಕರ್ನಾಟಕ ಪ್ರೀಮಿಯರ್ ಲೀಗ್‌ನ ಬಳ್ಳಾರಿ ಟಸ್ಕರ್ಸ್ ತಂಡವನ್ನು ಕೊಂಡಿದ್ದರೆ, ಸುದೀಪ್ ಶಿವಮೊಗ್ಗ ತಂಡದ ಒಡೆಯ. "ಕ್ರಿಕೆಟ್ ನನ್ನ ನೆಚ್ಚಿನ ಪಂದ್ಯ. ಮೊದಲಿನಿಂದಲೂ ನಾನು ಪಂದ್ಯವನ್ನು ವೀಕ್ಷಿಸಲು ಹೋಗುತ್ತಿದ್ದೆ. ನೆಚ್ಚಿನ ಆಟಗಾರ ಅಂದರೆ ವಿರಾಟ್ ಕೊಹ್ಲಿ. ಈ ತಂಡವನ್ನು ಖರೀದಿಸಲು ಮತ್ತೊಂದು ಕಾರಣ, ತಂಡದಲ್ಲಿರುವ ಬಹುತೇಕರು ನನಗೆ ಪರಿಚಯ ಇರುವವರು. ಹೀಗಾಗಿಯೇ ಖರೀದಿಸುವ ಮನಸು ಮಾಡಿದೆ" ಅಂದಿದ್ದಾರೆ ರಾಗಿಣಿ.

ಈ ಸರಣಿಯಿಂದ ಬರುವ ಧನಲಾಭವನ್ನು ಸಾಮಾಜಿಕ ಕಾರ್ಯಗಳಿಗೆ ಬಳಸಲು ನಿರ್ಧರಿಸಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com